ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೧ ಮೇ - ೨೦೧೧ ಸಂಚಿಕೆ - ೧೦



ಪಾಂಚಜನ್ಯ ಊದಿದ್ದಾರೆ !

ಜನಪದ ವಿಚಾರದಲ್ಲಿ

ಮೇ - ೨೦೧೧

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮೇ - ೨೦೧೧
ಸಂಪುಟ - ೧೧
ಸಂಚಿಕೆ - ೧೦

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಅಂತರ್ಯಾಮಿಗೆ

ವಿಕಸಿತಮಾಡೆನ್ನಾಂತರ್ಯವನು
ಅಂತರ್ಯಾಮಿಯೇ ಹೇ,
ನಿರ್ಮಲವಾಗಿಡು, ಉಜ್ವಲಮಾಡು
ಸುಂದರವಾಗಿಡು ಹೇ,
ಜಾಗೃತವಾಗಿಡು, ನಿರ್ಭಯನಾಗಿಡು
ಉದ್ಧರಿಸೆನ್ನನು ಹೇ,
ಮಂಗಲ ಕೊಡು, ನಿಸ್ಸಂಶಯನಾಗಿಡು,
ವಿಕಸಿತಮಾಡೆನ್ನಾಂತರ್ಯವನು
ಅಂತರ್ಯಾಮಿಯೇ ಹೇ,

ಸರ್ವಸಂಗವನು ಸಮರಸವಾಗಿಸು
ಮುಕ್ತಿಯ ಕೊಡು ಹೇ ಬಂಧು
ಸಕಲ ಕರ್ಮವನು ಸಂಹರಿಸೋ ಗುರು
ನೆಮ್ಮದಿ ನಿನ್ನಯ ಛಂದ.
ಚರಣ ಕಮಲದಲ್ಲಿ ನಿಲ್ಲಿಸು ಚಿತ್ತವ;
ನಂದಿತನಾಗಿಡು, ನಂದಿತನಾಗಿಡು
ಆನಂದಿತನಾಗಿಡು ಹೇ,
ವಿಕಸಿತಮಾಡೆನ್ನಾಂತರ್ಯವನು
ಅಂತರ್ಯಾಮಿಯೇ ಹೇ.

- ರವೀಂದ್ರನಾಥ ಟಾಗೋರ್

ವಿಚಾರ ದೀಪ್ತಿ

ರಸ್ತೆ ಬದಿ ಮರಗಳ ರಕ್ಷಣೆ

ಈಚಿನ ವರ್ಷಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ರಸ್ತೆ ವಿಸ್ತರಣೆ ಕಾಮಗಾರಿಯಿಂದ ಹೆಚ್ಚಿನ ಹಾನಿಯಾಗಿರುವುದು ಪರಿಸರಕ್ಕೆ. ಅಗಲಗೊಳಿಸುವುದಕ್ಕೆ ಎರಡೂ ಬದಿ ಇರುವ ಮರಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿದು ಹಾಕಿರುವುದರಿಂದ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ದೂರ ಪ್ರಯಾಣ ಮರುಭೂಮಿಯಲ್ಲಿ ಸಾಗಿದ ಅನುಭವ ನೀಡುತ್ತದೆ. ರಾಜ್ಯದ ಹೆದ್ದಾರಿಗಳಲ್ಲಿ ನೂರಾರು ವರ್ಷಗಳಿಂದ ತಂಪು ನೀಡುತ್ತಿದ್ದ ಸಾವಿರಾರು ಮರಗಳನ್ನು ರಸ್ತೆ ವಿಸ್ತರಣೆಗಾಗಿ ಕಡಿದಿರುವುದರಿಂದ ಹವಾಮಾನ ವೈಪರೀತ್ಯಕ್ಕೂ ಕಾರಣವಾಗಿದೆ. ಮರಗಳನ್ನು ಕಡಿಯುವುದಕ್ಕೆ ಸಂಬಂಧಿಸಿ ಅರಣ್ಯ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗಳು ನಿಯಮಗಳನ್ನು ರೂಪಿಸಿಕೊಂಡಿವೆಯಾದರೂ ಅವು ಸರಿಯಾಗಿ ಪಾಲನೆಯಾಗುತ್ತಿರುವ ಬಗ್ಗೆ ವಿಶ್ವಾಸ ಮೂಡುತ್ತಿಲ್ಲ. ಒಂದು ಮರ ಕಡಿದರೆ ಎರಡು ಮರ ಬೆಳೆಸುವಂಥ ಪರಿಸರ ಪ್ರೀತಿಯನ್ನು ಅರಣ್ಯ ಇಲಾಖೆಯೊಂದಿಗೆ ಇತರೆ ಸರ್ಕಾರಿ ಇಲಾಖೆಗಳು ಪ್ರದರ್ಶಿಸಬೇಕು. ಇಲ್ಲದಿದ್ದರೆ ಪರಿಸರ ನಾಶಕ್ಕೆ ಸರ್ಕಾರವೇ ಕುಮ್ಮಕ್ಕು ಕೊಟ್ಟಂತಾಗುತ್ತದೆ. ರಾಜ್ಯದ ಹೆದ್ದಾರಿಗಳನ್ನು ವಿಸ್ತರಿಸಿದ ನಂತರ ಎರಡೂ ಬದಿ ಮರಗಳನ್ನು ಬೆಳಸುವ ನಿರ್ಧಾರವನ್ನು ರಾಜ್ಯದ ಅರಣ್ಯ ಸಚಿವರು ಪ್ರಕಟಿಸಿರುವುದು ಈ ದಿಸೆಯಲ್ಲಿ ಇಟ್ಟ ಪ್ರಮುಖ ಹೆಜ್ಜೆ. ಈಗಾಗಲೇ ವಿಸ್ತರಣೆಯಾದ ರಾಷ್ಟ್ರೀಯ ಹೆದ್ದಾರಿಗಳ ಎರಡೂ ಬದಿ ಮರಗಳನ್ನು ಬೆಳೆಸುವುದಕ್ಕೆ ಕೇಂದ್ರ ಲೋಕೋಪಯೋಗಿ ಇಲಾಖೆಗೆ ಅರಣ್ಯ ಸಚಿವರು ನೀಡಿರುವ ಎಚ್ಚರಿಕೆಯೂ ಸೂಕ್ತವಾದ ಕ್ರಮವೇ. ಮೂರು ತಿಂಗಳ ಅವಧಿಯಲ್ಲಿ ಹೆದ್ದಾರಿಗಳ ಎರಡೂ ಬದಿ ಮರಗಳನ್ನು ಬೆಳೆಸುವ ಪ್ರಕ್ರಿಯೆ ಆರಂಭಿಸದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವ ಸಚಿವರ ಎಚ್ಚರಿಕೆ ಕೇವಲ ಹೇಳಿಕೆಯ ಮಟ್ಟದಲ್ಲಿ ಉಳಿಯಬಾರದು. ಜಾರಿಗೆ ಬರುವಂತಾಗಬೇಕು.

ಅಷ್ಟಕ್ಕೂ ಹೆದ್ದಾರಿ ವಿಸ್ತರಣೆ ಕಾಲದಲ್ಲಿ ಎರಡೂ ಬದಿ ಮರಗಳನ್ನು ಕಡಿಯುವುದು ಅನಿವಾರ್ಯವೇ ಎಂಬ ವಿವೇಚನೆಯನ್ನೂ ಲೋಕೋಪಯೋಗಿ ಅಧಿಕಾರಿಗಳು ಪ್ರದರ್ಶಿಸಬೇಕು. ಮರಗಳನ್ನು ತೆರವು ಮಾಡಲೇಬೇಕೆಂದಿದ್ದರೆ ಒಂದು ಬದಿಯಲ್ಲಿ ಮಾತ್ರ ಮಾಡಿ ರಸ್ತೆಗಳನ್ನು ವಿಸ್ತರಿಸುವ ಸಾಧ್ಯತೆಯನ್ನು ಪರಿಶೀಲಿಸಬೇಕು, ಹೆದ್ದಾರಿಗಳಲ್ಲಿ ಮಾತ್ರವಲ್ಲದೆ, ನಗರಗಳ ರಸ್ತೆ ಬದಿಯ ಮರಗಳನ್ನು ಕಡಿಯುವುದರಲ್ಲಿ ಸರ್ಕಾರಿ ಇಲಾಖೆಗಳ ಸಿಬ್ಬಂದಿಯಲ್ಲಿ ಜಾಗೃತಿ ಮೂಡಿಸುವ ಅವಶ್ಯಕತೆಯೂ ಇದೆ. ಅವರು ಮರಗಳ ವಿಷಯದಲ್ಲಿ ನಿಷ್ಕರುಣೆಯಿಂದ ವರ್ತಿಸುತ್ತಾರೆ ಎಂಬುದು ಸಾರ್ವಜನಿಕರ ದೂರು. ವಿದ್ಯುತ್ ತಂತಿಗಳಿಗೆ ಅಡ್ಡ ಬರುವುದನ್ನು ತಪ್ಪಿಸುವ ನೆಪದಲ್ಲಿ ಮರಗಳ ಕೊಂಬೆ-ರೆಂಬೆಗಳನ್ನು ಸವರುವಾಗ ನಾಜೂಕತನವನ್ನು ಪ್ರದರ್ಶಿಸುವುದಿಲ್ಲ. ಮರಗಳಲ್ಲಿ ಹಕ್ಕಿಗಳು ಗೂಡು ಕಟ್ಟಿರುವುದನ್ನು ಲಕ್ಷಿಸುವುದಿಲ್ಲ. ಅವುಗಳ ರಕ್ಷಣೆಯ ಚಿಂತನೆಯನ್ನೂ ಮಾಡುವುದಿಲ್ಲ. ರಸ್ತೆ ಬದಿ ಮರಗಳನ್ನು ಸವರುವ ನೆಪದಲ್ಲಿ ಉರುವಲು ಕಟ್ಟಿಗೆಯನ್ನೂ ಸಂಗ್ರಹಿಸುವ ಹುನ್ನಾರವೂ ಇರುತ್ತದೆ. ಇದನ್ನು ಅರಣ್ಯ ಸಚಿವರು ಗಂಭೀರವಾಗಿ ಪರಿಗಣಸಬೇಕು. ರಸ್ತೆ ವಿಸ್ತರಣೆಯ ಯಾವುದೇ ಯೋಜನೆ ಮರಗಳನ್ನು ಉಳಿಸಿಕೊಳ್ಳುವುದಕ್ಕೆ ಆದ್ಯತೆ ನೀಡಬೇಕು. ಕಡಿಯುವುದು ಸುಲಭ, ಬೆಳೆಸುವುದು ಕಷ್ಟ ಎಂಬ ಪ್ರಾಥಮಿಕ ಸಂಗತಿಯ ಅರಿವು ಸರ್ಕಾರಕ್ಕೆ ಇರಬೇಕು.

(ಸಾಭಾರ : ಪ್ರಜಾವಾಣಿ)

* * *

ಅಣ್ಣಾ ಹಜಾರೆ, ಪಾಂಚಜನ್ಯ ಊದಿದ್ದಾರೆ.

– ಸುರೇಂದ್ರ ಕೌಲಗಿ

ಮಹಾಭಾರತ ಯುದ್ಧ ಕಾಲದಲ್ಲಿ ಶ್ರೀ ಕೃಷ್ಣ ಪಾಂಚಜನ್ಯವೆಂಬ ತನ್ನ ದಿವ್ಯ ಶಂಖವನ್ನು ಊದಿದ್ದ. ಆಧುನಿಕ ಭಾರತದಲ್ಲಿ ಭ್ರಷ್ಟಾಚಾರವೇ ಶಿಷ್ಟಾಚಾರವಾಗಿರುವ ಕಾಲದಲ್ಲಿ ಸಾಮಾಜಿಕ ಹಿತ ಚಿಂತನೆಯ ಅಣ್ಣಾ ಹಜಾರೆ ಸತ್ಯಾಗ್ರಹವೆಂಬ ಪಾಂಚಜನ್ಯ ಊದಿದ್ದಾರೆ. ಕುರುಕ್ಷೇತ್ರದ ರಣಾಂಗಣದಲ್ಲಿ ಪಾಂಚಜನ್ಯದ ಅಸಾಧಾರಣ ಧ್ವನಿಯನ್ನು ಕೇಳುತ್ತಿದ್ದಂತೆಯೇ ಪಾಂಡವರ ಪಾಳಯದಲ್ಲಿ ವಿಜಯೋತ್ಸಾಹದ ಅಲೆಗಳೆದ್ದವು; ಕೌರವರ ಪಾಳಯದಲ್ಲಿ ಯಾವುದೋ ಒಂದು ಭೀಕರ ಭವಿಷ್ಯದ ಭಯದ ಅಲೆಗಳೆದ್ದವು. ಎರಡೂ ಪಾಳಯದ ನಾಯಕರು ಕ್ಷಣಕಾಲ ಸ್ತಂಭೀಭೂತರಾದರು. ಪಾಂಡವರು ಜೂಜಾಟವಾಡಿ ಎಲ್ಲವನ್ನೂ ಕಳೆದುಕೊಂಡಿದ್ದರು. ತಮ್ಮ ನೈತಿಕತೆಯನ್ನೂ ಕಳೆದುಕೊಂಡಿದ್ದರು. ಅರಣ್ಯವಾಸವಲ್ಲದೆ ಬೇರೆ ಗತಿಯಿಲ್ಲದವರಾಗಿದ್ದರು, ಧರ್ಮನಿಷ್ಠತೆ, ಸತ್ಯಸಂಧತೆ ಮುಂತಾದ ಶಕ್ತಿದಾಯಯಕ ನೈತಿಕ ಗುಣಗಳಿಂದ ಯಾವ ಯುಧಿಷ್ಠಿರನ ರಥ ಭೂಮಿಯಿಂದ ಒಂದೆರಡು ಅಡಿ ಎತ್ತರದ ಮೇಲೆ ಸಾಗುತ್ತಿತ್ತೋ ಅಂಥ ರಥ ಒಂದು ಸುಳ್ಳು ಹೇಳಿ ತನ್ನ ಗುರು ದ್ರೋಣರಿಗೆ ಅಪಚಾರವೆಸಗಿದ್ದಕ್ಕಾಗಿ ದೊಪ್ಪನೆ ಭೂಮಿಗೆ ಬಂದಿಳಿಯಿತು! ಕೌರವರ ಸೈನ್ಯ ಬಲ ಹೆಚ್ಚಾಗಿದ್ದರೂ, ಭೀಷ್ಮ, ದ್ರೋಣರಂಥ ಅತಿರಥ–ಮಹಾರಥರು ಅವರ ಪರವಾಗಿ ಹೋರಾಡಲು ನಿಂತಿದ್ದರೂ ಅದೇಕೋ ಕೌರವ ನಾಯಕ ದುರ್ಯೋಧನ (ಸುಯೋಧನ) ಆತ್ಮವಿಶ್ವಾಸ ಕಳೆದುಕೊಂಡಿದ್ದ; ಮುಖ ನಿಃಸ್ತೇಜಗೊಂಡಿತ್ತು.

ಮಹಾಭಾರತದ ಇಂಥದೇ ಒಂದು ಪರಿಸ್ಥಿತಿ ಸ್ವತಂತ್ರ ಭಾರತದ ಅರವತ್ತರ ದಶಕಗಳಲ್ಲಿ ಕಾಣಿಸಿಕೊಂಡಿದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ರಾಷ್ಟ್ರ ನಿರ್ಮಾಣದ ಕಾರ್ಯ ಭರದಿಂದ ಸಾಗಿದೆ. ಅದನ್ನು ಅಭಿವೃದ್ಧಿಯೆಂದೂ ಕರೆಯಲಾಗುತ್ತಿದೆ. ಅಭಿವೃದ್ಧಿಯ ಈ ಪ್ರಕ್ರಿಯೆಯಲ್ಲಿ ಒಂದು ಪಾಳಯದಲ್ಲಿ ಕೇವಲ ಸರ್ಕಾರವಿದೆ. ಇನ್ನೊಂದು ಪಾಳಯದಲ್ಲಿ ೧೨೨ ಕೋಟಿ ಶ್ರೀಸಾಮಾನ್ಯರಿದ್ದಾರೆ! ಸಂವಿಧನಾತ್ಮಕವಾಗಿ ಇರುವ ಸರ್ಕಾರವೊಂದೆಯಾದರೂ ಅದರ ಪಿಡುಗು ಅರವತ್ತುಮೂರು ವರ್ಷಗಳಲ್ಲಿ ಎಷ್ಟು ಹೆಚ್ಚಾಗಿದೆಯೆಂದರೆ ಸಾಮಾನ್ಯ ಜನರು ಜೀವನ ನಡೆಸುವುದೇ ಕಷ್ಟವಾಗಿದೆ. ಜೀವನಾವಶ್ಯಕ ಪದಾರ್ಥಗಳೆಲ್ಲದರ ಬೆಲೆ ಗಗನ ಮುಟ್ಟಿದೆ. ಊಟ ಮಾಡುವುದು ಆರ್ಥಿಕವಾಗಿ ಭಾರವೆನಿಸುತ್ತಿದೆ; ಮನೆ ಕಟ್ಟುವುದು ಆರ್ಥಿಕವಾಗಿ ಅಪರಾಧವೆನಿಸುತ್ತಿದೆ; ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡುವುದು ಸಾಮಾಜಿಕವಾಗಿ ತಪ್ಪೆಂದೆನಿಸುತ್ತಿದೆ. ಸರ್ಕಾರದಲ್ಲಿ ಜನರ ಯಾವ ಕೆಲಸವೂ ಸುಲಲಿತವಾಗಿ ಆಗುತ್ತಿಲ್ಲ. ಕಂಬ ಸುತ್ತುವುದೇ ಒಂದು ಕೆಲಸವಾಗಿದೆ. ಜನತೆಯ ಪ್ರತಿನಿಧಿಯೆಂದು

ಹೇಳಿಕೊಳ್ಳುವ ರಾಜಕೀಯ ಪಕ್ಷಗಳು ಜನರಿಗೆ ಮೋಸಮಾಡುತ್ತಿವೆ; ಜಾತಿ ಮತ್ತು ಧರ್ಮದ ಹೆಸರಿನಲ್ಲಿ ದೇಶದ ಪ್ರಜೆಗಳು ಪರಸ್ಪರ ಕಚ್ಚಾಡುವಂತೆ ಮಾಡುತ್ತಿವೆ. ಸರ್ಕಾರದ ಒಟ್ಟು ಆದಾಯದಲ್ಲಿ ಶೇಕಡಾ ಅರವತ್ತಕ್ಕೂ ಹೆಚ್ಚು ಭಾಗವನ್ನು ತಮ್ಮ ವೇತನಕ್ಕಾಗಿಯೇ ಪಡೆಯುತ್ತಿರುವ ಸರ್ಕಾರದ ಶಾಸಕರು ಜನತೆಯನ್ನು ಕಾಲ್ಗಸ ಮಾಡಿದ್ದಾರೆ. ದೊರೆಯವರೆಗೆ ದೂರು ಒಯ್ದರೂ ನ್ಯಾಯ ದೊರೆಯದಂತಾಗಿದೆ. ನ್ಯಾಯಸ್ಥಾನಗಳು ಇದ್ದರೂ ಇಲ್ಲದಂತಿವೆ. ಸರ್ಕಾರದ ಆರ್ಥಿಕ ನೀತಿ, ಶಿಕ್ಷಣ ನೀತಿ ದೇಶವನ್ನು ಎರಡುಭಾಗವನ್ನಾಗಿ ಮಾಡಿವೆ. ಒಂದು ಭಾಗ ಬಡವರ ಭಾರತವಾದರೆ, ಇನ್ನೊಂದು ಭಾಗ ಶ್ರೀಮಂತರ ಭಾರತವಾಗಿದೆ. ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಸಮತೋಲನವಿಲ್ಲವಾಗಿದೆ. ಹಿಂಸಾಚಾರ, ಆತ್ಮಹತ್ಯ, ಮುಂತಾದವುಗಳು ಸಾಮಾನ್ಯವಾಗಿವೆ. ಯಾವುದೇ ಸಮಸ್ಯೆಯ ಪರಿಹಾರಕ್ಕಾಗಿ ಧರಣಿ, ಉಪವಾಸ, ರಸ್ತೆತಡೆ, ಘೇರಾವ್ ಮುಂತಾದ ಕಾನೂನು ವಿರೋಧಿ ಕ್ರಮಗಳನ್ನೇ ಜನರು ಕೈಗೊಳ್ಳಬೇಕಾಗಿದೆ. ಇವು ಯಾವುದೇ ಸುಸಂಸ್ಕೃತ ಸಮಾಜದ ನಡತೆಯಲ್ಲ; ಅಲ್ಲದೆ, ಪ್ರಜಾತಂತ್ರ ವ್ಯವಸ್ಥೆಗೆ ಮಾರಕವಾದುದೂ ಆಗಿದೆ. ಇಷ್ಟೆಲ್ಲ ದುಷ್ಪರಿಣಾಮಗಳಿಗೆ ಕಾರಣ ಸರ್ಕಾರದಲ್ಲಿಯ ಭ್ರಷ್ಟಾಚಾರ. ಅದು ದೇಶವ್ಯಾಪಿಯಾಗಿದೆ. ಸರ್ಕಾರದ ಬಳಿ ಯಾವ ನೈತಿಕ ಶಕ್ತಿಯೂ ಇಲ್ಲವಾಗಿದೆ. ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಅದರ ಬಳಿ ಇರುವ ಏಕೈಕ ಸಾಧನ ಬಂದೂಕು ಮತ್ತು ಲಾಠಿ.

ಸತ್ಯಮೇವ ಜಯತೆ ಎಂಬ ಉದ್ಘೋಷವನ್ನು ಮರೆತ ಸರ್ಕಾರ ಒಂದು ಕಡೆಗೆ ಇದೆ. ಸತ್ಯ ಮತ್ತು ನ್ಯಾಯವನ್ನು ಬೇಡುವ ಜನತೆ ಇನ್ನೊಂದು ಕಡೆ ಇದೆ. ಇಂಥ ಸಂದರ್ಭದಲ್ಲಿ ಅಂದರೆ ರಾಜ್ಯಶಕ್ತಿಗಿಂತ ಮಿಗಿಲಾದದ್ದು ಜನಶಕ್ತಿ ಎಂಬುದನ್ನು ತೋರಿಸಲು ಅಣ್ಣಾ ಹಜಾರೆ ಪಾಂಚಜನ್ಯ ಊದಿದ್ದಾರೆ.

ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀ, ನೆಹರೂ, ಪಟೇಲ್ ಮುಂತಾದ ಕೆಲವೇ ನಾಯಕರು ರಾಜಕೀಯ ವೇದಿಕೆಯ ಮೇಲೆ ಕಾಣಿಸುತ್ತಿದ್ದರು. ಭ್ರಷ್ಟಾಚಾರವೆಂಬ ಶಬ್ದ ತೀರ ಅಪರಿಚಿತವಾಗಿತ್ತು. ಗಾಂಧೀ ತಮ್ಮ ಹದಿನೇಳು ಉಪವಾಸಗಳ ಮೂಲಕ ದೇಶದ ಜನಜೀವನವನ್ನು ನೈತಿಕ ನೆಲೆಗಟ್ಟಿನ ಮೇಲೆ ನಿಲ್ಲಿಸಿದ್ದರು. ಜನರ ಜೀವನ ಸರಳವಾಗಿತ್ತು. ಕೇವಲ ಬ್ರಿಟಿಷ್ ಅಧಿಕಾರಿಗಳ ದುಂದುಗಾರಿಕೆ, ಅಟ್ಟಹಾಸ ನಡೆಯುತ್ತಿತ್ತು. ನ್ಯಾಯಾಂಗ ವ್ಯವಸ್ಥೆ ಜನರಲ್ಲಿ ಭೀತಿಯನ್ನಿರಿಸಿತ್ತು. ಮಳೆ-ಬೆಳೆ ಸಾಮಾನ್ಯವಾಗಿ ಸಮತೋಲವಾಗಿತ್ತು. ಅಭಿವೃದ್ಧಿಯೆಂಬ ಬಕಾಸುರನ ಜನನ ಇನ್ನೂ ಆಗಿರಲಿಲ್ಲ. ಪ್ರಾದೇಶಿಕ ಭಾಷೆಗಳು ಸ್ವಚ್ಛಂದವಾಗಿ ಬೆಳೆಯುತ್ತಿದ್ದವು. ಭಾರತ ದೇಶ ಒಟ್ಟಾರೆ ಸುಖೀ ದೇಶವಾಗಿತ್ತು.

೧೯೪೭, ಸ್ವಾತಂತ್ರ್ಯ ಬಂತು. ಅದರೊಂದಿಗೆ ನೂರಾರು ಸಮಸ್ಯೆಗಳೂ ಬಂದವು. ಚುನಾವಣೆಗಳ ಪ್ರಕ್ರಿಯೆ ಶುರುವಾಯಿತು. ಅದರೊಂದಿಗೆ ರಾಜಕೀಯ ಪಕ್ಷಗಳ ಮೇಲಾಟವೂ ಶುರುವಾಯಿತು. ಅಧಿಕಾರಿಗಳು ಭ್ರಷ್ಟರಾದರು; ಮತದಾರನೆಂಬ ಹಣೆಪಟ್ಟಿಯ ಜನರೂ ಭ್ರಷ್ಟರಾದರು. ಆಡಳಿತದ ಅಂಗ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳೂ ಭ್ರಷ್ಟವಾದವು. ಗಂಗೆ-ತುಂಗೆ-ಯಮುನೆ-ಕಾವೇರಿ-ಗೋದಾವರಿ ನದಿಗಳ ನೀರು ಕಲುಷಿತವಾಯಿತು, ಕೇರಳದ

ಶಾಂತ ಕಣಿವೆಯಲ್ಲಿ ಅಶಾಂತಿ ಉಂಟಾಯಿತು; ಸಹ್ಯಾದ್ರಿ ನಲುಗಲಾರಂಭಿಸಿತು: ವಿಂಧ್ಯ ಲೆಕ್ಕಕ್ಕಿಲ್ಲದಂತಾಯಿತು; ಗ್ರಾಮಗಳ ಎದೆಯ ಮೇಲೆ ನಗರಗಳೆದ್ದವು; ಗ್ರಾಮೋದ್ಯೋಗ-ಕುಟೀರೋದ್ಯೋಗಗಳು ಅರಣ್ಯವಾಸಿಗಳಾದವು; ಪ್ರಾದೇಶಿಕ ಭಾಷೆಗಳ ಮೇಲೆ ಇಂಗ್ಲಿಷ್ ಭಾಷೆಯೆಂಬ ರೋಡ್‌ರೋಲರ್ ಉರುಳಾಡಿತು. ರಾಜಕೀಯ ವೇದಿಕೆಯ ಮೇಲೆ ಅಧಿಕಾರ ದಾಹ ನಿವಾರಿಸಿಕೊಳ್ಳಲು ರಾಜಕಾರಣಿಗಳ ಸಂತೆಯೇ ಸೇರಿತು. ಸರ್ಕಾರದ ಅಧಿಕೃತ ನಾಣ್ಯ ಮೂಲೆಗುಂಪಾಯಿತು; ಕಪ್ಪು ಹಣ ಚಲಾವಣೆಗೆ ಬಂತು; ದಿನ ನಿತ್ಯದ ವ್ಯವಹಾರದಲ್ಲಿ ನೂರು-ಸಾವಿರ ಎಂಬ ಅಂಕಿಗಳು ಮಾಯವಾಗಿ ಲಕ್ಷ-ಕೋಟಿ ಎಂಬ ಅಂಕಿಗಳು ಚಲಾವಣೆಗೆ ಬಂದವು. ಹಣದುಬ್ಬರ, ಪದಾರ್ಥಗಳ ಬೆಲೆಯುಬ್ಬರ, ತರಕಾರಿಗಳ ಬೆಲೆಯುಬ್ಬರಗಳಿಂದಾಗಿ ಸಾಮಾನ್ಯ ಜನರ ಜೀವನ ಅತಿ ಕಷ್ಟದಾಯಕವಾಯಿತು. ಉಚ್ಚನ್ಯಾಯಾಲಯದ ನ್ಯಾಯಾಧೀಶನಿಂದ ಹಿಡಿದು ಗ್ರಾಮ ಪಂಚಾಯ್ತಿಯ ಗುಮಾಸ್ತನವರೆಗೆ; ಓರ್ವ ಪಂಚಾಯ್ತಿ ಸದಸ್ಯನಿಂದ ಹಿಡಿದು ಮುಖ್ಯಮಂತ್ರಿಯವರೆಗೆ, ಪೌರಕಾರ್ಮಿಕನಿಂದ ಹಿಡಿದು ದೊಡ್ಡ ಗುತ್ತಿಗೆದಾರನವರೆಗೆ, ಎಲ್ಲರೂ ಭ್ರಷ್ಟಾಚಾರವನ್ನೇ ಪ್ರೀತಿಸಲಾರಂಭಿಸಿದರು! ಭ್ರಷ್ಟಾಚಾರವೆಂಬುದು ದಿನನಿತ್ಯ ವ್ಯವಹಾರದ ಸಾಮಾನ್ಯ ಸಂಗತಿಯಾಯಿತು. ಆಟಗಾರರೂ ಭ್ರಷ್ಟರಾದರು, ಕಲಾಕಾರರೂ ಭ್ರಷ್ಟರಾದರು; ಮಾಧ್ಯಮದವರೂ ಭ್ರಷ್ಟರಾದರು; ಶಿಕ್ಷಕರೂ ಭ್ರಷ್ಟರಾದರು, ವಿದ್ಯಾರ್ಥಿಗಳೂ ಭ್ರಷ್ಟರಾದರು.

ಭ್ರಷ್ಟಾಚಾರ ಕೇವಲ ಹಣಕಾಸಿಗೆ ಮಾತ್ರ ಸೀಮಿತವಾಗಲಿಲ್ಲ ಅದು ದೇಶದ ಜನರ ರಕ್ತ ಧಮನಿಗಳಲ್ಲಿ ಪ್ರವಹಿಸಲಾರಂಭಿಸಿತು. ದೇಶದ ೧೨೦ ಕೋಟಿ ಜನರಲ್ಲಿ ಭ್ರಷ್ಟರಲ್ಲದವರಾರು ಎಂದು ಕೇಳುವ ಸ್ಥಿತಿ ಬಂತು. ಎಲ್ಲರೂ ಕಾಯಾ-ವಾಚಾ-ಮನಸಾ ಭ್ರಷ್ಟರಾಗಿರುವರೇನೋ ಎಂಬ ಸಂದೇಹ ಆತ್ಮಸಾಕ್ಷಿಯುಳ್ಳವರನ್ನು ಕಾಡಲಾರಂಭಿಸಿತು. ಒಂದಾದ ಮೇಲೆ ಒಂದು ಭ್ರಷ್ಟಾಚಾರದ ಸರಮಾಲೆಯೇ ಬೆಳಕಿಗೆ ಬರಲಾರಂಭಿಸಿದವು. ಇದರಿಂದಾಗಿ ಜನರು ಸಂವಿಧಾನಾತ್ಮಕ ರಾಜಕೀಯ ವ್ಯವಸ್ಥೆಯಲ್ಲಿಯ ನಂಬಿಕೆಯನ್ನು ಕ್ರಮೇಣ ಕಳೆದು ಕೊಳ್ಳಲಾರಂಭಿಸಿದರು. ದೇಶದ ಪತ್ರಿಕೆಗಳಲ್ಲಿ ಬುದ್ಧಿಜೀವಿಗಳು ಭ್ರಷ್ಟಾಚಾರ ಕುರಿತಾಗಿ ಲೇಖನಗಳನ್ನು ಬರೆಯಲಾರಂಭಿಸಿದರು. ದೇಶದ ರಕ್ಷಣೆಯನ್ನು ಬಲಿಕೊಟ್ಟು ರಕ್ಷಣಾ ಇಲಾಖೆಯಲ್ಲಿಯೂ ಭ್ರಷ್ಟಾಚಾರ ಮೆರೆಯಲಾರಂಭಿಸಿತು.

ಇಡೀ ದೇಶವೇ ಭ್ರಷ್ಟಾಚಾರವೆಂಬ ಜ್ವಾಲಾಮುಖಿ ಪರ್ವತದ ಮೇಲೆ ಕುಳಿತಿರುವಂಥ ಸ್ಥಿತಿ ಉಂಟಾಯಿತು.

(ಈ ದುರಂತಾತ್ಮಕ ಸ್ಥಿತಿ ಒಂದು ದಿನದಲ್ಲಿ ಆದುದಲ್ಲ. ಸ್ವಾತಂತ್ರ್ಯ ಬಂದ ದಿನದಿಂದ ಇಂದಿನವರೆಗೆ ಅಂದರೆ ಅರವತ್ತುಮೂರು ವರ್ಷಗಳಿಂದ ನಿಧಾನವಾಗಿ ಮತ್ತು ಕಾಲ ಕಳೆದಂತೆ ಮತ್ತು ರಾಜಕೀಯ ಪಕ್ಷಗಳ ನೈತಿಕ ದಿವಾಳಿತನ ಹೆಚ್ಚಾಗುತ್ತ ಹೋದಂತೆ ಉಂಟಾದುದು.)

ದೇಶಕ್ಕೆ ಸ್ವಾತಂತ್ರ್ಯ ಬಂದುದು ಕೂಡ ದಿಢೀರನೆ ಅಲ್ಲ. ೧೮೫೭ರ 'ಮೊದಲ ಸ್ವಾತಂತ್ರ್ಯ ಸಂಗ್ರಾಮ'ದಿಂದ ಪ್ರಾರಂಭಿಸಿ ೧೯೪೨ರ 'ಭಾರತ ಬಿಟ್ಟು ತೊಲಗಿ' ಎಂಬ ಆಂದೋಲನದವರೆಗೆ ನಡೆದ ನೂರಾರು ಹೋರಾಟಗಳ ಫಲವಾಗಿ

೧೯೪೭ ರಲ್ಲಿ ಸ್ವಾತಂತ್ರ್ಯ ದೊರೆಯಿತು. ಆ ಎಲ್ಲ ಹೋರಾಟಗಳ ಪರಿಣಾಮವಾಗಿ ಭಾರತೀಯರೆಲ್ಲರಲ್ಲಿ ಸ್ವಾತಂತ್ರ್ಯದ ಹಂಬಲ ಪ್ರಬಲವಾಗಿ ಬೆಳೆಯುತ್ತ ಬಂತು. ೧೯೪೨ರ ವೇಳೆಗೆ ಅದು ಸ್ಫೋಟವಾಗುವ ಸಮಯ ಬಂತು. ಇದನ್ನರಿತ ಮಹಾತ್ಮಾ ಗಾಂಧೀ ೧೯೪೨ ರಿಂದ ೧೯೪೭ರ ವರೆಗೆ ಅಹಿಂಸಾತ್ಮಕವಾದ ಚಳುವಳಿ ಹೂಡಿದರು. ಐದು ವರ್ಷಗಳ ಈ ನಿರಂತರ ಹೋರಾಟದ ಫಲವಾಗಿ ೧೯೪೭ರಲ್ಲಿ ಸ್ವಾತಂತ್ರ್ಯ ದೊರೆಯಿತು. ಇಂಗ್ಲಿಷ್ ಸರ್ಕಾರದ ವಿರುದ್ಧದ ಹೋರಾಟದ ಸಮಯದಲ್ಲಿ ಗಾಂಧೀ ಭಾರತೀಯರಿಗೆ 'ಮಾಡಿ ಇಲ್ಲದೆ ಮಡಿಯಿರಿ' ಎಂಬ ಕರೆಕೊಟ್ಟರು, ಇಂಥ ಪರಿಣಾಮಕಾರಿ ಕರೆಯನ್ನು ದೇಶವಾಸಿಗಳು ಮನಸಾ ಸ್ವೀಕರಿಸಲು ಸಿದ್ಧವಾಗಿದ್ದರು. ಹಿಮಾಚಲದವರೆಗೆ ಭಾರತೀಯರು ಇಂಗ್ಲಿಷ್ ಸಾಮ್ರಾಜ್ಯದ ವಿರುದ್ಧ ಬಂಡಾಯವೆದ್ದರು. ಭಾರತೀಯರಿಗೆ ಸ್ವಾತಂತ್ರ್ಯ ಕೊಡದೇ ಇರಲು ಇಂಗ್ಲಿಷರಿಗೆ ಸಾಧ್ಯವೇ ಇರಲಿಲ್ಲ. ಇಂಗ್ಲೀಷರ ಆಡಳಿತ ಕಾಲದಲ್ಲಿ ಅವರ ಪ್ರೀತಿಗೆ ಪಾತ್ರರಾಗಿ ಲಾರ್ಡ್ ಎಂಬ ಪದವಿ ಪಡೆದಿದ್ದ 'ಲಾರ್ಡ್ ಸಿಂಹ' ಇಂಗ್ಲೀಷರ ಆಡಳಿತ ಭಾರತದಲ್ಲಿ ನಾಲ್ಕುನೂರು ವರ್ಷ ಇರುತ್ತದೆಂದು ಧೈರ್ಯವಾಗಿ ಹೇಳುತ್ತಿದ್ದ ಮಾತು ಸುಳ್ಳಾಯಿತು. ದೇಶಕ್ಕೆ ಸ್ವಾತಂತ್ರ್ಯ ತರಲು ಮಹಾತ್ಮಾ ಗಾಂಧೀ ಕಾರಣ ಪುರುಷರಾದರು.

೨೦೧೧ ಏಪ್ರಿಲ್ ೫ ಕೂಡ ಸ್ವತಂತ್ರ ಭಾರತದ ಇತಿಹಾಸದಲ್ಲಿ ಮಹತ್ವದ ದಿನ, ಐತಿಹಾಸಿಕ ದಿನ. ಅಂದು ದೇಶದ ರಾಜಧಾನಿ ದಿಲ್ಲಿಯ ಜಂತರ್‌ಮಂತರ್ ಪ್ರದೇಶದಲ್ಲಿ ಗಾಂಧೀ ವಿಚಾರದಿಂದ ಪ್ರಭಾವಿತವಾಗಿರುವ ಅಣ್ಣಾ ಹಜಾರೆ ಎಂಬ ೭೨ ವರ್ಷದ ಕ್ರಿಯಾಶೀಲ ಸಾಮಾಜಿಕ ನಾಯಕ ಭ್ರಷ್ಟಾಚಾರವೆಂಬ ಪೆಡಂಭೂತದ ವಿರುದ್ಧ ಆಮರಣ ಉಪವಾಸ ಪ್ರಾರಂಭಿಸಿದರು. ದೇಶದಲ್ಲೆಲ್ಲ ಭ್ರಷ್ಟಾಚಾರ ವ್ಯಾಪಿಸಿದೆ ಎಂಬ ಸತ್ಯವನ್ನು ಮನಗಂಡು ಅದರ ನಿರ್ಮೂಲನಕ್ಕಾಗಿ ಜನತೆ ಹೋರಾಟ ನಡೆಸಬೇಕೆಂಬ ಕರೆಯೊಂದಿಗೆ ಆಮರಣಾಂತ ಉಪವಾಸ ಪ್ರಾರಂಭಿಸಿದರು.

ನೆಹರೂ-ಇಂದಿರಾರವರ ಕಾಲದಿಂದ ಭ್ರಷ್ಟಾಚಾರ ಚಿಕ್ಕ ತೊರೆಯಾಗಿ ದಿಲ್ಲಿ ಕೇಂದ್ರಿತ ಅಧಿಕಾರದ ಜಡೆಯಿಂದ ಹರಿಯಲಾರಂಭಿಸಿ ೨೦೧೧ ನೇ ಇಸ್ವಿ ವೇಳಗೆ ಡಾ॥ ಮನಮೋಹನಸಿಂಗ್ ಮತ್ತು ಯಡಿಯೂರಪ್ಪ ಹಾಗು ಇನ್ನಿತರ ರಾಜ್ಯಗಳ ಮುಖ್ಯಮಂತ್ರಿಗಳ ಕಾಲದಲ್ಲಿ ಆ ತೊರೆ ಜೋಗದ ಜಲಪಾತದಂತೆ ಧುಮಕಲಾರಂಭಿಸಿತು. ಉದಾಹರಣೆಗೆ ಭ್ರಷ್ಟಾಚಾರದ ವ್ಯವಹಾರಗಳಲ್ಲಿಯ ಈ ಮೊತ್ತವನ್ನು ಗಮನಿಸಬಹುದು. ೧೯೯೧ ರಲ್ಲಿ ಬೊಫೋರ್ಸ್ ಹಗರಣದಲ್ಲಿಯ ಮೊತ್ತ ನಲವತ್ತು ಕೋಟಿ; ಹರ್ಷದ ಮೆಹತಾ ಹಗರಣ ಐದು ಸಾವಿರ ಕೋಟಿ; ಟೆಲಿಕಾಂ ಹಗರಣ ಹನ್ನೆರಡು ಸಾವಿರ ಕೋಟಿ; ಕಾಮನ್‌ವೆಲ್ತ್ ಕ್ರೀಡಾ ಕೂಟ ಹಗರಣ ಅರವತ್ತು ಸಾವಿರ ಕೋಟಿ; ಎರಡು-ಜಿ ಸ್ಪೆಕ್ಟ್ರಂ ಹಗರಣ ಎರಡುವರೆ ಲಕ್ಷ ಕೋಟಿ ಹೀಗೆ ಸಾಗುತ್ತದೆ ವಿವಿಧ ಹಗರಣಗಳಲ್ಲಿಯ ಭ್ರಷ್ಟಾಚಾರದ ಮೊತ್ತ! ಇಂದಿರಾ ಗಾಂಧೀಯವರಂತೂ ಭ್ರಷ್ಟಾಚಾರವೆಂಬುದು ಜಾಗತಿಕ ಸಮಸ್ಯೆ; ಅದರಿಂದ ಯಾರೂ ತಪ್ಪಿಸಿಕೊಳ್ಳಲಾಗದು ಎಂಬರ್ಥದಲ್ಲಿ ಹೇಳಿ ಭ್ರಷ್ಟಾಚಾರಕ್ಕೆ ಶಿಷ್ಟಾಚಾರದ ಮುಖವಾಡ ಹಾಕಿದರು.

ರಾಜ್ಯಗಳಲ್ಲಿ ಲೋಕಾಯುಕ್ತರ ನೇಮಕ ಮಾಡುವುದರ ಮೂಲಕ ಭ್ರಷ್ಟಾಚಾರದ ನಿಯಂತ್ರಣಕ್ಕೆ ಒಂದು ಸಣ್ಣ ಪ್ರಯತ್ನ ಮಾಡಲಾಯಿತು. ಗುಜರಾತ್ ಸರ್ಕಾರ ಲೋಕಾಯುಕ್ತರನ್ನು ನಿಯಮಿಸಲೇ ಇಲ್ಲ! ಉಳಿದ ರಾಜ್ಯಗಳ ಲೋಕಾಯುಕ್ತರು ಹೆಸರಿಗೆ ಮಾತ್ರ ಅಧಿಕಾರದಲ್ಲಿದ್ದರು. ಕರ್ನಾಟಕದ ಲೋಕಾಯುಕ್ತರು ಮಾತ್ರ ಬೇರೆ ಆಯುಕ್ತರಿಗೆ ಮಾದರಿಯಾಗಿ ಕೆಲಸ ಮಾಡಲಾರಂಭಿಸಿದರು.

ಭ್ರಷ್ಟಾಚಾರದ ಕಾರಣದಿಂದ ದೇಶದ ಪ್ರಜಾತಂತ್ರ ವ್ಯವಸ್ಥೆಯಲ್ಲಿಯ ಜನರ ವಿಶ್ವಾಸ ಕಡಿಮೆಯಾಗಲಾರಂಭಿಸಿತು. ಕ್ರಿಮಿನಲ್ ಅಪರಾಧ ಹಿನ್ನೆಲೆಯ ಜನರು ಶಾಸಕರಾಗಿ, ಲೋಕ ಸಭಾ ಸದಸ್ಯರಾಗಿ ಆಯ್ಕೆಗೊಳ್ಳಲಾರಂಭಿಸಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಮುಂತ್ರಿಗಳೂ ಆದರು. ರಾಜಕಾರಣಿಗಳಲ್ಲಿಯ ಭ್ರಷ್ಟಾಚಾರ ಮತ್ತು ಅವರಲ್ಲಿಯ ಕ್ರಿಮಿನಲ್ ಮನೋಭಾವ ಅಧಿಕಾಗಳೂ ಕೂಡ ಭ್ರಷ್ಟರಾಗುವಂತೆ ಪ್ರೇರೇಪಿಸಿತು. ಇದು ನ್ಯಾಯಾಂಗವನ್ನೂ ಪ್ರವೇಶಿಸಿತು. ಕಾರ್ಪೋರೇಟ್ ಕಂಪನಿಗಳೂ ಶಾಮೀಲಾದವು. ಜನತೆಯ ಜೀವನದ ಪ್ರತಿಯೊಂದು ವಿಭಾಗದಲ್ಲಿ ಸರ್ಕಾರದ ಕೈವಾಡ ಪ್ರವೇಶಿಸಿತು. ದೇವರಿಲ್ಲದ ಸ್ಥಳ ಇಲ್ಲದೇ ಇರಬಹುದು, ಸರ್ಕಾರದ ಕೈವಾಡವಿಲ್ಲದೇ ಇರುವ ಸ್ಥಳ ಮತ್ತು ಕೇಲಸ ಇಲ್ಲದಂತಾಯಿತು. ಇಡೀ ಜೀವನವೇ ಸರ್ಕಾರಿಕರಣವಾಯಿತು. ಅದರೊಂದಿಗೆ ಭ್ರಷ್ಟಾಚಾರವೂ ದಶದಿಕ್ಕುಗಳಿಗೂ ವ್ಯಾಪಿಸಿತು. ವಿಧವಾವೇತನ, ಅಂಗವಿಕಲರವೇತನ, ರೇಶನ್‌ಕಾರ್ಡ್ ಆದಾಯ ಪ್ರಮಾಣ ಪತ್ರ, ಖಾತೆ ಬದಲಾವಣೆ ಇತ್ಯಾದಿ ಎಲ್ಲ ವ್ಯವಹಾರಗಳ ನಿರ್ವಹಣೆಗಾಗಿ ಲಂಚ ಕೊಡಬೇಕಾದ ಪರಿಸ್ಥಿತಿ ಉಂಟಾಯಿತು. ಸಕಾರದ ಜನಪರ ಯೋಜನೆಗಳಿಗೆ ಅಧಿಕಾರಿಗಳು ಮುಸುಕು ಹಾಕಿದರು. ಜನರಿಗೆ ಯಾವ ಮಾಹಿತಿಯೂ ಸರಿಯಾಗಿ ಸಿಗದಂಥ ಪರಿಸ್ಥಿತಿಯನ್ನು ಅಧಕಾರಶಾಹಿ ನಿರ್ಮಿಸಿತು. ಜನ ಹತಾಶಗೊಂಡರು; ಏನು ಮಾಡಲೂ ದಿಕ್ಕು ತೋರದಂತಾದರು.

೧೯೯೧ ಅಣ್ಣಾ ಹಜಾರೆ ಭ್ರಷ್ಟಾಚಾರದ ವಿರುದ್ಧ ಜನತಾ ಆಂದೋಲನ ಪ್ರಾರಂಭಿಸಿದರು. ಜನತೆಗೆ ಹೋರಾಟದ ಮಾರ್ಗ ಮತ್ತು ಹೋರಾಟಕ್ಕಾಗಿ ಒಬ್ಬ ನೇತಾರ ದೊರೆತ. ಈ ಆಂದೋಲನ ಪ್ರಾರಂಭದಲ್ಲಿ ಮಹಾರಾಷ್ಟ್ರದ ಅಹಮ್ಮದನಗರ ಜಿಲ್ಲೆಗೆ ಸೀಮಿತವಾಗಿತ್ತು. ಜನರ ಹೋರಾಟದ ಪರಿಣಾಮವಾಗಿ ಆರು ಮಂತ್ರಿಗಳು ರಾಜಿನಾಮೆ ಕೊಡಬೇಕಾಯಿತು; ನಾಲ್ಕು ನೂರಕ್ಕೂ ಹೆಚ್ಚು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಯಿತು. ಇದರಿಂದ ಪ್ರೋತ್ಸಾಹಿತಗೊಂಡ ಅಣ್ಣಾ ಹಜಾರೆಯವರು ಭ್ರಷ್ಟಾಚಾರದ ಮೂಲಕ್ಕೇ ಕೈ ಹಾಕಿದರು. ಅಂದರೆ ಪ್ರಜೆಗಳಿಗೆ ಸರ್ಕಾರದ ಪ್ರತಿಯೊಂದು ಯೋಜನೆಯ, ಪ್ರತಿಯೊಂದು ಆದೇಶ ಕುರಿತಾದ ಮಾಹಿತಿ ಪಡೆಯುವ ಹಕ್ಕು ಬೇಕೆಂಬ ಹೋರಾಟ ಪ್ರಾರಂಭಿಸಿದರು. ಪ್ರಾರಂಭದಲ್ಲಿ ಸರ್ಕಾರ ಜನರ ಈ ಬೇಡಿಕೆಯಿಂದ ಅವಕ್ಕಾಯಿತು. ವಿರೋಧ ಮಾಡಿತು. ಆದರೆ ಅಣ್ಣಾ ಅಷ್ಟು ಸುಲಭವಾಗಿ ಸೋಲುವವರಲ್ಲ. ಚೀನಾ ಮತ್ತು ಪಾಕ್ ಜೊತೆಗಿನ ಯುದ್ಧದ ರಣಾಂಗಣದಿಂದ ನಿವೃತ್ತನಾಗಿ ಬಂದಿದ್ದ ಯೋಧ. ಬ್ರಹ್ಮಚಾರಿ. ವಿವೇಕಾನಂದ, ಗಾಂಧೀ ಮತ್ತು ವಿನೋಬಾ ವಿಚಾರದಿಂದ ಪ್ರಭಾವಿತನಾದ ವ್ಯಕ್ತಿ. ಸರ್ಕಾರದೊಂದಿಗೆ ಜಂಗಿಕುಸ್ತಿಗೆ ಇಳಿದರು. ಮುಂಬೈಯ ಸುಪ್ರಸಿದ್ಧ ಆಜಾದ್ ಮೈದಾನದಲ್ಲಿ ಬೃಹತ್

ಸಭೆ ಆಯೋಜಿಸಿದರು; ಯುವಜನರು ಮುಂದೆ ಬಂದರು, ಆದರೆ ಸರ್ಕಾರ ಸೊಪ್ಪು ಹಾಕಲಿಲ್ಲ. ಅದಕ್ಕೆ ಪ್ರತಿಯಾಗಿ ಅನಿರ್ದಿಷ್ಟ ಕಾಲದ ಉಪವಾಸ ಪ್ರಾರಂಭಿಸಿದರು. ಈ ಉಪವಾಸ ಹನ್ನೆರಡು ದಿನ ನಡೆಯಿತು. ಕೊನೆಗೆ ರಾಷ್ಟ್ರಪತಿಯವರು ೨೦೦೩ ಜುಲೈ ಮೊದಲ ವಾರದಲ್ಲಿ ಮಾಹಿತಿ ಹಕ್ಕು ಕಾಯ್ದೆಗೆ ತಮ್ಮ ಹಸ್ತಾಕ್ಷರ ಹಾಕಿದರು. ಅಣ್ಣಾ ಮಾಹಿತಿ ಹಕ್ಕಿನ ಲಾಭಗಳನ್ನು ಜನತೆಗೆ ತಿಳಿಸುವುದಕ್ಕಾಗಿ ಹನ್ನೆರಡು ಸಾವಿರ ಕಿ.ಮಿಗೂ ಹೆಚ್ಚು ದೂರ ಪ್ರವಾಸ ಮಾಡಿದರು; ಮಹಾರಾಷ್ಟ್ರ ರಾಜ್ಯದ ಎಲ್ಲ ಇಪ್ಪತ್ತನಾಲ್ಕು ಜಿಲ್ಲೆಗಳಲ್ಲೂ ಸಾರ್ವಜನಿಕ ಸಭೆ ನಡೆಸಿದರು. ಮಾಹಿತಿ ಹಕ್ಕು ಕಾಯ್ದೆಯ ವಿಚಾರಗಳನ್ನು ತಿಳಿಸುವ ಒಂದು ಲಕ್ಷ ಪುಸ್ತಕಗಳನ್ನು ಕಡಿಮೆ ಬೆಲೆಗೆ ಮಾರಾಟಮಾಡಿದರು.

ಅಣ್ಣಾ ಹಜಾರೆ ತಮ್ಮ ರಾಲೆಗಾಂವ್‌ಸಿದ್ದಿ ಮತ್ತು ಸುತ್ತಲಿನ ಪ್ರದೇಶದಲ್ಲಿ ಅನೇಕ ಪ್ರಕಾರದ ರಚನಾತ್ಮಕ ಕಾರ್ಯಕ್ರಮ ಕೈಗೊಂಡರು, ಹಳ್ಳಿಯವರಲ್ಲಿ ಮನೆ ಮಾಡಿದ್ದ ಮದ್ಯಪಾನ, ಧೂಮಪಾನ ಹೋಗಲಾಡಿಸಿದರು; ಬೆಂಗಾಡಿನಲ್ಲಿ ಮಳೆಯ ನೀರು ಭೂಮಿಗಿಳಿಯುವಂತೆ ಮಾಡಿದರು. ಇಡೀ ಪ್ರದೇಶ ಹಸಿರಿನಿಂದ ಕಂಗೊಳಿಸಿತು. ಅಣ್ಣಾರ ಈ ಎಲ್ಲ ಸಾಧನೆ ಗಮನಿಸಿದ ಸರ್ಕಾರ ಅಣ್ಣಾ ಹಜಾರೆಯವರಿಗೆ ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿಕೊಟ್ಟು ಸನ್ಮಾನಿಸಿತು. ಅಮೇರಿಕಾದ ಕೇರ್ ಸಂಸ್ಥೆ, ದಕ್ಷಿಣ ಕೋರಿಯಾದ ಅಂತರಾಷ್ಟ್ರೀಯ ಪಾರದರ್ಶಕ ಸಂಸ್ಥೆ ಇವರಿಗೆ ಸನ್ಮಾನಿಸಿದವು, ಇವರಿಗೆ ಒಟ್ಟ ೨೫ ಲಕ್ಷ ರೂಪಾಯಿಗಳ ಬಹುಮಾನ ಬಂದಿತು. ಅದೆಲ್ಲವನ್ನೂ ಸಾರ್ವಜನಿಕ ಕೆಲಸಕ್ಕೆ ದಾನಮಾಡಿ ಕೈತೊಳೆದುಕೊಂಡರು. ಅವರು ಹಳ್ಳಿಯಲ್ಲಿರುವ ತಮ್ಮ ಮನೆಗೆ ಹೋಗದೆ ಮೂವತ್ತೈದು ವರ್ಷಗಳಾದವು. ಅವರು ಸಾವಿರಾರು ಕೋಟಿ ರೂಪಾಯಿ ವ್ಯವಹಾರದ ಯೋಜನೆಗಳನ್ನು ಕಾರ್ಯಗತಗೊಳಿಸಿದ್ದಾರೆ. ಆದರೆ ಅವರ ಬ್ಯಾಂಕ್ ಲೆಕ್ಕದಲ್ಲಿ ಉಳಿತಾಯದ ಹಣವಿಲ್ಲ.

ಅಸಾಧಾರಣ ವ್ಯಕ್ತಿತ್ವದ ಮತ್ತು ದೇಶಾಭಿಮಾನದ ಅಣ್ಣಾ ಹಜಾರೆ ಕಳೆದ ಏಪ್ರಿಲ್ ೫ ರಂದು ಇನ್ನೊಂದು ಮಹತ್ವದ ಉದ್ದೇಶಕ್ಕಾಗಿ ದಿಲ್ಲಿಯ ಜಂತರ್ ಮಂತರ್‌ನಲ್ಲಿ ಆಮರಣ ಉಪವಾಸ ಪ್ರಾರಂಭಿಸಿದರು. ಕೇಂದ್ರ ಸರ್ಕಾರದಲ್ಲಿಯ ಹಿರಿಯರಾಜಕಾರಣಿಗಳು, ಅಧಿಕಾರಿಗಳು ಭ್ರಷ್ಟಾಚಾರದ ಬಲೆಯಲ್ಲಿ ಬೀಳಬೇಕಾದ ಲೋಕಪಾಲ ಮಸೂದೆಗಾಗಿ ಒತ್ತಾಯಿಸಲು ಪ್ರಾರಂಭಿಸಿದರು. ಈ ಮಸೂದೆ ಕಳೆದ ೬೩ ವರ್ಷಗಳಿಂದ ಶಾಸನವಾಗದೆ ಹಾಗೆ ಬಿದ್ದುಕೊಂಡಿತ್ತು. ಇವರ ಆಮರಣ ಉಪವಾಸ ಮತ್ತು ಆ ಉಪವಾಸಕ್ಕೆ ಇಡೀ ದೇಶ ತನ್ನ ಬೆಂಬಲ ಸೂಚಿಸಿದ್ದು ಸರ್ಕಾರ ಬಾಗುವಂತೆ ಮಾಡಿತು. ಲೋಕಪಾಲ ಮಸೂದೆಯನ್ನು ತಯಾರಿಸಲು ಸರ್ಕಾರದ ಐವರು ಪ್ರತಿನಿಧಿಗಳು ಮತ್ತು ನಾಗರೀಕರ ಪರವಾಗಿ ಐವರು ಪ್ರತಿನಿಧಿಗಳು ಇರುವ ಸರ್ವಸಮ್ಮತವಾದ ಸಮಿತಿಯನ್ನು ರಚಿಸಲಾಯಿತು. ಆ ಸಮಿತಿ ಈಗಾಗಲೇ ಕಾರ್ಯೋನ್ಮುಖವಾಗಿದೆ. ಆಗಸ್ಟ್ ತಿಂಗಳ ಕೊನೆಯ ಒಳಗಾಗಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸುವ ಪ್ರಯತ್ನನಡೆದಿದೆ.

ಲೋಕಪಾಲ ಮಸೂದೆಗೆ ಸರ್ಕಾರ ಒಪ್ಪುವಂತೆಮಾಡುವುದು ಮತ್ತು ಆ ಮಸೂದೆ ತಯಾರಿಕೆಯಲ್ಲಿ ನಾಗರೀಕ ಪ್ರತಿನಿಧಿಗಳು ಭಾಗವಹಿಸುವಂತೆ ಮಾಡುವುದು

ಸಾಮಾನ್ಯ ಕೆಲಸವಲ್ಲ. ಅಣ್ಣಾ ಹಜಾರೆಯವರಂಥ ವ್ಯಕ್ತಿತ್ವವುಳ್ಳ ಹೋರಾಟಗಾರರಿಂದ ಮಾತ್ರ ಸಾಧ್ಯ. ಅಂತೂ ಅಣ್ಣಾ ಹಜಾರೆ ಭ್ರಷ್ಟಾಚಾರದ ನಿರ್ಮೂಲನದ ದಿಕ್ಕಿನಕಡೆಗೆ ಹೋಗುವ ಮೊದಲ ಹೆಜ್ಜೆಯಾಗಿ ಪಾಂಚಜನ್ಯ ಉದಿದ್ದಾರೆ.

ಲೋಕಪಾಲ ಮಸೂದೆ ಶಾಸನವಾದ ಕೂಡಲೆ, ಲೋಕಪಾಲರ ನಿಯುಕ್ತಿಯಾದ ಕೂಡಲೆ ಹಲವಾರು ದಶಕಗಳಿಂದ ಮನೆಮಾಡಿರುವ ಭ್ರಷ್ಟಾಚಾರ ಒಮ್ಮೆಲೆ ನಿರ್ಮೂಲನಗೊಳ್ಳುವುದೆಂದು ಅಣ್ಣಾ ಹಜಾರೆಯವರು ಭಾವಿಸಿಲ್ಲ, ಬೇರೆ ಯಾವ ತಿಳುವಳಿಕಸ್ಥರೂ ಭಾವಿಸಿಲ್ಲ; ಯಾರಿಗೂ ಆ ಬಗ್ಗೆ ಭ್ರಾಂತಿಯಿಲ್ಲ.

ಲೋಕಪಾಲ ಮಸೂದೆ ಒಂದು ಸಣ್ಣ ಪ್ರಯತ್ನವಷ್ಟೆ. ಅಣ್ಣಾ ಹಜಾರೆಯವರ ೯೭ ಗಂಟೆಗಳ ಉಪವಾಸ ಸಾಧಿಸಿದ್ದನ್ನು ಈ ಕೆಳಗೆ ಕಾಣಿಸಿದಂತೆ ಪಟ್ಟಿಮಾಡಬಹುದು:-

೧) ಹಲವಾರು ವರ್ಷಗಳಿಂದ ಭಾರತೀಯರೆಲ್ಲರ ಮನಸ್ಸಿನಲ್ಲಿ ಭ್ರಷ್ಟಾಚಾರದ ಬಗ್ಗೆ ಇದ್ದ ತೀವ್ರಸ್ವರೂಪದ ಅಸಂತೋಷ ಬಹಿರಂಗವಾಗಿ ಮತ್ತು ಸಂಘಟಿತವಾಗಿ ಪ್ರಕಟಗೊಂಡಿತು;

೨) ದೇಶ ಪ್ರಜೆಗಳು ಇನ್ನು ಭ್ರಷ್ಟಾಚಾರ ಸಹಿಸುವುದಿಲ್ಲವೆಂಬ ಮಾತು ದೇಶದ ನಾಯಕರಿಗೆ ಸ್ಪಷ್ಟವಾಯಿತು;

೩) ಭ್ರಷ್ಟಾಚಾರದ ವಿರುದ್ಧ ಅಹಿಂಸಾತ್ಮಕ ಹೋರಾಟ ನಡೆಸಲು ಜನಸಾಮಾನ್ಯರಿಗೆ ಪ್ರೇರಣೆಕೊಟ್ಟಿತು;

೪) ಭ್ರಷ್ಟಾಚಾರದ ವಿರುದ್ಧ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಹೇಗೆ ಹೋರಾಟನಡೆಸಬಹುದೆಂಬುದರ ಬಗ್ಗೆ ದೇಶದ ಜನತೆಗೆ ಲೋಕಶಿಕ್ಷಣದೊರೆಯಿತು;

೫) ಭ್ರಷ್ಟಾಚಾರದ ನಿರ್ಮೂಲನಕ್ಕಾಗಿ ಹಿಂಸಾಮಾರ್ಗಕ್ಕೆ ಇಳಿಯದೆ, ಅಹಿಂಸೆಯಿಂದ ಹೇಗೆ ಹೋರಾಟ ಮಾಡಬಹುದೆಂಬುದರ ಪ್ರತ್ಯಕ್ಷದರ್ಶನ ಜನತೆಗೆ ಆಯಿತು;

೬) ಗಾಂಧೀಮಾರ್ಗದಲ್ಲಿ ಮುನ್ನಡೆದರೆ ದೇಶಕ್ಕೆ ಹಿತವುಂಟು ಎಂಬ ನಂಬಿಕೆ ದೃಢವಾಯಿತು;

೭) ಜಗತ್ತಿನ ಇತರ ದೇಶಗಳಿಗೆ ಭಾರತದ ಪ್ರಜಾತಂತ್ರ ಮತ್ತು ಅದರಲ್ಲಿಯ ದೋಷಗಳನಿವಾರಣೆಗೆ ಇರುವ ವಿಶಿಷ್ಟವಾದ ಅಹಿಂಸಕ ತಂತ್ರ ಮಾದರಿಯಾದವು.

ಲೋಕಪಾಲ ಮತ್ತು ಲೋಕಾಯುಕ್ತ ಹುದ್ದೆಗಳ ಮೂಲಕ ಭ್ರಷ್ಟಾಚಾರದ ನಿರ್ಮೂಲನೆ ಆಡಳಿತಾತ್ಮಕವಾದದ್ದು. ಈ ಆಡಳಿತಾತ್ಮಕ ವ್ಯವಸ್ಥೆಯ ಹೋರಾಟದೊಂದಿಗೆ ನಾಗರೀಕರ ಕರ್ತವ್ಯಗಳು ಈ ರೀತಿ ಇವೆ:-

೧) ಸ್ವತಃ ಪ್ರತಿಯೊಬ್ಬ ನಾಗರೀಕ ಅಧಿಕಾರಿಗಳಿಗೆ ಲಂಚಕೊಡುವುದಿಲ್ಲವೆಂದು ಸಂಕಲ್ಪಮಾಡಬೇಕು;

೨) ಮಾಹಿತಿ ಹಕ್ಕು ಕಾಯಿದೆಯನ್ನು ಗಟ್ಟಿಯಾಗಿ ಆಚರಣೆಗೆ ಬರುವಂತೆಮಾಡಬೇಕು.

೩) ಎಲ್ಲಾ ಖಾಸಗಿ, ಸರ್ಕಾರೇತರ ಸಂಸ್ಥೆಗಳು ಪಾರದರ್ಶಕವಾಗಿ ಕೆಲಸಮಾಡಬೇಕು;

೪) ಸ್ಥಾನೀಯವಾಗಿ ಭ್ರಷ್ಟಾಚಾರ ನಿರ್ಮೂಲನ ಸಮಿತಿಗಳನ್ನು ರಚಿಸಿಕೊಂಡು ಸ್ಥಳೀಯ ಆಡಳಿತದಲ್ಲಿ ಕಂಡುಬರುವ ಭ್ರಷ್ಟಾಚಾರದ ವಿರುದ್ಧ ಜನಾಂದೋಲನವನ್ನು ಪ್ರಾರಂಭಿಸಬೇಕು;

೫) ಸಂಗ್ರಹ ಮತ್ತು ದುರಾಸೆಯ ಮನೋಭಾವವನ್ನು ತಿದ್ದಿಕೊಳ್ಳಬೇಕು;

೬) ಚುನಾವಣೆಗಳಲ್ಲಿ ಯೋಗ್ಯರಾದವರನ್ನೇ ಆಯ್ಕೆಮಾಡಬೇಕು;

೭) ಸಾಮುದಾಯಕ ಪುರುಷಾರ್ಥವನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ಸರ್ಕಾರದ ಮೇಲಿನ ಅವಲಂಬನೆಯನ್ನು ಕಡಿಮೆಮಾಡಿಕೊಳ್ಳಬೇಕು;

೮) ಸರ್ಕಾರದ ಹಣ ಪಾಪದ ಹಣವೆಂದು ಭಾವಿಸಿ, ಆದಷ್ಟು ಆ ಹಣದಿಂದ ದೂರವಿರಲು ಪಯತ್ನಿಸಬೇಕು;

೯) ಭ್ರಷ್ಟಾಚಾರದ ಸೃಷ್ಟಿಗೆ ನಾನು ಕಾರಣನಾಗಿದ್ದೇನೆ, ಅದರ ಲಯಕ್ಕೂ ನಾನೇ ಕಾರಣನಾಗಬೇಕೆಂಬ ಪ್ರಜ್ಞೆಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕು;

೧೦) ಸರ್ಕಾರದ ಸಹಾಯ ಹಸ್ತವೆಂಬ ಸಂಕೋಲೆಯಿಂದ ಪ್ರತಿಯೊಬ್ಬ ನಾಗರೀಕನೂ ಬಿಡುಗಡೆ ಹೊಂದಲು ಪ್ರಯತ್ನಿಸಬೇಕು.

ಭ್ರಷ್ಟಾಚಾರ ನಿರ್ಮೂಲನದ ಮಾತನ್ನು ವ್ಯಕ್ತಿಗತ ನೆಲೆಯಲ್ಲಿ ಮಾತನಾಡಿದರೆ ಪ್ರಯೋಜನವಿಲ್ಲ. ವ್ಯವಸ್ಥೆಯಲ್ಲಿಯೇ ಬದಲಾವಣೆ ತರಬೇಕಾದುದು ತುರ್ತು ಅಗತ್ಯ ಎಂಬ ವಾದವೂ ಒಂದಿದೆ. ಇದು ಸರಿಯೇ. ಆದರೆ ಯಾವುದೇ ಒಂದು ದೊಡ್ಡ ಸಾಮಾಜಿಕ ಕ್ರಾಂತಿ ಪ್ರಾರಂಭವಾಗುವುದು ವ್ಯಕ್ತಿಗತ ನೆಲೆಯಲ್ಲಿಯೇ. ಹಿಮಾಲಯದಂಥ ಮಹಾ ಪರ್ವತದ ಆರೋಹಣವೂ ಕೂಡ ಒಂದು ಪುಟ್ಟ ಹೆಜ್ಜೆಯಿಂದಲೇ ತಾನೆ?

ಈಗ ಅಣ್ಣಾ ಹಜಾರೆಯವರ ಸತ್ಯಾಗ್ರಹದಿಂದ ಜನರಲ್ಲಿ ಬಲವಾದ ಜಾಗೃತಿ ಮೂಡಿದೆ; ಸಂಘಟನಾತ್ಮಕ ಭಾವನೆಯೂ ಮೂಡಿದೆ. ಈ ಎರಡು ನಿಷ್ಪತ್ತಿಗಳನ್ನು ಕ್ರೋಢೀಕರಿಸಬೇಕು ಮತ್ತು ಬಲಪಡಿಸಬೇಕು.

ಅಣ್ಣಾ ಹಜಾರೆ ತಮ್ಮ ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ಸಂಬಂಧಿಸಿದಂತೆ ಹೀಗೆ ಹೇಳುತ್ತಾರೆ:-

"ಬಲಿಷ್ಠ ಭಾರತದ ಕನಸು ಆತ್ಮ ನಿರ್ಭರತೆಯ, ಸ್ವಾವಲಂಬಿತ ಗ್ರಾಮಗಳ ಮತ್ತು ಶ್ರೀಸಾಮಾನ್ಯನ ಸಾಮಾಜಿಕ ಬದ್ಧತೆ ಹಾಗೂ ಭಾಗವಹಿಸುವಿಕೆ ಇಲ್ಲದೆ ಸಾಧ್ಯವಿಲ್ಲ."

ಮಹಾತ್ಮಾ ಗಾಂಧೀಜಿಯವರ ಮಾತೊಂದು ಹೀಗಿದೆ:-

"ಯಾವ ಬದಲಾವಣೆಯನ್ನು ನೀನು ಬಯಸುತ್ತೀಯೋ ಆ ಬದಲಾವಣೆ ನಿನ್ನಿಂದ ಪ್ರಾರಂಭವಾಗಲಿ."

ಅಣ್ಣಾ ಹಜಾರೆಯವರು ಪಾಶವೀ ಶಕ್ತಿ ಭ್ರಷ್ಟಾಚಾರದ ವಿರುದ್ಧ ಊದಿರುವ ದೈವೀಶಕ್ತಿಯ ಪಾಂಚಜನ್ಯ ನಮ್ಮೆಲ್ಲರ ಆತ್ಮವನ್ನು ಶುದ್ಧೀಕರಿಸಲಿ.

* * *

ಬಹುರಾಷ್ಟ್ರೀಯ ಕಂಪನಿಗಳು ಕನ್ನಡವನ್ನು ಉಪೇಕ್ಷಿಸದಂತೆ ನೋಡಿಕೊಳ್ಳಬೇಕು

– ಯು.ಆರ್.ಅನಂತಮೂರ್ತಿ

ಇದು ವಿಶ್ವ ಕನ್ನಡ ಸಮ್ಮೇಳನ. ಕವಿರಾಜಮಾರ್ಗಕಾರನಾದ ಶ್ರೀವಿಜಯನಿಗೆ ಒಂದು ಸಾವಿರ ವರುಷಗಳ ಹಿಂದೆಯೇ ಕಾವೇರಿಯಿಂದ ಗೋದಾವರಿಯವರೆಗೆ ಮಾತ್ರ ಭೂಗೋಳದ ಮಿತಿಯಲ್ಲಿ ಇದ್ದ ಕನ್ನಡ ತನ್ನ ಹೃದಯದಲ್ಲಿ ಪ್ರಪಂಚವನ್ನೇ ಇಟ್ಟುಕೊಂಡಿತ್ತು. ಅದು ಇವತ್ತಿಗೂ ಸತ್ಯವಾಗಿಯೇ ಉಳಿದಿದೆ. ಕನ್ನಡದಲ್ಲಿ ಪ್ರಪಂಚ ಇದೆ. ಆದರೆ ಪ್ರಪಂಚದಲ್ಲೂ ಕನ್ನಡವನ್ನು ವಿಶ್ವಮಾನ್ಯ ಮಾಡುವ ಪ್ರಯತ್ನ ಇಂತಹ ಸಮ್ಮೇಳನಗಳ ಹಿಂದಿರುವ ಉದ್ದೇಶವಾಗಿದೆ.

ಇದು ಸಾಧ್ಯವಾಗುವುದು ಯಾವಾಗ? ಇಡೀ ಜಗತ್ತು ಮನ್ನಿಸುವಂತಹ ಸಾಹಿತ್ಯ ಕನ್ನಡದಲ್ಲಿ ನಿರ್ಮಾಣವಾದಾಗ. ಆದರೆ ಅಂತಹ ಸಾಹಿತ್ಯ ನಿರ್ಮಾಣವಾಗಿದ್ದರೂ ಅದು ಪ್ರಪಂಚಕ್ಕೆ ಇನ್ನೂ ಗೊತ್ತಿಲ್ಲ. ಇಂತಹ ಸಮ್ಮೇಳನಗಳು ನಮ್ಮಲ್ಲಿರುವ ಕಲ್ಪನಾ ಶ್ರೀಮಂತಿಕೆ ಎಲ್ಲರಿಗೂ ಗೊತ್ತಾಗುವಂತೆ ಮಾಡುವುದು ಸಾಧ್ಯವಾಗಬೇಕು. ಆದರೆ ಇಷ್ಟೇ ಸಾಲದು.

ಕರ್ನಾಟಕದಲ್ಲಿ ಕನ್ನಡದವರೇ ಆದ ದೊಡ್ಡ ಉದ್ಯಮಿಗಳು ಇರಬೇಕು. ಬೇರೆ ಪ್ರದೇಶಗಳಲ್ಲಿ–ಗುಜರಾತಿನಲ್ಲಿ, ಆಂಧ್ರದಲ್ಲಿ, ತಮಿಳುನಾಡಿನಲ್ಲಿ ಇರುವಷ್ಟು ಜನ ದೊಡ್ಡ ಉದ್ಯಮಿಗಳು ಕರ್ನಾಟಕದಲ್ಲಿಲ್ಲ. ಇವತ್ತಿನ ಸಮ್ಮೇಳನವನ್ನು ಉದ್ಘಾಟಿಸಿದ ನಾರಾಯಣಮೂರ್ತಿ ಅಂತಹ ದೊಡ್ಡ ಉದ್ಯಮಿ. ನಮ್ಮ ಮಧ್ಯಮವರ್ಗದ ಜನರಿಗೆ ಆದರ್ಶಪ್ರಾಯರು.ಇಂಥ ಸಜ್ಜನ ಸಾಹಸಿಗಳ ನಿಷ್ಠೆ ಹಾಗೂ ಉತ್ಸಾಹ ಕನ್ನಡ ಭಾಷೆಗೆ ಬೇಕು.

ಕನ್ನಡ ಇರುವುದು ಕರ್ನಾಟಕದಲ್ಲಿ ಮಾತ್ರ. ಇಂಗ್ಲಿಷ್ ಒಂದು ಭಾಷೆಯಾಗಿ ಕನ್ನಡಕ್ಕಿಂತಾಗಲೀ ಅಥವಾ ಇತರ ಐರೋಪ್ಯ ಭಾಷೆಗಳಿಗಿಂತಾಗಲೀ ತನ್ನ ಶಕ್ತಿಯಲ್ಲಿ ದೊಡ್ಡದಲ್ಲದಿದ್ದರೂ ವರ್ಚಸ್ಸಿನಲ್ಲಿ ದೊಡ್ಡದಾಗಿದೆ. ನಿಮಗೆಲ್ಲ ಗೊತ್ತಿರುವಂತೆ ಹಿಂದೊಂದು ಕಾಲದಲ್ಲಿ ಯೂರೋಪಿನಲ್ಲಿ ಹೊಸ ವಿಚಾರಗಳು ಹುಟ್ಟುತ್ತಿದ್ದುದು ಕ್ರಾಂತಿಯ ನಂತರದ ಫ್ರಾನ್ಸ್‌ನಲ್ಲಿ. ಇಂಗ್ಲಿಷಿನ ಲೇಖಕರು ಫ್ರೆಂಚ್‌ನಿಂದ ಪ್ರೇರಿತರಾಗುತ್ತಿದ್ದರು. ಆದರೆ ಈಗ ಎಲ್ಲ ತಿರುಗುಮುರುಗಾದಂತೆ ಕಾಣುತ್ತಿದೆ.

ಇದಕ್ಕೆ ಕಾರಣ ಭಾಷೆಯ ನಿಜವಾದ ಅಂತಃಶಕ್ತಿಯಲ್ಲ; ಇಂಗ್ಲಿಷಿಗೆ ಅದರ ಇಂಪೀರಿಯಲ್ ಪ್ರಭುತ್ವದ ವ್ಯಾಪಕತೆಯಿಂದಾಗಿ ಎಲ್ಲವನ್ನೂ ಸ್ವೀಕರಿಸುವ ಧಾರಾಳದ ಶಕ್ತಿ ಚರಿತ್ರೆಯಲ್ಲಿ ದೊರಕಿದೆ, ಈ ಕಾಲದಲ್ಲಿ ಇಂಗ್ಲಿಷ್ ಭಾಷೆ ಬ್ರಿಟನ್ನಿನಂತಹ ಒಂದು ಸಣ್ಣ ದೇಶದ ಭಾಷೆಯಾಗಿರುವುದಲ್ಲದೆ ಜಗತ್ತಿನ ಮೇಲೆ ತನ್ನ ಅನೈತಿಕ ರಾಜಕಾರಣದ ಪ್ರಭುತ್ವವನ್ನು ಸ್ಥಾಪಿಸಿದ ಅಮೆರಿಕನ್ನರ ಭಾಷೆಯಾಗಿರುವುದು ಇಂಗ್ಲಿಷಿನ ಅನಿವಾರ್ಯ ವರ್ಚಸ್ಸಿಗೆ ಕಾರಣವೆನ್ನಬಹುದು. ಮುಂದೆ ಯಾರಿಗೆ ಗೊತ್ತು? ಮಾರ್ಕೆಟ್ಟುಗಳನ್ನು ಹುಡುಕುವವರಿಗೆ ಚೀನೀ ಭಾಷೆ ಅಂತರರಾಷ್ಟ್ರೀಯವೆನ್ನಿಸಬಹುದು.

ವೇದವ್ಯಾಸರಂತೆಯೇ ಮಹಾನ್ ಪ್ರತಿಭೆಯಾಗಿದ್ದ ಷೇಕ್ಸ್‌ಪಿಯರಿನ ಕಾಲದಲ್ಲಿ ಇಂಗ್ಲಿಷ್ ಇಂಗ್ಲೆಂಡಿಗೆ ಮಾತ್ರ ಸೀಮಿತವಾಗಿತ್ತು. ಅಲ್ಲಿನ ಹಲವು ಧೀಮಂತರು ಯೂರೋಪಿನ ಜೊತೆ ಮಾತಾಡಲು ಲ್ಯಾಟಿನ್‌ಅನ್ನೇ ಬಳಸುತ್ತಿದ್ದರು. ಈಗ ಸ್ವೀಕರಿಸುವ ಶಕ್ತಿಯಲ್ಲಿ ಯಾವ ಭಾಷೆಗೂ ಕಮ್ಮಿಯಲ್ಲದ ಕನ್ನಡದಲ್ಲಿ ಜಗತ್ತಿನ ಶ್ರೇಷ್ಠ ಲೇಖಕರು ಎನ್ನಬಹುದಾದ ಪಂಪ, ಕುಮಾರವ್ಯಾಸ, ವಚನಕಾರರು; ಅಲ್ಲದೆ, ನಮ್ಮ ಕಾಲದ ಕುವೆಂಪು, ಬೇಂದ್ರೆ, ಪುತಿನ, ಕಾರಂತ, ಅಡಿಗರಂಥವರೂ ಇದ್ದಾರೆ. ಆದರೆ ಕನ್ನಡ ಫೆಡರಲ್ ವ್ಯವಸ್ಥೆಯ ಭಾರತದ ಬೇರೆ ಪ್ರಾಂತ್ಯಗಳಲ್ಲೂ ಸಾಂಸ್ಕೃತಿಕವಾಗಿ ಚಲಿಸುವ ಭಾಷೆಯಾಗಬೇಕೆಂದು ನಾವು ಆಶಿಸುತ್ತೇವೆ, ಆದರೆ ಆಗಿಲ್ಲ.

ಅಷ್ಟು ದೂರವೇಕೆ? ನಮ್ಮ ಬೆಂಗಳೂರಿನಲ್ಲೇ ಅದೊಂದು ನಿತ್ಯದ ಬೀದಿಯ ಭಾಷೆಯಾಗಿ ಉಳಿಯುವಂತೆ ತೋರುವುದಿಲ್ಲ. ಬಹುರಾಷ್ಟ್ರೀಯ ಕಂಪೆನಿಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸುವವರು, ಹಾಗೆಯೇ ಜಗತ್ತಿಗೆ ಮಾದರಿಯೆಂದೇ ಖ್ಯಾತವಾದ ಇನ್‌ಫೋಸಿಸ್‌ನಂಥ ಸಂಸ್ಥೆಯವರು ಇದರಿಂದ ವಿಚಲಿತರಾಗಬೇಕೆಂಬುದು ನಮ್ಮ ಒತ್ತಾಯ ಮತ್ತು ಅಪೇಕ್ಷೆ. ಈ ಕಂಪೆನಿಗಳು ಫ್ರಾನ್ಸ್‌ನಲ್ಲೋ ಜರ್ಮನಿಯಲ್ಲೋ ಇದ್ದರೆ ಆ ದೇಶದ ಭಾಷೆಯನ್ನು ಉಪೇಕ್ಷಿಸಿ ಬೆಳೆಯುವುದು ಸಾಧ್ಯವೇ? ಇಂಥ ಕಂಪೆನಿಗಳಿಗೆ ಅವಕಾಶ ಕೊಡುವ ನಮ್ಮ ಪ್ರಭುತ್ವ ಜಗತ್ತಿನ ಶ್ರೀಮಂತ ಭಾಷೆಗಳಲ್ಲಿ ಒಂದಾದ ಕನ್ನಡವನ್ನು ಅವು ಉಪೇಕ್ಷಿಸದಂತೆ ನೋಡಿಕೊಳ್ಳಬೇಕು.

ಒಂದು ಭಾಷೆ ಬೆಳೆಯುವುದು ಅದರಲ್ಲಿ ಹುಟ್ಟುವ ಸಾಹಿತ್ಯದಿಂದ ಮಾತ್ರವಲ್ಲ; ಅದರ ಹಿಂದಿರುವ ಪ್ರಭುತ್ವದ ಶಕ್ತಿಯಿಂದ. ಈ ಈ ಗ್ಲೋಬೀಕರಣದ ಜಗತ್ತಿನಲ್ಲಿ ಪ್ರಭುತ್ವದ ಶಕ್ತಿಯಿರುವುದು ಅದರ ಆರ್ಥಿಕ ಶಕ್ತಿಯಲ್ಲಿ. ಜೊತೆಗೆ ಜನರು ಒಟ್ಟಾರೆಯಾಗಿ ಅನುಭವಿಸುವ ನೆಮ್ಮದಿಯಲ್ಲಿ. ವಿಶ್ವ ಕನ್ನಡ ಸಮ್ಮೇಳನ ಇವುಗಳನ್ನೆಲ್ಲಾ ಗಮನಿಸಿ ಕನ್ನಡದೊಳಗೆ ಜಗತ್ತಿದ್ದರೆ ಸಾಲದು, ಜಗತ್ತಿನೊಳಗೂ ಕನ್ನಡವಿರಬೇಕು ಎಂಬುದನ್ನು ಸ್ಥಾಪಿಸುವಂತಾಗಬೇಕು.

ನಮ್ಮ ಹಿರಿಯರಾದ ಕಾರಂತರು, ಗೌರೀಶ ಕಾಯ್ಕಿಣಿಯಂಥವರು ಅವರು ಇದ್ದ ಸ್ಥಳದಲ್ಲೇ ಕನ್ನಡವನ್ನು ಜ್ಞಾನದ ಸಂವಹನಕ್ಕೆ ಬಳಸುತ್ತ ಬಂದರು. ಹೀಗಾಗಿ ನಮ್ಮ ವೈಚಾರಿಕ ಗದ್ಯ ಬೆಳೆದಿದೆ; ಪ್ರಭುತ್ವವನ್ನು ನಿರ್ಲಕ್ಷಿಸಿಯೇ ಬೆಳೆದಿದೆ ಎಂದರೂ ತಪ್ಪಾಗಲಾರದು. ನಮ್ಮ ಕಾಲದಲ್ಲಿ ತೇಜಸ್ವಿಯವರೂ ಈ ಮಾರ್ಗದಲ್ಲಿ ಕನ್ನಡವನ್ನು ಜ್ಞಾನದ ಸಂವಹನದ ಭಾಷೆಯಾಗಿ ಬಳಸಿದರು.

ಆದರೆ ಇಷ್ಟು ಸಾಲದು.. ಇನ್ನು ಮುಂದೆ ಕನ್ನಡ ಸದ್ಯದಲ್ಲೇ ಇರುವ ಜ್ಞಾನದ ಸಂವಹನದ ಭಾಷೆಯಾಗಿ ಮಾತ್ರವಲ್ಲದೆ, ಇನ್ನೂ ಇರದ ಜ್ಞಾನದ ಸೃಷ್ಟಿಯನ್ನು ಮಾಡಬಲ್ಲ ಭಾಷೆಯಾಗಿ ಬೆಳೆದು ಬೆಳಗಬೇಕು. ಜಗತ್ತನ್ನೆ ಹೊಸ ಯೋಚನೆಗೆ ಹಚ್ಚಿದ ಕೀರ್ಕೆಗಾರ್ಡ್‌ನಂತಹ ತತ್ವಜ್ಞಾನಿಯೊಬ್ಬ ಆ ಕಾಲದಲ್ಲಿ ಹೆಚ್ಚು ಪ್ರಚಲಿತವಿದ್ದ ಜರ್ಮನ್‌ನಲ್ಲಿ ಬರೆಯಲಿಲ್ಲ. ತನ್ನ ಮಾತೃಭಾಷೆಯಾದ ಡೇನಿಶ್‌ನಲ್ಲಿ ಬರೆದ.

ಯೂರೋಪಿಗೆ ಕಿರ್ಕೆಗಾರ್ಡ್ ಬೇಕಿತ್ತು. ಹಾಗಾಗಿ ಡೇನಿಶ್ ಭಾಷೆ ಕೂಡ ಬೇಕಾಯಿತು. ಹಾಗೆಯೇ ಕನ್ನಡದಲ್ಲೂ ಹೊಸ ಜ್ಞಾನದ ಸೃಷ್ಟಿಯಾಗಬೇಕು. ಈ ಜ್ಞಾನ ಜಗತ್ತಿಗೆ ಅಗತ್ಯವಾಗಬೇಕು ಎಂಬುದು ನನ್ನಂಥವರ ಕನಸು. ವಿಜ್ಞಾನ, ಸಮಾಜ ಜ್ಞಾನ, ತತ್ವಜ್ಞಾನ ಹೀಗೆ ಜ್ಞಾನದ ಎಲ್ಲ ಶಾಖೆಗಳಲ್ಲೂ ಕನ್ನಡದಲ್ಲೇ ಹೊಸದಾಗಿ ಚಿಂತಿಸುವ ಜನ ನಮಗೆ ಬೇಕು. ಕುವೆಂಪು, ಬೇಂದ್ರೆ, ಶಂಬಾ ಜೋಷಿಯಂಥವರು ಈಗಾಗಲೇ ಕೆಲವು

ಶಾಖೆಗಳಲ್ಲಿ ಈ ಕೆಲಸ ಮಾಡಿದ್ದಾರೆ. ಇದು ಕನ್ನಡದಲ್ಲಿ ವ್ಯಾಪಕವಾಗಿ ಮುಂದುವರೆಯಬೇಕು. ಇದಕ್ಕೊಂದು ಸರಳವಾದ, ನೇರವಾದ ಕ್ರಮ ಇದೆ. ಇದನ್ನು ನಾನು ಸತತವಾಗಿ ಆಡಿಕೊಂಡು ಬಂದಿದ್ದೇನೆ.

ಮೊದಲನೆಯದು: ಕರ್ನಾಟಕದ ಎಲ್ಲ ಮಕ್ಕಳೂ ಕನ್ನಡದಲ್ಲೇ ಎಲ್ಲ ವಿಚಾರಗಳನ್ನೂ ಕಲಿತುಕೊಳ್ಳಬೇಕು. ಅಂದರೆ ಕನ್ನಡ ನಮ್ಮ ಜನಪದದ ನಿತ್ಯಾನುಭವದ ಮಣ್ಣಿನ ಭಾಷೆಯಾದ್ದರಿಂದ ನಮ್ಮ ಮೇಲಿನ ವೈಚಾರಿಕ ಆವಕಾಶವನ್ನೂ ಅದು ನೇರವಾಗಿ ಗ್ರಹಿಸಬಲ್ಲದಾಗುತ್ತದೆ. ಆಗ ನಮ್ಮ ವಿಚಾರಕ್ಕೆ ಅನುಭವಮೂಲದ ಅಧಿಕೃತತ್ವ ಇರುತ್ತದೆ. ನಾವು ಬಾಯಿಪಾಠಮಾಡಿದ ಐರೋಪ್ಯ ಜ್ಞಾನದ ದಾಸರಾಗಿ ಉಳಿದಿರುವುದಿಲ್ಲ. ನಿಜ. ಮನುಷ್ಯನ ಮನಸ್ಸು ಬೆಳೆಯಲು ಇಂದಿನ ಜಗತ್ತಿನಲ್ಲಿ ಒಂದೇ ಭಾಷೆ ಕಲಿತರೆ ಸಾಲದು. ಹಿಂದೆ ಭಾರತಕ್ಕೆ ಸಂಸ್ಕೃತ ಅಥವಾ ಪರ್ಶಿಯನ್ನಿನ ಅಗತ್ಯವಿತ್ತು. ಈಗ ಇಂಗ್ಲಿಷಿನ ಅಗತ್ಯವಿದೆ. ಆದ್ದರಿಂದ ವೈಚಾರಿಕ ಗ್ರಹಿಕೆಗೆ, ಗ್ರಹಿಕೆಯ ವಿಸ್ತಾರಕ್ಕೆ ಇಂಗ್ಲಿಷನ್ನು ನಾವು ಬಳಸಬೇಕು. ಅಂದರೆ ಇಂಗ್ಲಿಷ್ ಕನ್ನಡಕ್ಕೆ ಸಾರವತ್ತಾದ ಗೊಬ್ಬರವಾಗಬೇಕು.

ಇದು ಒಂದೇ ಒಂದು ಕ್ರಮದಿಂದಾಗಿ ಈಗಿಂದೀಗಲೇ ಸಾಧ್ಯವಾಗುತ್ತದೆಂದು ನಾನು ತಿಳಿದಿದ್ದೇನೆ. ನಿಲ್ಲುವ ನೆಲೆಯಿಲ್ಲದೆ ಅಂತರರಾಷ್ಟ್ರೀಯವಾಗಬೇಕೆಂಬ ಕನಸಿನ ಅಪ್ಪ-ಅಮ್ಮಂದಿರ ಮಕ್ಕಳು ಇಂಗ್ಲಿಷಿನಲ್ಲಿ ಶಿಕ್ಷಣ ಪಡೆದು ಬೆಳೆಯುತ್ತಾರೆ.ಅದೂ ಈಗ ಚಾಲ್ತಿಯಲ್ಲಿರುವ ಪೈಪೋಟಿ ಶಿಕ್ಷಣದ ಪಂಚತಾರಾ ಮಾದರಿಯ ದುಬಾರಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ.ಎಲ್ಲೆಲ್ಲೋ ಸಲ್ಲಲೆಂದು ಇಲ್ಲಿ ಸಲ್ಲದಂತೆ ಈ ಮಕ್ಕಳು ಬದುಕುತ್ತಾರೆ, ಬದುಕಿ ಬೆಳೆಯುತ್ತಾರೆ. ಹೀಗಾಗಿ ಈ ದೇಶ ಎರಡು ದೇಶಗಳಾಗಿ ಬಿಡುತ್ತದೆ. ಶ್ರೀಮಂತರ ಇಂಡಿಯಾ, ಮತ್ತು ಬಡವರ ಭಾರತ. ನಮ್ಮ ರಾಜ್ಯಾಂಗದ ಉದ್ದೇಶಕ್ಕೆ ಇದು ಪರಮ ವಿರುದ್ಧವಾದುದು.

ನಾವು ನಂಬಬೇಕಾದ ಸೂತ್ರ ಇದು. ಇಲ್ಲಿ ಹುಟ್ಟುವ ಎಲ್ಲ ಮಕ್ಕಳೂ ಸಮಾನರು. ಈ ಮಕ್ಕಳಿಗೆ ಸಮಾನ ಶಿಕ್ಷಣ ದೊರೆಯಬೇಕು. ಇವು ಎಲ್ಲರಿಗೂ ಪ್ರವೇಶವಿರುವ ಸಾಮಾನ್ಯ ಶಾಲೆಗಳಲ್ಲೇ ದೊರೆಯಬೇಕು. ಈ ಮಕ್ಕಳು ಕನ್ನಡದಲ್ಲಿ ಕಲಿಯುತ್ತಿರುವಾಗಲೇ ವಿಸ್ತಾರವಾದ ಗ್ರಹಿಕೆಗಾಗಿ ಇಂಗ್ಲಿಷನ್ನೂ ಓದಿ ತಿಳಿಯಬಲ್ಲವರಾಗಬೇಕು. ಎಲ್ಲರೂ ಇಂಗ್ಲಿಷನ್ನು ಮಾತನಾಡಬಲ್ಲವರಾಗಬೇಕೆಂದು ನಾನು ಬಯಸುವುದಿಲ್ಲ. ವೇದಗಳನ್ನೆಲ್ಲ ಭಾಷಾಂತರ ಮಾಡಿದ ಮ್ಯಾಕ್‌ಮುಲ್ಲರ್ ಅಂಥವನು ನಮ್ಮ ಪಂಡಿತರಿಗೆ ಸಮಾನನಾಗಿ ಸಂಸ್ಕೃತದಲ್ಲೇ ಒಂದು ಗಂಟೆ ಉಪನ್ಯಾಸ ಮಾಡಬಲ್ಲವನಾಗಿದ್ದನೋ ಇಲ್ಲವೋ ನನಗೆ ತಿಳಿಯದು.

ನಮ್ಮ ಕನಸು ಇದು. ಕನ್ನಡದಲ್ಲಿ ಹೊಸ ಜ್ಞಾನದ ಸೃಷ್ಟಿಯಾಗಬೇಕು. ಈ ಹೊಸ ಜ್ಞಾನ ಕನ್ನಡದಿಂದ ಬೇರೆ ಭಾಷೆಗಳಿಗೆ ಅನುವಾದವಾಗಿ ಜಗತ್ತಿಗೇ ತಿಳಿಯುವಂತಹ ಕಾಲ ಬರಬೇಕು. ಅನುವಾದವೂ ಕೂಡ ಸತತ ನಡೆಯುವ ಅನ್ಯೋನ್ಯವಾದ ಕ್ರಿಯೆ ಆಗಿರಬೇಕು. ಬೇರೆ ಭಾಷೆಗಳಿಂದ ಕನ್ನಡಕ್ಕೆ, ಕನ್ನಡದಿಂದ ಬೇರೆ ಭಾಷೆಗಳಿಗೆ. ಅಂದರೆ ಕನ್ನಡದೊಳಗೇ ಜಗತ್ತಿನ ಹಲವು ಭಾಷೆಗಳ ಕಿಟಕಿಗಳು ತೆರೆಯಬೇಕು. ಕನ್ನಡದಲ್ಲಿ ವಿಶ್ವ ಇರುವಂತೆಯೇ ವಿಶ್ವದಲ್ಲೂ ಕನ್ನಡವೂ ಒಂದು ಮುಖ್ಯ ಭಾಷೆಯಾಗಿ ತಲೆ ಎತ್ತಬೇಕು.ವಿಶ್ವಕನ್ನಡ ಸಮ್ಮೇಳನ ಸಾರ್ಥಕವಾಗುವುದು ಅಂತಹ ಒಂದು ಸಂದರ್ಭದಲ್ಲಿ. ಇಲ್ಲವಾದರೆ ಇದೊಂದು ಮಾರ್ಕೆಟ್ ಕುದುರಿಸುವ ಮೇಳವಾಗಿ ಮಾತ್ರ ಉಳಿದುಬಿಡುತ್ತದೆ.

(ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪ್ರೋ.ಯು.ಆರ್. ಅನಂತಮೂರ್ತಿ ಮಾಡಿದ ಭಾಷಣದ ಪೂರ್ಣ ಪಾಠ.)

ಶ್ರೀಸಾಮಾನ್ಯ

- *ಪು.ತಿ.ನ*

(ಮಾರ್ಚ್ ೧೭ ವರಕವಿ ಪು.ತಿ.ನರವರ ಜನ್ಮದಿನ.
ಆ ಸವಿನೆನಪಿನಲ್ಲಿ. ಅವರ ಈ ಲಘುಹಾಸ್ಯ ಲೇಖನ. - ಸಂ)

ಈಗ ಸಾಮಾನ್ಯನೇ ನಮ್ಮ ಪ್ರಭು-ಇದು ಆತನ ರಾಜ್ಯ ಎಂಬ ಸೊಲ್ಲು ಎಲ್ಲೆಲ್ಲೂ ಮೊಳಗುತ್ತಿದೆ. ರಾಜನೆಂದರೆ ಆತನನ್ನು ನೋಡಲು ಎಲ್ಲರೂ ಆಸೆ ಪಡುವುದು ಸ್ವಾಭಾವಿಕ. ಆದರೆ ಆತನನ್ನು ಪತ್ತೆಮಾಡುವುದೇ ಕಷ್ಟವಾಗಿದೆ. ಶ್ರೀಮಾನ್ ಸಾಮಾನ್ಯನಾರು-ಆತ ಎಲ್ಲಿದ್ದಾನೆ-ಅವನ ವೈಶಿಷ್ಟ್ಯವೇನು, ಅವನಿಗೂ ಅಸಾಮಾನ್ಯನಿಗೂ ಇರುವ ವೈಲಕ್ಷಣ್ಯವೆಲ್ಲಿದೆ? ಬಹಳ ವರ್ಷಗಳಿಂದ ಇದನ್ನು ಆಲೋಚಿಸುತ್ತಿದ್ದೇನೆ. ಅದರೆ ತೋಚದು. ಯಾವ ವ್ಯಕ್ತಿಯಾದರೂ ಸರಿಯೆ ನನಗೆ ಸಾಮಾನ್ಯನ ಹಾಗೆ ತೋರುವುದೇ ಇಲ್ಲ; ದೇವರು ಆತನಿಗೆ ಸ್ವಲ್ಪ ಗಮನಕೊಟ್ಟು ಸೃಷ್ಟಿಸಿದಂತೆಯೇ ಕಾಣುತ್ತದೆ. ನಮ್ಮ ಮನೆಗೆ ಭಿಕ್ಷಕ್ಕೆ ಆಗಾಗ ಒಬ್ಬ ದಾಸಯ್ಯ ಬರುತ್ತಾನೆ. ಬಲಗೈಯಲ್ಲಿ ಶಂಕು ಎಡಗೈಯಲ್ಲಿ ಜಾಗಟೆ. ಜಾಗಟೆಯನ್ನು ಒಂದು ತ್ರಿಶ್ರಗತಿಯಲ್ಲಿ ಬಾರಿಸುತ್ತ ಆತ ಶಂಖದಲ್ಲಿ ಒಂದು ತರದ ಓಂಕಾರನಾದವನ್ನು ಸುಮಾರು ಎರಡು ಮೂರು ನಿಮಿಷಗಳ ಕಾಲ ಹೊರಡಿಸುತ್ತಾನೆ. ಅದನ್ನು ಕೇಳಿದ ಕಿವಿಗೆ ಬೇರೊಂದು ರುಚಿಸದು. ಸಂಗೀತದ ಪಲುಕುಗಳೆಲ್ಲ ಅಪ್ರಯೋಜಕ ಅದರ ಮುಂದೆ-ಇನ್ನು ಹೊನ್ನು, ಅವು ಗುನ್ನಾಂ ಪಟ್ಟೆಯ ತುಣುಕುಗಳು. ಹೀಗೆ ನಮ್ಮ ಮನಸ್ಸನ್ನು ನಿರ್ಮಲೋಲ್ಲಾಸದಿಂದ ತುಂಬುವ ಆ ಮನುಷ್ಯನನ್ನು ಸಾಮಾನ್ಯ ಎಂದು ಹೇಳಲಾಗುತ್ತದೆಯೇ? ಹೀಗೆ ಅನೇಕರ ವಿಷಯದಲ್ಲಿ ಸಾಮಾನ್ಯತಾ ಭ್ರಮೆ ನನಗೆ ಅವರವರ ವಿಶಿಷ್ಟ ವ್ಯಕ್ತಿಮೆಯಿಂದ ತೊಲಗಿ ಹೋಗಿದೆ. ಹಾಗೆ ನೋಡಿದರೆ ನನ್ನಲ್ಲಿ ನನಗೇನೂ ವ್ಯಶಿಷ್ಟ್ಯ ಕಾಣುವುದಿಲ್ಲ. ಆದುದರಿಂದ ನಾನೇ ಶ್ರೀಸಾಮಾನ್ಯ ಎಂಬ ಖಚಿತವಾದ ತಿಳಿವಳಿಕೆಗೆ ಬಂದುಬಿಟ್ಟಿದ್ದೇನೆ. ನನ್ನ ಮನೆಯವರೂ, ನೆರೆಹೊರೆಯವರೂ, ಸಹೋದ್ಯೋಗಿಗಳೂ, ಪದವೀಧರರೂ, ಪ್ರತಿಷ್ಠಾವಂತರೂ ಇದನ್ನು ಗಳಿಗೆಗಳಿಗೆಗೂ ಸ್ಥಿರಪಡಿಸುತ್ತಿದ್ದಾರೆ; ಈ ಸ್ಥಿರೀಕರಣದಲ್ಲಿ ನಾನೂ ಸಹ ಏನೂ ಹಿಂದೆ ಬಿದ್ದಿಲ್ಲ. ನಗರದ ದೊಡ್ಡ ರಸ್ತೆಗಳ ಮಗ್ಗುಲಿಗೆ ಸೊಂಟದೆತ್ತರಕ್ಕೆ ಹಾಕಿರುವ ಕಲ್ಲುಗೋಡೆಯ ಹಾಸುಗಲ್ಲಿನ ಮೇಲೆ ಮಧ್ಯಾಹ್ನದ ಹೊತ್ತು ಕುಳಿತುಕೊಂಡು ಗಾಂಧೀಬಾದಾಮಿಯನ್ನು ಅರ್ಥಾತ್ ನೆಲಗಡಲೆಕಾಯನ್ನು ಹೊಟ್ಟು ಬಿಡಿಸಿ ತಿನ್ನಲು ನನಗಾಸೆ. ಅದೇ ಗೋಡೆಯ ಮೇಲೆ ಸ್ವಲ್ಪ ದೂರದಲ್ಲಿ ಪರಂಗಿಹಣ್ಣು, ಸೌತೇಕಾಯಿ, ಸೀಬೆ ಹಣ್ಣು, ಟೊಮಾಟೋ ಇತ್ಯಾದಿಗಳನ್ನು ಒಂದು ಗಾಜಿನ ಡಬ್ಬದಲ್ಲರಿಸಿಕೊಂಡು ಚೂಪಾದ ಚೂರಿಯಲಗಿನಲ್ಲಿ ಮೋಜಾಗಿ ಹೆರೆದು ಕತ್ತರಿಸಿ ಉಪ್ಪು ಕಾರವನ್ನು ಹಚ್ಚಿಕೊಡುವ ವ್ಯಾಪಾರಿಯ ಹತ್ತಿರ ವ್ಯವಹರಿಸಲೂ ನಾನು ಹಿಂದು ಮುಂದು

ನೋಡೆನು. ಕರಗದ ಗುಂಪಿನಲ್ಲಿ ಕರಗಿಹೋಗಲು ನನಗುತ್ಸಾಹವಿನ್ನೂ ತೀರಿಲ್ಲ. ನಗರದ ಬಸ್ಸಿನಲ್ಲಿ ಕುಳಿತರೆ ಪ್ರಾಯಶಃ ನನ್ನ ಮಗ್ಗುಲನ್ನು ಅರಸಿಕೊಂಡು ಬರುವವನು ಶ್ರೀಸಾಮಾನ್ಯ. ಅಲ್ಲಿ ಮುಂದಿನ ಸೀಟಿನಲ್ಲಿ ಠೀವಿಯಿಂದ ಯೂರೋಪಿನವನ ಹಾಗೆ ಉಟ್ಟು ತೊಟ್ಟು ಕುಳಿತಿರುವವನ ಮಗ್ಗುಲಲ್ಲಿ ಜಾಗವಿದ್ದರೂ ಅಲ್ಲಿಗೆ ಹೋಗುವೊಲ್ಲ; ನನ್ನ ಪಕ್ಕದ ಇರುಕಿಗೇ ಬರಲು ಹವಣಿಸುತ್ತಾನೆ. ಈ ಊರಿನಲ್ಲಿ ದಾರಿ ಕೇಳುವ ಹಳ್ಳಿಗನು ಹತ್ತಿರ ನಿಂತಿರುವ ಠಾಕ್‌ಠೀಕ್ ಪುರುಷನನ್ನು ಕೇಳದೆ ನನ್ನನ್ನೇ ಏಕೆ ಕೇಳಬೇಕು? ನನ್ನಲ್ಲಿ ಆತ ತನ್ನಲ್ಲಿರುವ ಸಾಮಾನ್ಯತೆಯನ್ನು ಗುರುತಿಸಿಯೆ ಅಲ್ಲವೆ? ಕೋರ್ಟು ಕಚೇರಿ ಆಸ್ಪತ್ರೆಗಳನ್ನುಕಂಡರೆ ನನಗೂ ಆತನಷ್ಟೇ ಭಯ. ಕ್ಲಬ್ಬುಗಳಲ್ಲಿ ನನಗೆ ಸದರವೂ ಇಲ್ಲ, ಪ್ರವೇಶವೂ ದೊರೆಯದು. ಕಾಫಿ ಹೋಟಲಿಗೆ ಹೋದರೆ ಪ್ರಾಯಶಃ ಮಾಣಿ ನನಗೆ ಪಿಂಗಾಣಿ ಬಟ್ಟಲಿನಲ್ಲಿ ಕಾಫಿಯನ್ನು ತಂದಿರಿಸನು, ಗಾಜಿನ ಲೋಟವೇ ನನ್ನ ಪಾಲಿಗೆ; ಅದೇ ನನ್ನ ಮಗ್ಗುಲಲ್ಲಿ ಶ್ರೀಮಂತಠೀವಿಯಲ್ಲಿರುವ ಮನುಷ್ಯನಿಗೆ ಅದೇ ಮಾಣಿ ಪಿಂಗಾಣಿ ಕಪ್ಪು ಸಾಸರುಗಳಲ್ಲಿ ಆ ಮಹಾಪಾನೀಯವನ್ನು ಬಡಿಸಬೇಕೇ? ನನ್ನ ಜುಬ್ಬದ ತೋಳಿನಂಚಿನಲ್ಲೋ, ಕತ್ತಿನ ಪಟ್ಟಿಯಲ್ಲೋ ಕೋಟಿನ ಗುಂಡಿಯಲ್ಲೋ, ಬೋಳುತಲೆಯೊ ಅಥವಾ ಹಣೆಯಲ್ಲೋ, ಸಾಮಾನ್ಯತೆಯ ಕುರುಹು ಅಚ್ಚಳಿಯದೆ ಕೆತ್ತಿರಬೇಕು, ಯಾರು ನೋಡಿದರೂ ಗುರುತಿಸುವಹಾಗೆ.

ಹೀಗೆ ನಾನೊಬ್ಬ ಸಾಮಾನ್ಯ ಎಂದು, ಆ ತನದಲ್ಲಿ ಹಾಯಾಗಿ ರಾಜನ ಹಾಗೆ ಇದ್ದುಕೊಂಡಿರಬೇಕಾದರೆ ಸ್ಟೇಟ್ ಟೀಪಾರ್ಟಿಗೆ ಇದ್ದಕ್ಕಿದ್ದ ಹಾಗೆಯೇ ಒಂದೊಂದು ಸಲ ಆಮಂತ್ರಣಪತ್ರಿಕೆ ರಾಜಲಾಂಛನದೊಡನೆ ಬಂದುಬಿಡುತ್ತದೆ. ಮನೆಯವರಿಗೆ ಏನೋ ಸಿರಿಬಂದಷ್ಟು ಸಂತೋಷ ಅಷ್ಟಗಲದ, ಅಷ್ಟುದ್ದದ, ಅಷ್ಟು ಮಂದವಾದ ದಂತದಂಥ ಹಾಲುಕಾಗದರಟ್ಟಿನಲ್ಲಿ ಈ ಸ್ವರ್ಣಾಂಚಿತ ರಿಬ್ಬನ್ ವಿಭೂಷಿತ ಆಹ್ವಾನಪತ್ರಿಕೆಯನ್ನು ಕಂಡು ನನಗೂ ಆಶ್ಚರ್ಯ–ನಾನೂ ಅಸಾಮಾನ್ಯನೇ? ಇದು ದಾರಿತಪ್ಪಿ ಬಂದಿರಬಹುದೆಂದು ಎರಡು ಮೂರುಸಲ ವಿಳಾಸವನ್ನು ನಾನು ನೋಡಿದ್ದುಂಟು–ಜತೆಗೊಂದು ಕಾರುಪಾಸು ಬೇರೆ–ಭಲೆ ಕಾಂಪೌಂಡು ಗೋಡೆಯ ಕುಡ್ಯವಾಹನನನ್ನೂ, ಕ್ಷೌರಿಕನು ಕನಿಕರದಿಂದ ಉಳಿಸಿರುವ ಜುಟ್ಟಿಗನನ್ನೂ, ಬಸ್ಸಿಗೆ ಕ್ಯೂ ಕಾಯುವ ಈ ಮಹಾರಥಾಶ್ರಯನನ್ನೂ ಅವರು ಏನೆಂದುಕೊಂಡರೋ. ಇರಲಿ, ಯಾವ ಸಾಮಾನ್ಯನಿಗೆ ಅಸಾಮಾನ್ಯನಾಗ ಬೇಕೆಂಬಾಸೆಯಿಲ್ಲ, ತನ್ನ ಮನೆಯವರ ಮಟ್ಟಿಗಾದರೂ? ಆಗ ಡ್ರೆಸ್ಸನ್ನು ಹವಣಿಸಿಕೊಳ್ಳುವುದೇ ಒಂದು ದೊಡ್ಡ ಸಡಗರ. ಜುಬ್ಬವನ್ನೂ ಟೋಪಿಯನ್ನೂ ಇಸ್ತ್ರಿಮಾಡಿಸಿರುವುದಿಲ್ಲ, ಉಟ್ಟ ಪಂಚೆಯ ಬಿಳುಪು ಸಾಲದು, ಆಮೇಲೆ ಟ್ಯಾಕ್ಸಿಗಾಗಿ ಮುಡುಪಿನ ಡಬ್ಬಗಳನ್ನೆಲ್ಲ ಶೋಧಿಸಿ ಅಷ್ಟಿಷ್ಟು ರೂಪಾಯಿಗಳನ್ನು ಹವಣಿಸಿಕೊಳ್ಳಬೇಕಾಗುತ್ತದೆ. ಸೌಧದ ತೋರಣಬಾಗಿಲಿನಲ್ಲಿ ಇಳಿದರೆ ನಿಮಗೆ ವೈಭವದ ಸ್ವಾಗತ ದೊರೆಯುತ್ತದೆ. ಸರ್ಕಾರದ ಮುಖ್ಯಕಾರ್ಯದರ್ಶಿಯವರೂ ಸಹ (ಇವರು ಸದ್ಯಕ್ಕೆ ನಿಮಗೆ ಅಪರಿಚಿತರು–ಪರಿಚಿತರಾಗಿದ್ದರೆ ನಿಮಗೆ ಅಮಂತ್ರಣವೇ ಬರುತ್ತಿರಲಿಲ್ಲ) ಬಗ್ಗಿ ನಮಸ್ಕರಿಸಿ ಒಳಕ್ಕೆ ದಯಮಾಡಿಸಿರೆಂದು ಸನ್ನೆಗೈಯುತ್ತಾರೆ. ಅಭ್ಯಾಸವಿಲ್ಲದ ನಿಮಗೆ

ಆ ಶಿಷ್ಟ ಶಿಕ್ಷಿತ ವಿನಯ ನಟನೆ ದಂಗುಬಡಿಸುತ್ತದೆ. ಒಳಕ್ಕೆ ಹೋದ ಮೇಲೆ ಆ ದೃಶ್ಯ ಬೇರೆ. ಪ್ರಾಯಶಃ ತಿಳಿದವರಾರೂ ಕಣ್ಣಿಗೆ ಬೀಳುವುದಿಲ್ಲ. ಬಿದ್ದರೂ ನಿಮ್ಮ ಸಹವಾಸ ಅವರ ಮಾನಕ್ಕೆ ಕಡಮೆ. ದಿವ್ಯ ವಸ್ತ್ರಾಲಂಕಾರ ಭೂಷಿತರಾದ ಗಂಡಸರೂ ಹೆಂಗಸರೂ ನಿಮ್ಮ ಕಡೆ ತಮ್ಮ ಕೂರ್ ನೋಟವೆಸೆದು, ಇವನೇಕೆ ಇಲ್ಲಿ ಬಂದ, ಇದು ಡೆಮಾಕ್ರೆಸಿಯ ವೈಭವ ಶಿಸ್ತಲ್ಲ, ಮರ್ಯಾದೆಯಿಲ್ಲ, ಔಚಿತ್ಯವಿಲ್ಲ ಎಂದುಕೊಳ್ಳುವ ಆ ಮೌನದ ಮಾತು ನಿಮ್ಮ ಕಿವಿಯಲ್ಲಿ ರಣರಣಿಸುತ್ತದೆ. ನಿಮಗೆ ಯಾರನ್ನು ಮಾತಾಡಿಸಬೇಕು, ಎಲ್ಲಿ ಕೂರಬೇಕೆಂಬುದೇ ಗೊತ್ತಾಗುವುದಿಲ್ಲ. ನೀವು ಸೀಟಿಗೆ ತಡಕಾಡುವುದರಲ್ಲೇ ನಿಮ್ಮ ಸಾಮಾನ್ಯತೆ ಎಲ್ಲರಿಗೂ ವಿಶಾದವಾಗಿಬಿಡುತ್ತದೆ. ಅ-ಸಾಮಾನ್ಯರಾಗಿದ್ದರೆ ಆ ಮೊದಲಸಾಲಿನ ಕುಸುಮಾಲಂಕೃತ ಫಲಭರಿತ ಮೇಜಿನ ಹಿಂದಿನ ಮೆತ್ತನೆ ಕುರ್ಚಿಯ ಮೇಲೆ ನೀವೇಕೆ ಹೋಗಿಕೂರಲಿಲ್ಲ? ಕೂತಿದ್ದರೆ ಯಾರು ತಡೆಯುತ್ತಿದ್ದರು? ಸಾಮಾನ್ಯತೆಗೆ ಭೀರುತೆಯೂ ಒಂದು ಚಿಹ್ನೆ. ನೀವೊಂದು ಖಾಲಿ ಮೇಜನ್ನು ಆರಿಸಿ ಒಂದು ಆಭುಕ್ತಮೂಲೆಯಲ್ಲಿ ಕುಳಿತುಕೊಳ್ಳುತ್ತೀರಿ. ಅಲ್ಲಿಗೆ ಒಬ್ಬರಿಬ್ಬರು ಅಸಾಮಿಗಳೂ ಬರಬಹುದು. ಅದರೆ ನೀವು ಯಾರೆಂದೂ ಯಾವ ದರ್ಜೆಯವರೆಂದೂ ತಿಳಿದಕೂಡಲೇ ಅವರು ಯಾವುದೋ ಒಂದು ನೆಪ ಹೇಳಿ ನಿಷ್ಕ್ರಮಿಸುತ್ತಾರೆ. ಕೊನೆಗೆ ನಿಮ್ಮ ಜತೆಗುಳಿವವರು ಅವರಿವರನ್ನು ಪುಸಲಾಯಿಸಿ ದಾಕ್ಷಿಣ್ಯದಿಂದ ಆಹ್ವಾನವನ್ನು ಗಿಟ್ಟಿಕೊಂಡಿರುವ ಸಾಮಾನ್ಯರೇ. ಅವರೂ ಸಹ ನಿಮ್ಮತ್ತ ಗಮನಕೊಡರು. ಏಕೆಂದರೆ ವರ್ಗದವರ ನಡೆಗಳನ್ನು ನಿಟ್ಟಿಸಿ, ನುಡಿಗಳನ್ನು ಆಲಿಸುತ್ತಾ, ಅವರ ಚರಿತೆಗಳನ್ನು ಚರ್ಚಿಸುತ್ತಾ, ಅವರ ಅಂತಸ್ತು ಐಶ್ವರ್ಯಗಳನ್ನು ಅನೇಕವೇಳೆ ತೆಗಳುತ್ತಾ ಕೆಲವುಸಲ ಹೊಗಳುತ್ತಾ ಅತ್ತಲೇ ತಮ್ಮ ಗಮನವನ್ನೆಲ್ಲ ಇರಿಸುತ್ತರೆ ಆ ಸ್ವಾಮಿಗಳು. ಅಲ್ಲಿಯೂ ನಿಮಗೆ ವಿವಿಕ್ತತೆ ತಪ್ಪುವುದಿಲ್ಲ. ಡವಾಲಿಗರೂ ಇದೊಂದು ಕರ್ಮ ಎಂಬಂತೆ ನಿಮಗೆ ಕಾಫಿ ಸುರಿದರೂ ಸುರಿದರೇ ಅತ್ತ ಸರಿದರೂ ಸರಿದರೇ. ಕಾಣಿಕೆ ಡಬ್ಬಿಗಳನ್ನು ಖಾಲಿಮಾಡಿದುದೂ ಹುಡುಗರನ್ನು ಬೈದಾಡಿದುದೂ ಗರಿಬಟ್ಟೆಗಳಿಗಾಗಿ ಸಡಗರಿಸಿದುದೂ ವೃಥಾ ಅಯಿತೆಂಬ ಕೊರಗಿನಿಂದ ನೀವು ಮನೆ ಸೇರುತ್ತೀರಿ. ಆದರೆ ಮನೆಯವರಿಗೆ ನಿಮ್ಮ ವರ್ಣನೆಯೇ ಬೇರೆಯಾಗಿರುತ್ತದೆ. ಪಾಪ, ನಿಜವನ್ನು ಹೇಳಿ ಅವರ ಮುಖದಮೇಲೂ ಏಕೆ ತಣ್ಣೀರೆರೆಚಬೇಕು? ಇಷ್ಟಾದರೂ ಈ ಅನುಭವದಿಂದ ನಿಮಗೆ ಬುದ್ಧಿಬಂದಿತೆಂದೂ ಮುಂದೆ ಎಂದೂ ಇಂಥ ಆಮಂತ್ರಣಗಳನ್ನು ಮನ್ನಿಸುವುದಿಲ್ಲವೆಂದು ಆಣೆ ಇಟ್ಟುಕೊಂಡಿದ್ದನ್ನು ನೀವು ಮುರಿಯುವುದಿಲ್ಲವೆಂದೂ ಹೇಳಲಾರೆ-ಏಕೆಂದರೆ ವರ್ಗದವನಿಗೆ ಸಾಮಾನ್ಯತೆಯಲ್ಲಿ ಎಷ್ಟು ತಿರಸ್ಕಾರವಿದೆಯೋ ಶ್ರೀಸಾಮಾನ್ಯನಿಗೆ ವರ್ಗಕ್ಕೇರುವುದರಲ್ಲಿ ಅಷ್ಟು ಪುರಸ್ಕಾರವಿದೆ. ಈ ದೊಡ್ಡಸ್ತಿಕೆಯ ದಾಸಯ್ಯತನವನ್ನು ನಮ್ಮ ಸ್ವಾತಂತ್ರ್ಯವನ್ನೇ ಕೊಟ್ಟು ಕೊಂಡುಕೊಂಡು ಸಾವಿರಾರು ವರ್ಷಗಳಿಂದ ಬೆಳಸಿಕೊಂಡು ಬಂದಿದೇವಲ್ಲ; ಇಷ್ಟು ಅಮೋಘವಾದ ಐಶ್ವರ್ಯವನ್ನು ಹೇಗೆ ಬಿಟ್ಟು ಕೊಡುವುದು? ಮತ್ತೊಂದು ರಾಷ್ಟ್ರಹ್ವಾನ, ಮತ್ತಷ್ಟು ಪ್ರತ್ಯೇಕತೆ, ಮತ್ತೆ ನಿರ್ವೇದ, ಇವು ಪುನರಾವರ್ತಿಸಿ ನೀವು ಯಾವ ವರ್ಗಕ್ಕೆ ಸೇರಿದವರೆಂಬುದನ್ನು ದೃಢಗೊಳಿಸುತ್ತವೆ.

ನೀವು ಏನೇ ಎನ್ನಿ, ರಾಜನೆನ್ನಿ, ಸಾಂರಾಟನೆನ್ನಿ ಸರ್ಕಾರವೇ ನಿಮ್ಮ ಸೇವಕನೆಂದು ಎಷ್ಟೇ ಪುಸಲಾಯಿಸಿ, ನಮ್ಮೀಗಿನ ಶ್ರೀಸಾಮಾನ್ಯನಿಗೆ ತನ್ನ ಸಾಮಾನ್ಯತೆಯಲ್ಲಿ ಇಷ್ಟವೇ ಇಲ್ಲ. ತಮ್ಮ ಮೇಲುಗಾರಿಕೆಯನ್ನು ಯಾವ ವಿಧದಿಂದಲಾದರೂ ತೋರಿಸಿಕೊಳ್ಳಬೇಕೆಂಬ ಆಸೆ ಜನಸಾಮಾನ್ಯಕ್ಕೇ ಅಂಟಿಕೊಂಡಿರುವಂತಿದೆ. ಅದಕ್ಕಾಗಿಯೇ ಸಾಮಾನ್ಯ ಗಂಡ ತನ್ನ ಹೆಂಡತಿಯನ್ನು ಹೊಡೆದೋ ಮಕ್ಕಳನ್ನು ಬೈದೋ ಬಡಿದೋ ತನ್ನ ಪ್ರಾಧಾನ್ಯವನ್ನು ಮೆರೆಸುತ್ತಾನೆ. ಕೆಲವು ಸಂಸಾರಗಳಲ್ಲಿ ಇದು ತಿರುಗುಮುರುಗಾಗುವುದೂ ಇದೇ ಕಾರಣದಿಂದಲೇ. ಜಾತಿ ಮತ ಮಡಿಮೋಹಗಳು ಭಾರತದಲ್ಲೇ ಏಕೆ ನೆಲಸಬೇಕು? ಕೆಲಸಕ್ಕೆ ಬಾರದವರ ಶ್ರೇಷ್ಠತಾ ಕಾಮದಿಂದ ಅಲ್ಲವೆ? ಕೆಲವರಿಗೆ ಪೊಟ್ಟಣಕ್ಕೆ ಕಟ್ಟಿರುವ ರೀಲಿನ ದಾರವೂ ಸಹ ಮೈಲಿಗೆ-ಮೈಲಿಗೆ ಮುಟ್ಟಾದರೆ ಬಾಯಿಂದ ಹೊರಡುತ್ತವೆ ದುಸ್ಸಹ ದುರ್ಗಂಧ ಶಬ್ದಗಳು. ಕೆಲಸಾಮಾನ್ಯರಿಗೆ ಪೀಠದ ದೊಡ್ಡಸ್ತಿಕೆ, ಕೆಲವರಿಗೆ ವಸ್ತ್ರಗಳದು, ಮತ್ತೆ ಕೆಲವರಿಗೆ ಲಾಂಛನಗಳದು. ಕೆಲಸಾಮಾನ್ಯರನ್ನು ಊಟಕ್ಕೂ ತಾಂಬೂಲಕ್ಕೂ ಹತ್ತುಸಲ ಕರೆಯಬೇಕು. ಗುಂಪಿಗೆ ಸೇರದಿರುವುದೇ ಕೆಲವರ ದೊಡ್ಡಸ್ತಿಕೆ. ಮಕ್ಕಳನ್ನು ಹೊಡೆದಷ್ಟೂ ಅಟ್ಟಿಕೊಂಡಷ್ಟೂ ಉಪಾಧ್ಯಾಯ ಸಾಮಾನ್ಯರಿಗೆ ಊರೊಟ್ಟಿನಲ್ಲಿ ಪ್ರಾಶಸ್ತ್ಯ; ಪೆಟ್ಟಿಗೆಗೆ ಮೊಳೆಗಳನ್ನು ಬಡಿಯುವ ಹಾಗೆ ಅವರು ಅಕ್ಷರಗಳನ್ನೂ ಲೆಕ್ಕಗಳನ್ನೂ ಎಳೆಯರ ತಲೆಗೆ ಬಡಿದೇ ಬಡಿಯುತ್ತಾರೆ. ಇವೆಲ್ಲ ವಿಶಿಷ್ಟರೆನಿಸಿಕೊಳ್ಳುವ ಉನ್ಮಾದದ ಲಕ್ಷಣ-ಅವರು ಸುಸಂಸ್ಕೃತರಲ್ಲ, ಕೋಮಲ ಹೃದಯರಲ್ಲ ಎಂದು ಯಾರೂ ಹೇಳುವಹಾಗಿಲ್ಲ. ಆಶ್ಚರ್ಯ ಆಶ್ಚರ್ಯ, ಪದವಿ ಪ್ರತಿಷ್ಠೆಗಳು ಸಾಮಾನ್ಯ ಮನುಷ್ಯನಿಗೆ ಬಂದಾಗ ಎಷ್ಟು "ನಿಲುಭಾರ" ಅವನಿಗೆ! ಕತ್ತೇ ತಿರುಗದು, ಕಣ್ಣುಗಳು ನೆಟ್ಟಗಾಗುತ್ತವೆ, ತುಟಿಗಳು ಬಿಗಿಯುತ್ತವೆ, ಆತನ ಕೈಗಳು ಕೀಲುಗೊಂಬೆಗಳಂತೆ ಆಗಿಬಿಡುತ್ತವೆ; ಮೊದಲು ಸ್ವೇಚ್ಛೆಯಿಂದಲೂ ನೈಜವಿನಯದಿಂದಲೂ ನಿಮಗೆ ನಮಸ್ಕಾರವನ್ನು ಸೂಚಿಸಿದ ಕೈಗಳು ಇದ್ದಕ್ಕಿದ್ದ ಹಾಗೆಯೇ ಸೆಟೆತುಕೊಂಡು ನೀವು ನಿಮ್ಮದನ್ನೆತ್ತಿ ಅದಕ್ಕೆ ಚಲನವನ್ನು ಕೊಟ್ಟಾಗ ಮಾತ್ರ ಸಡಿಲವಾಗಿ ನಿಮ್ಮನ್ನು ಅನುಕರಿಸುತ್ತವೆ. ಇಲ್ಲವಾದರೆ ಸ್ತಬ್ಧವಾಗಿಯೇ ಇದ್ದುಬಿಡುತ್ತವೆ. ಶ್ರೀಸಾಮಾನ್ಯ ಹೀಗೆ ಶ್ರೀಮಂತಿಕೆಯ ಹಿಡಿತಕ್ಕೆ ಸಿಕ್ಕಿದಾಗ ಆತನ ಮೈ ವಾತಗ್ರಸ್ತವಾಗುವುದೋ ಏನೋ ಎಂದೆನಿಸುತ್ತದೆ ನಮಗೆ. ನಮ್ಮನ್ನು ಕಂಡರೆ ನಗೆಮೊಗದಿಂದ ಮಾತಾಡಿಸಿ ಗೌರವವನ್ನು ಸೂಚಿಸಿದ ಮನುಷ್ಯನೊಬ್ಬ ನನ್ನ ಪಕ್ಕದಲ್ಲಿ ಅರ್ಧಗಂಟೆಯ ಕಾಲ ಬಸ್ಸಿಗೆ ಕಾದು ನಿಂತಿದ್ದರೂ ನನ್ನತ್ತ ತಿರುಗುವೊಲ್ಲ, ಮಾತನಾಡಿಸುವೊಲ್ಲ; ನಾನು ಈತ ಬೇರೆ ಮನುಷ್ಯ ಎಂದೇ ತಿಳಿದುಕೊಂಡು ಸುಮ್ಮನಾದೆ-ಆಮೇಲೆ ವಿಚಾರಿಸಿದರೆ ಅವನು ಅದೇ ಆಸಾಮಿಯೆಂದೂ ಆದರೆ ಆಗ ತಾನೇ ಗೆಜೆಟೆಡ್ ಪದವಿಗೆ ಏರಿದನೆಂದೂ ತಿಳಿಯಿತು. ಈಗ ನೆನೆದುಕೊಂಡರೆ, ಆತನ ವೇಷವೂ ಬದಲಾಯಿಸಿತ್ತು-ನೆಕ್‌ಟೈ ಕಟ್ಟಿಕೊಂಡಿದ್ದ ಮತ್ತು ತೋಳಿನ ಸಂದಿಯಲ್ಲಿ ಹ್ಯಾಟನ್ನಿರಿಸಿಕೊಂಡಿದ್ದ-ಈ ವಸ್ತ್ರಲಾಂಛನಗಳಿಂದ ನಾನು ತಿಳಿದುಕೊಳ್ಳಬೇಕಾಗಿತ್ತು -ಆದರೆ ಈ ಮಂಕುಬುದ್ಧಿಗೆ ಅದು ಹೊಳೆಯಲಿಲ್ಲ.

ಲಾಂಛನಗಳ ಮಾತು ಬಂದಿತಲ್ಲ, ಈಗ ಮತ್ತೊಂದು ವಿನೋದಾಂಶ ನೆನಪಿಗೆ ಬರುತ್ತದೆ. ನನ್ನೊಂದು ಹುದ್ದೆಯಲ್ಲಿ ನನಗೆ ಕತ್ತರಿ ಚಾಕು ಗೋಂದು ಪಿನ್ನು ಗಾಜಿನಗುಂಡು ಶಾಯಿ ರಬ್ಬರು ಕೆಂಪು–ನೀಲಿ ಸೀಸದಕಡ್ಡಿ ಮುಂತಾದ ಸಾಮಗ್ರಿಗಳು ಅವಶ್ಯಕವಾಗಿ ಬೇಕಾಗಿದ್ದವು. ಅವುಗಳಿಲ್ಲದೆ ಕೆಲಸವೇ ಜರಗುತ್ತಿರಲಿಲ್ಲ. ಅವನ್ನು ತರಿಸಿಕೊಳ್ಳಬೇಕಾದರೆ ನನಗೆ ಸಾಧ್ಯವೇ ಆಗಲಿಲ್ಲ. ಅವೆಲ್ಲ ಅಧಿಕಾರಿಲಾಂಛನಗಳು! ನನಗಿದು ಗೊತ್ತಿರಲಿಲ್ಲ. ನನ್ನ ದರ್ಜೆ ದೈವವಶಾತ್ ಏರಿದಮೇಲೆ ಒಂದು ದಿನ ಇದ್ದಕ್ಕಿದ್ದ ಹಾಗೆಯೇ ಹರಿದ್ವಸ್ತ್ರಾವೃತವಾಗಿ ಪ್ರಸನ್ನವಾಗಿರುವ ಮೇಜಿನ ಮೇಲೆ ಇವೆಲ್ಲ ಓರಣಗೊಂಡಿದ್ದವು. ಆದರೆ ದರ್ಜೆ ಏರಿದ್ದರಿಂದ ಇವುಗಳ ಉಪಯೋಗ ನನಗೆ ಅಷ್ಟಾಗಿ ಬೇಕಿರಲಿಲ್ಲ. ಈ ಪದಾರ್ಥಗಳನ್ನು ನೋಡಿಯೇ ಅಂತಸ್ತನ್ನು ಗುರುತಿಸಬಹುದು. ಇವೇ ಸಾಮಾನ್ಯನನ್ನೂ ವಿಶಿಷ್ಟನನ್ನೂ ಪ್ರತ್ಯೇಕಿಸುವ ಎಲ್ಲೆಗೆರೆಗಳು. ನಮ್ಮ ದೇಶದಲ್ಲಿ ಇದೊಂದು ಸ್ವಾರಸ್ಯ. ನೈಷ್ಕರ್ಮ್ಯ ಸಿದ್ಧಿಗೆ ಅಧಿಕಾರದ ನಿಚ್ಚಣಿಗೆಯೇ ದಾರಿ. ನಮ್ಮ ದೇಶದಲ್ಲಿ ಅಂತಸ್ತಿಗೆ ಪ್ರಾಶಸ್ತ್ಯವಿರುವಷ್ಟು ಉಪಯುಕ್ತತೆಗಲ್ಲ ಎಂಬುದು ನನಗಾಗ ಮನದಟ್ಟಾಯಿತು. ಏಕೆಂದರೆ ಒಂದುದಿನ ಮದರಾಸಿನ ಅಮೆರಿಕನ್ ಕಾನ್‌ಸುಲೇಟ್‌ಗೆ ನಾನು ಹೋಗಬೇಕಾದ ಪ್ರಸಂಗ ಬಂದಿತು. ಅಲ್ಲಿ ನೋಡಿದಾಗ ಸಾಮಾನ್ಯನೆನ್ನದೆ ಅಧಿಕಾರಿ ಎನ್ನದೆ ಎಲ್ಲರಿಗೂ ಪ್ರಶಸ್ತವಾದ ದೊಡ್ಡಮೇಜು, ತಿರುಗು ಮೆತ್ತೆಕುರ್ಚಿ, ಬೇಕಾದ ಸಾಮಾನಗಳು, ಕೆಲಸಕ್ಕೆ ಹುಮ್ಮಸ್ಸು ಕೊಡುವ ಪರಿಸರ ಇವೆಲ್ಲ ಇದ್ದವು. ಆದರೆ ಅಮೇರಿಕಾ ಕೆಲಸಗರರ ಸೀಮೆ; ವರಂಪೇರೀ ಸ್ವಾಮಿಗಳದಲ್ಲವಲ್ಲ.

ಮೇಲುಗಾರಿಕೆಗೆ ಮತ್ತೊಂದು ಲಕ್ಷಣವಿದೆ: ಆದಷ್ಟು ಜಾಗವನ್ನು ಆಕ್ರಮಿಸುವುದು. ರೈಲಿನ ಮೂರನೆಯ ತರಗತಿಯಲ್ಲೂ ಬಸ್ಸುಗಳಲ್ಲೂ ಕುಳಿತುಕೊಳ್ಳುವ ಶ್ರೀಮಂತನಾದ ಶ್ರೀಸಾಮಾನ್ಯನಿಗೆ ಒಬ್ಬನಿಗೆ ಮೂವರ ಜಾಗಬೇಕು. ಕೊಡುವ ಹಣ ಎಲ್ಲರಿಗೂ ಒಂದೇ ಪ್ರಮಾಣದ್ದಾಗಿದ್ದರೂ ಸಾಮಾನ್ಯ ಮನುಷ್ಯ ಇವರಿರುವ ಗಾಡಿ ಸೇರಿದಾಗ ನೆಲದ ಮೇಲೆ ಹುದುಗಿಕೊಂಡೋ ಅಥವಾ ನಿಂತುಕೊಂಡೋ ಇರಬೇಕಾಗುತ್ತದೆ. Masses ಗೂ Classes ಗೂ ಇರುವ ವ್ಯತ್ಯಾಸವನ್ನು ಜನ ತಮ್ಮ ತಮ್ಮ ವಶದಲ್ಲಿಟ್ಟುಕೊಳ್ಳುವ ಸ್ಥಳಾವಕಾಶಗಳಿಂದ ನಿರಕ್ಕಾಗಿ ಅಳೆದುಬಿಡಬಹುದು. ಈ ಸ್ಥಳಾಕ್ರಮಣಕ್ಕೆ ಅವರು ಜೀವಂತವಾಗಿರಬೇಕೆಂಬ ನಿಯಮವೇನೂ ಇಲ್ಲ. ದಿಲ್ಲಿಯ ಸುತ್ತಮುತ್ತ ಗೋರಿಗಳು ಆಕ್ರಮಿಸಿಕೊಂಡಿರುವಷ್ಟು ಜಾಗವನ್ನು ಯಾವ ಸ್ಥಿತಿವಂತರೂ ಪಡೆದಿಲ್ಲ. ಕೆಲವು ಅಧಿಕಾರಮಂದಿರಗಳಲ್ಲಿ ಅನೇಕ ವಿಸ್ತಾರವಾದ ಸುಸಜ್ಜಿತ ಕೊಟಡಿಗಳು ವರ್ಷದಲ್ಲಿ ಕೆಲವು ದಿನಗಳ ಹೊರತು ಮಿಕ್ಕ ಹೊತ್ತೆಲ್ಲ ಖಾಲಿಯಾಗಿಯೇ ಇವೆ. ಆದರೆ ಗುಮಾಸ್ತರು ಕೆಲಸ ಮಾಡುವ ಜಾಗಗಳೊ ಕಾಲೂರಲೂ ಸ್ಥಳವಿಲ್ಲದಷ್ಟು ಕಿಷ್ಕಿಂಧವಾಗಿವೆ. ಐದು ಜನ ಕೂರಬಹುದಾದೆಡೆಯಲ್ಲಿ ಹತ್ತು ಜನ ಇರುಕಿಕೊಂಡಿದ್ದಾರೆ. ಅದು ನಿಜವಾಗಿ ಒಂದು Mass. ಅನೇಕ ಅರಮನೆಗಳೂ ಸೌಧಗಳೂ ಬಹುಕಾಲ ಬರಿದಾಗಿಯೇ ಇರುತ್ತವೆ. ಬರಿದಾಗಿವೆ ಎಂದರೆ ಅಷ್ಟು ನಿಜವಾದ ಮಾತಾಗುವುದಿಲ್ಲ. ಇಂಥ ಜಾಗವೊಂದಕ್ಕೆ ಹೋಗಿ ಒಂದು ಒಳ್ಳೆಯ ಕುರ್ಚಿಯಮೇಲೆ ದಣಿವನ್ನಾರಿಸಿಕೊಳ್ಳಲು ನಾನು ಹವಣಿಸಿದೆ. ಬಿಲ್ಲೆಯ

ಜವಾನ ಅರ್ಭಟಿಸಿಕೊಂಡೇ ಬಂದ. ಏನಾಯಿತಪ್ಪ ಎಂದೆ. ದೊಡ್ಡವರ ಪೀಠ–ಅಲ್ಲಿ ಕೂರುವುದೇ ಎಂದ. ನಿಜ, ದೊಡ್ಡವರು, ಗಾಳಿಯಂತೆ ತುಂಬ ವ್ಯಾಪ್ತಿಯುಳ್ಳವರು. ಇದ್ದರೂ ಅಷ್ಟೆ, ಇಲ್ಲದಿದ್ದರೂ ಅಷ್ಟೆ, ಅವರ ಜೀವ ನೆಲವನ್ನು ಬಿಟ್ಟೋಡುವುದೇ ಇಲ್ಲ; ಅಲ್ಲಲ್ಲೇ ಅಲೆದಾಡುತ್ತಾ ನಮ್ಮನ್ನು ಬೆದರಿಸುತ್ತಲೇ ಇರುತ್ತದೆ. ಇಂಥ ಜೀವಗಳ ಹಿಡಿತಕ್ಕೆ ಪಾತ್ರನಾಗಿ ಪಾಪ ಶ್ರೀಸಾಮಾನ್ಯನೂ ಸಹ ಪ್ರತಿಷ್ಠಿತನಂತೆಯೇ ನನ್ನಂಥವರ ಮೇಲೆ ಕಠಿಣವಾಗಿ ವರ್ತಿಸುತ್ತಾನೆ. ಇಲ್ಲದಿದ್ದರೆ ನಮ್ಮಲ್ಲಿ ಯಾರು ಡವಾಲಿ ಹಾಕುತ್ತಿದ್ದರು, ಬೆಳ್ಳಿ ಕಟ್ಟಿಗೆಯನ್ನೂ ಕೊಡೆ ಚವರಿಗಳನ್ನೂ ಹಿಡಿಯುತ್ತಿದ್ದರು, ಜರಿ ರುಮಾಲನ್ನು ಸುತ್ತಿ ಕರಿ ನಿಲುವಂಗಿಯ ಮೇಲೆ ಜರಿಸೊಂಟಪಟ್ಟಿಯನ್ನು ಕಟ್ಟಿ ಮುಜರೆ ಮಾಡುತ್ತಿದ್ದರು? ಒಬ್ಬ ಮನುಷ್ಯನಿಗೆ ಇನ್ನೊಬ್ಬ ಮನುಷ್ಯ ಹೀಗೆಲ್ಲ ಮಾಡುತ್ತಿರುವುದನ್ನು ನೋಡಿದರೆ ಯಾರಿಗೆ ತಾನೆ ಇಬ್ಬರಿಗೂ ಅಯ್ಯೊ ಎನಿಸುವುದಿಲ್ಲ. ನಾನಂತೂ ಹೀನಾಯಪಟ್ಟುಕೊಳ್ಳುತ್ತಿದ್ದೆ. ಆದರೆ ಒಬ್ಬ ಶ್ರೀಸಾಮಾನ್ಯ ಮತ್ತೊಬ್ಬ ಶ್ರೀಸಾಮಾನ್ಯನನ್ನು ಮೇಲಕ್ಕೇರಲು ಸುಲಭವಾಗಿ ಬಿಡನು. ಅದಕ್ಕೇ ಆತ ಹುಟ್ಟಾ ಶ್ರೀಮಂತನಿಗೆ ಅಷ್ಟು ಪ್ರಾಶಸ್ತ್ಯ ಕೊಡುವುದು. ವರ್ಗದವರ ಹೆಣಗಾಟವೆಲ್ಲ ಈತನ ಕಪಿಮುಷ್ಟಿಯಿಂದ ತಮ್ಮನ್ನು ಬಿಡಿಸಿಕೊಳ್ಳುವುದರಲ್ಲೇ ನಿರತವಾಗಿರುವಂತಿದೆ. ಇಂಥ ಪ್ರಯತ್ನಗಳಲ್ಲಿ ಕೆಲವನ್ನು ಮೇಲೆ ಹೇಳಿದ್ದೇನೆ. ಮತ್ತೊಂದನ್ನು ಹೇಳಲು ಮರೆತೆ. ಅದು ಭಾಷೆಯ ವಿಷಯ.

ನಾವು ಕನ್ನಡ ಜನ, ಕನ್ನಡ ನಮ್ಮ ಭಾಷೆ, ಶ್ರೀಸಾಮಾನ್ಯನ ಮಾತು. ವರ್ಗದವರೂ ಮತ್ತು ವರ್ಗಕ್ಕೆ ಸೇರಬೇಕೆಂಬ ಕಾಂಕ್ಷೆಯುಳ್ಳವರು ಯಾರೂ ಈ ಭಾಷೆಯನ್ನು ಪುರಸ್ಕರಿಸುವುದನ್ನು ಕಂಡಿದ್ದೀರಾ? ಇದು ಸಾವಿರ ವರ್ಷಗಳಿಂದ ಕೃಷಿಗೊಂಡಿರುವ ಭಾಷೆ, ಶ್ರೇಷ್ಠ ಕವಿಗಳಿಂದ ಭೂಷಿತವಾದುದು, ಉಚ್ಚ ಸಂಸ್ಕೃತಿಯ ಸಾರವನ್ನೊಳಗೊಂಡಿದೆ, ಇದರಲ್ಲಿ ಎಂಥ ಜ್ಞಾನವನ್ನಾದರೂ ಕೂರಿಸಬಹುದು, ಇದರಿಂದ ಯಾವ ಶಾಸ್ತ್ರವನ್ನಾದರೂ ಕಲಿಸಬಹುದು, ಯಾವ ತತ್ತ್ವವನ್ನಾದರೂ ಜಿಜ್ಞಾಸಿಸಬಹುದು ಎಂದು ಮುಂತಾಗಿ ನೀವೇನೇ ಹೇಳಿರಿ, ಇದನ್ನು ಕಡೆಗಣಿಸುವುದು ನಿಮ್ಮ ದೇಶ ಭಕ್ತಿಗೂ ಹಿರಿಮೆಗೂ ಕುಂದು ಎಂದು ಬೇಕಾದರೂ ಎನ್ನಿರಿ, ಇದರತ್ತ ನಮ್ಮ ಮಹತ್ವಾಕಾಂಕ್ಷಿಗಳು ಗಮನಕೊಡುವುದಿಲ್ಲ. ಏಕೆ? ಜನಜಂಗುಳಿಯಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳುವುದರಲ್ಲೆ ಅವರೆಲ್ಲರಿಗೂ ಆಸೆ. ಜನರಲ್ಲಿ ಏನಿದೆ? ವಿದ್ಯೆಯಿಲ್ಲ ಬುದ್ಧಿಯಿಲ್ಲ, ಉದ್ಯಮವಿಲ್ಲ ಉದ್ಯೋಗವಿಲ್ಲ– ಬರಿ ಕಾರ್ಪಣ್ಯ, ಗೋಳು, ಗೋಗರೆತ. ಸಾವಿರಾರು ವರ್ಷಗಳಿಂದ ಅನೇಕ ಕೆಲಸಕ್ಕೆ ಬಾರದ ನಿವಾಸಿಗಳನ್ನು ಹೊರೆದು ದಣಿದು ಕಂಗಾಲಾದ ಜನ–ಇವರ ಭಾಷೆಯನ್ನು ನಾವಾಡಿದರೆ ನಮಗೂ ಈ ಕಾರ್ಪಣ್ಯ ಸಾಂಕ್ರಾಮಿಕ ಹಬ್ಬುತ್ತದೆ–ನಾವು ಈ ಸಂಪರ್ಕದಿಂದ ಆದಷ್ಟು ದೂರವಿರುವುದೊಳ್ಳೆಯದು, ಇವರ ಮಾತು ನಮಗೇಕೆ ಎನ್ನುತ್ತದೆ ವರ್ಗಾಕಾಂಕ್ಷೆಯ ಜನ. ಈ ಜನರನ್ನು ತಯಾರಿಸಿ ನೆಲೆಗೊಳಿಸುವ ಕೋರ್ಟು ಕಚೇರಿ ಕಾಲೇಜುಗಳಲ್ಲಿ ಅದಕ್ಕೆಯೇ ಕನ್ನಡಕ್ಕೆ ಕಾಲೂರಲು ಅವಕಾಶ ಈವರೆಗೂ ದೊರೆತಿಲ್ಲ, ಅದರ ಪರವಾಗಿ ಒಂದು ವಿರೋಧಕ್ಕೂ ಇದೇ ಕಾರಣ.

ಪಾಶ್ಚಾತ್ಯ ಪುರಾಣದ ಒಂದು ಕತೆಯಲ್ಲಿ ಒಂದು ಗೂಳಿ ಬರುತ್ತದೆ. ಅದರ ಬಾಲ ಹಿಡಿದುಕೊಂಡರೆ ಏಳು ಕಡಲನ್ನು ದಾಟಿಸಿ ಅಪೇಕ್ಷಿತ ಸ್ಥಳಕ್ಕೆ ಮುಟ್ಟಿಸುತ್ತದೆ. ಗೆದ್ದೆತ್ತಿನ ಬಾಲವನ್ನು ಹಿಡಿಯುವ ನಮ್ಮ ವಿಶಿಷ್ಟ ಜನಕ್ಕೆ ಇಂಗ್ಲಿಷ್ ಗೂಳಿಯ ಬಾಲವೇ ಭವತರಣ ಸಾಧನವಾಗಿದೆ. ಪಾಪ, ಬಾಲವನ್ನು ಕೊಡವಿ ಯಾವ ಕಡಲಿನಲ್ಲಿ ಬೀಳಿಸುತ್ತದೋ ಅದು. ಈ ಸಾಹಸಕ್ಕೂ ಈ ಮೂಢ ವಿಶ್ವಾಸಕ್ಕೂ ಮುಖ್ಯಕಾರಣ ವರ್ಗಾರೋಹಣಾಪೇಕ್ಷೆ –ಸಾಮಾನ್ಯನ ಸಾಮಾನ್ಯತಾ ವಿಮುಖತೆ. ಕಪ್ಪುಗೌನುಗಳನ್ನು ಬಾವಲಿಹಕ್ಕಿಗಳಂತೆ ಹಾರಾಡಿಸುತ್ತಾ ಮೇಜನ್ನು ಕುಟ್ಟಿ ಪುಸ್ತಕಗಳನ್ನು ಬಡಿದು ಯಾರಿಗೂ ತಿಳಿಯದ ಮಾತುಗಳನ್ನು ಮಂತ್ರಗಳಂತೆ ಬಾಯಿಯಲ್ಲಿ ಉಚ್ಚರಿಸುತ್ತಾ ಭೂತಗಳನ್ನು ಬಿಡಿಸುವ ಮಂತ್ರವಾದಿಗಳಂತಲ್ಲವೆ ವರ್ಗದ ಜನರ ನಡತೆ? ಈ ರೀತಿಯ ವಿಶಿಷ್ಟ ವೇಷಭೂಷಣಗಳ ವಿಶಿಷ್ಟ ಭಾಷೆಯ ವಿಶಿಷ್ಟ ಜನ ಸಾಮಾನ್ಯ MASS ಅನ್ನು ತನ್ನ ಪ್ರಭುವೆಂದೊಪ್ಪಿಕೊಳ್ಳುವುದಕ್ಕೆ ತುಂಬ ಕಷ್ಟಪಡುತ್ತಿರಬೇಕು. ಈ ಶ್ರೀಮಂತ ನಟರಿಂದ ಭೂಷಿತವಾದ ಸಭಾಭವನಗಳಲ್ಲಿ ಶ್ರೀಸಾಮಾನ್ಯನ ನಂಟನಾದ ಮಹಾತ್ಮಗಾಂಧೀ ತನ್ನ ದಿವ್ಯಹಾಸವನ್ನು ಬೀರುತ್ತಿದ್ದರೆ ಅದು ಅವರಿಗೆ ವಿಕಟವೆಂದು ತೋರಿದರೂ ನನ್ನಂಥವನಿಗೆ ತುಂಬ ರಂಜಕವೆನಿಸುತ್ತದೆ. ಒಂದುಕಾಲಕ್ಕೆ ಅದು ನಮ್ಮನ್ನು ಋಜುವಾಗಿ ಮಾಡಿದರೂ ಮಾಡೀತೇ.

ಆದರೆ ಶ್ರೀಸಾಮಾನ್ಯ ವರ್ಗದವರು ಭಾವಿಸಿರುವಷ್ಟು ನಿಕೃಷ್ಟನಲ್ಲ. ನಾನು ಆ ವರ್ಗಕ್ಕೆ ಸೇರಿದವನೆಂದು ಎಂದೂ ನಿಟ್ಟುಸಿರಿಟ್ಟಿಲ್ಲ. ಅದರಲ್ಲಿ ನಮ್ಮಂಥವರಿಗೆ ಬೇಕಾದ ಕೆಲವು ಸೌಕರ್ಯಗಳಿವೆ, ಸ್ವಾತಂತ್ರ್ಯಗಳಿವೆ. ರಷ್ಯದವನಷ್ಟು ವರ್ಗದ್ವೇಷಿ, ಅಮೇರಿಕದವನಷ್ಟು ಕಸಬುದಾರ ಪ್ರೇಮಿ, ಇಂಗ್ಲೆಂಡಿನವನಷ್ಟು ಪ್ರಾಚೀನ ಸತ್ ಪರಂಪರಾನಿಷ್ಠ, ಫ್ರೆಂಚಿನವನಷ್ಟು ಸ್ವೋಪಜ್ಞ ಸ್ವೈರಿತಾಪ್ರಿಯ, ಇಟಲಿಯವನಷ್ಟು ಲಾಲಿತ್ಯಮಾರ್ದವಾಭಿಲಾಷಿ, ಜಪಾನಿಯವನಷ್ಟು ಪ್ರಗಲ್ಭ ಸಂಯಮಿತ ಸೌಂದರ್ಯಾಭಿಕಾಂಕ್ಷಿಯಾಗಬೇಕೆಂದು ನನಗೆ ಇಷ್ಟ. ಈ ದೇಶಗಳ ಜನಸಾಮಾನ್ಯದಲ್ಲೇ ಈ ನಿಶಿಷ್ಟ ಗುಣಗಳಿವೆ. ಇವೆಲ್ಲ ದೇಶಗಳಲ್ಲೂ ಸಾಮಾನ್ಯನಿಗೂ ವಿಶಷ್ಟನಿಗೂ ಪರಕೀಯರೆನಿಸುವಷ್ಟು ಯಾವ ಪ್ರತ್ಯೇಕತೆಯೂ ಏರ್ಪಟ್ಟಿಲ್ಲ. ಒಬ್ಬನ ಸತ್ವ ಮತ್ತೊಬ್ಬನ ಸ್ವತ್ತು. ನನಗೆನ್ನಿಸುತ್ತದೆ, ನಮ್ಮ ಭಾರತೀಯ ಸಾಮಾನ್ಯನಲ್ಲಿ ಇವಿಷ್ಟು ಗುಣಗಳೂ ಜತೆಗೆ ಸಹನೆ ಸಹಾನುಭೂತಿಗಳೂ ಭ್ರೂಣಾವಸ್ಥೆಯಲ್ಲಿವೆಯೆಂದು; ವರ್ಗದವರಲ್ಲಿ ನಿಷ್ಕ್ರಮಿಸುತ್ತಿವೆಯೆಂದು. ಹಿಂದಿನ ನಮ್ಮ ಋಷಿಗಳೆಲ್ಲ ಶ್ರೀ ಸಾಮಾನ್ಯರೇ, ಅವರು ಅರಣ್ಯವಾಸಿಗಳಾಗಿ ಅನ್ನಪಾನವಸ್ತ್ರಾಶ್ರಯಗಳಲ್ಲಿ ಸಾಮಾನ್ಯ ಜನರಂತೆಯೇ ಇದ್ದುಬಿಟ್ಟರು. ಭಕ್ತರೆಲ್ಲರೂ ಸಾಮಾನ್ಯ ಜನರಲ್ಲೇ ಹುಟ್ಟಿ ಬದುಕಿ ಸತ್ತವರು. ಮತ ಪ್ರವರ್ತಕರೂ ಅಷ್ಟೆ. ನಮ್ಮ ನಗರಗಳ ಇಂದಿನ ಸಂಪತ್ತೆಲ್ಲ ಶ್ರೀಸಾಮಾನ್ಯನ ಹೆಗಲನ್ನೇ ಆಶ್ರಯಿಸಿದೆ. ಬೇಕಾದರೆ ರಫ್ತಿನ ಪಟ್ಟಿಯನ್ನು ಓದಿ. ಆತ ದುಡಿದ ಕಾಫಿ, ಟೀ, ಕಲ್ಲು, ಮಣ್ಣು, ಎಣ್ಣೆ ಬೀಜ, ತೋಗಲು, ತೊಗಟೆಗಳನ್ನು ಮಾರಿಯಲ್ಲವೆ ನಮ್ಮ ವರ್ಗದ ನಾಯಕರು ತಮ್ಮ ಕಾರು, ವಾಚು, ರೇಡಿಯೋ, ಟ್ರಾನ್‌ಸಿಸ್ಟರ್, ಸ್ಕೂಟರ್ ಅಥವಾ ಎಣ್ಣೆಗುದುರೆ ಮುಂತಾದ ನವ್ಯ ಭೋಗಗಳನ್ನು ದೊರಕಿಸಿಕೊಳ್ಳಬೇಕಾದರೆ? ನಮ್ಮ

ವಿದ್ಯಾವಂತ ವರ್ಗದ ಜನ ಆತನ ಮೇಲೆ ಹೇರಿಕೊಳ್ಳುವುದನ್ನು ಕಲಿತಿದ್ದಾರೆಯೇ ಹೊರತು ಆತನ ಉತ್ತಮಾಂಗವಾಗಿ ಮೆರೆಯುವುದನ್ನಲ್ಲ. ಅದು ಈ ದೇಶದ ದೊಡ್ಡ ದುರಂತ. ವರ್ಗದ ಜನ ಮತ್ತು ಸಾಮಾನ್ಯ ಪ್ರಭುವಿಗೆ ಯಾವ ವಿಧದಲ್ಲೂ ಇದುವರೆಗೆ ಸಹಾಯಕರಾಗಿಲ್ಲ. ಆದರೆ ಆತ ಸ್ವಾವಲಂಬಿ, ಎಂದಿಗೂ ನಿಸ್ಸಹಾಯ, ವರ್ಗದ ಸೃಷ್ಟಿಸ್ಥಿತಿಲಯಗಳಿಗೆ ಆತನೇ ಮೂಲ ಪ್ರಕೃತಿ. ಆತನನ್ನು ಕಡೆಗಣಿಸಿದರೆ ನಾವು ಕೆಟ್ಟೇವು, ನಮ್ಮ ಸ್ವಾತಂತ್ರ್ಯವೂ ಬಹುಕಾಲ ಉಳಿಯುವುದಿಲ್ಲ. ಎಲ್ಲ ಬಗೆಯಿಂದಲೂ ನಮ್ಮ ಪ್ರತ್ಯೇಕತೆಗಳನ್ನು ಮುರಿಯಬೇಕು, ನಮ್ಮ ಸತ್ವ ಸಕಲ ವರ್ಗದ ಜನಗಳಲ್ಲೂ ಪ್ರತ್ಯೇಕತೆಗಳನ್ನು ಮುರಿಯಬೇಕು, ನಮ್ಮ ಸತ್ವ ಸಕಲ ವರ್ಗದ ಜನಗಳಲ್ಲೂ ಪರಿಚಲಿಸುತ್ತಾ ಎಲ್ಲರ ಕಳೆಯನ್ನೂ ಕುದುರಿಸುವಂತಿರಬೇಕು. ಶ್ರೀಸಾಮಾನ್ಯನಿಂದ ವಿಶಿಷ್ಟನಿಗೆ ಹುಮ್ಮಸ್ಸೂ, ವರ್ಗದವನಿಂದ ಸಾಮಾನ್ಯನಿಗೆ ತೇಜಸ್ಸೂ ಪ್ರವಹಿಸುತ್ತಿರಬೇಕು. ಯಾರೂ ಯಾರಿಗೂ ಮುಖಕೆಡಿಸಬಾರದು.

ಕೌಶಲಕ್ಕೂ ಶೀಲಕ್ಕೂ ಶಕ್ತಿಸಾಮರ್ಥ್ಯಗಳಿಗೂ ದಕ್ಷತೆಗೂ ಧೈರ್ಯ ಸಾಹಸಗಳಿಗೂ ಸಹಜವಾಗಿ ಜನ ಪ್ರೇಮ ಗೌರವಗಳನ್ನು ನೀಡುತ್ತದೆ. ಇದು ಸಕಲ ತೇಜೋವರ್ಧಕ ವ್ಯಾಪಾರ. ನಮ್ಮ ನಾಡು ಏಳೂ ಹನ್ನೊಂದಕ್ಕಿಂತ ಮುಂಚಿನ ಶತಮಾನಗಳಲ್ಲಿ ಸಂಪದ್ಭರಿತವಾಗಿ ಜಗತ್ತಿನ ಕಣ್ಣನ್ನು ಕೋರೈಸುತ್ತಿದ್ದಾಗ ನಮ್ಮ ಜನಸಮುದಾಯದಲ್ಲಿ ಇಂಥ ಸತ್ವ ಪರಿಚಲನವಿತ್ತು. ಅದು ಮುರಿದಾಗ ನಮ್ಮ ದೇಶ ಬಿದ್ದು ಹೋಯಿತು. ಅದನ್ನು ಸ್ಮರಿಸೋಣ. ಜನನಾಯಕ ನೆಪೋಲಿಯನ್ನಿನ ಏಳಿಗೆಯನ್ನೂ ಸಾರ್ವಭೌಮ ನೆಪೋಲಿಯನ್ನಿನ ಪತನವನ್ನೂ ನಾವು ನೆನಪಿಗೆ ತಂದುಕೊಳ್ಳೋಣ. ಕಪಿಗಳ ಸ್ನೇಹಿತ ರಾಮನನ್ನೂ ಗೊಲ್ಲರ ಹುಡುಗ ಕುಚೇಲನ ಸ್ನೇಹಿತ ಶ್ರೀಕೃಷ್ಣನನ್ನೂ ಸ್ಮರಿಸೋಣ. ಹಾಗೂ ಚರ್ಚಿಲ್ಲನ ತೇಜಸ್ಸು ಸಾಮಾನ್ಯನಲ್ಲೂ ಸ್ಫುರಿಸಿದ್ದು ಈ ಸತ್ವ ಪರಿಚಲನ ಆ ದೇಶದಲ್ಲಿದ್ದುದರಿಂದಲೇ ಎಂಬುದನ್ನು ಮರೆಯದಿರೋಣ. ಈ ಸತ್ವಪರಿಚಲನವನ್ನು ಕುದುರಿಸುವ ಏಕೈಕ ಸಾಧನವಾದ ಶ್ರೀಸಾಮಾನ್ಯನ ವಾಣಿಯನ್ನು ವರಿಸೋಣ. ಆಗೀಗ ನಾವು ನಮ್ಮ ದಾಸ್ಯಮನೋವೃತ್ತಿಯನ್ನು ಕಳೆದುಕೊಂಡು ಗಂಡಾಳುಗಳಾಗುತ್ತೇವೆ. ಆಗೊಬ್ಬರು ಮತ್ತೊಬ್ಬರನ್ನು ನೈಜಮರ್ಯಾದೆಯಿಂದ ಕಾಣಲು ಕಲಿಯುತ್ತೇವೆ. ಅಂಥ ಸಮಾಜದಲ್ಲಿ ಬಾಳಬೇಕೆಂದು ನನಗಾಸೆ. ಅದುವರೆಗೆ ನಾನು ಶ್ರೀಸಾಮಾನ್ಯನಾಗಿಯೇ ಉಳಿದಿರುತ್ತೇನೆ, ವರ್ಗದವರ ಗೋಷ್ಠಿಬೇಡ. ಈಗಿನ ಯುದ್ಧ ಜನಸಾಮಾನ್ಯರನ್ನೂ ವಿಶಿಷ್ಟರನ್ನೂ ಕೂಡಿಸಿ ಬೆಸುಗೆ ಹಾಕುವ ದಿವ್ಯಾಗ್ನಿ, ಭವಿಷ್ಯ ಭಾರತದ ಪಾವನ ಪಾವಕ. ನಮ್ಮ ಯೋಧರೂ ಯೋಧಪತಿಗಳೂ ಗೆಲ್ಲಲಿ. ವರಿಷ್ಠಾನುದೀಪ್ತ ಶ್ರೀ ಸಾಮಾನ್ಯ ಗೆಲ್ಗೆ, ಜನಸತ್ವಂ ಸರ್ವರೊಳಂ ಪರಿಚಲಿಸುಗೆ. ನಾಡು ಬಾಳ್ಗೆ.

* * *

ಅಣ್ಣಾ ಹಜಾರೆ ಸತ್ಯಾಗ್ರಹ ನಡೆದುಬಂದ ದಾರಿ

– *ಸುರೇಂದ್ರ ಕೌಲಗಿ*

ಕಳೆದ ಹಲವಾರು ವರ್ಷಗಳಿಂದ ದೇಶದ ಪ್ರತಿಯೊಂದು ಕ್ಷೇತ್ರದಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ರಾಜಕಾರಣಿಗಳು, ಅಧಿಕಾರಿಗಳು, ನ್ಯಾಯಾಧೀಶರು, ಶಿಕ್ಷಕರು, ಸೈನ್ಯಾಧಿಕಾರಿಗಳು, ವಿಜ್ಞಾನಿಗಳು, ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳು ಆದಿಯಾಗಿ ಎಲ್ಲರೂ ಭ್ರಷ್ಟರೇನೊ ಎಂಬಂತೆ ಎಲ್ಲರಿಗೂ ಭಾಸವಾಗುತ್ತಿದೆ. ಇದರಿಂದಾಗಿ ಬಡಜನರ ಜೀವನ ಅತಿ ಕಷ್ಟದಾಯಕವಾಗಿದೆ. ಜನರಲ್ಲಿ ಹತಾಶ ಮನೋಭಾವಮೂಡಿದೆ. ಭ್ರಷ್ಟಾಚಾರದ ಕೂಪದಿಂದ ಹೊರ ಬರಲು ಸಾಧ್ಯವಿಲ್ಲವೇನೊ ಎಂದು ಎಲ್ಲರಿಗೂ ಅನಿಸಹತ್ತಿದೆ. ಭ್ರಷ್ಟಾಚಾರದ ಇಂಥ ಕರಾಳ ರೂಪದ ಹಿನ್ನಲೆಯಲ್ಲಿ ೭೨ ವರ್ಷದ ಹಿರಿಯ ಸಮಾಜಿಕ ಕಾರ್ಯಕರ್ತ ಮತ್ತು ಗಾಂಧೀ ವಿಚಾರದ ಪ್ರೇಮಿ ಅಣ್ಣಾ ಹಜಾರೆ ಏಪ್ರಿಲ್ ೫ ೨೦೧೧ ರಿಂದ ಆಮರಾಣಾಂತ ಉಪವಾಸ ಪ್ರಾರಂಭಿಸಿದರು. ಉಪವಾಸ ಪ್ರಾರಂಭಿಸುವ ಮೊದಲ ಗಾಂಧೀ ಸಮಾಧಿ ರಾಜ್‌ಘಾಟ್‌ಗೆ ಹೋಗಿ ರಾಷ್ಟಪಿತನಿಗೆ ನಮಸ್ಕರಿಸಿದರು. ನಂತರ ಅಲ್ಲಿಂದ ತೆರೆದ ಜೀಪ್‌ನಲ್ಲಿ ದಿಲ್ಲಿಯ ಮಹತ್ವದ ಸ್ಥಾನವಾದ ಜಂತರ್–ಮಂತರ್‌ಗೆ ಬಂದು ಸತ್ಯಾಗ್ರಹ ಪ್ರಾರಂಭಿಸಿದರು. ಅವರನ್ನು ನೂರಾರು ಜನರು ರಾಷ್ಟ್ರಬಾವುಟ ಹಿಡಿದು ಹಿಂಬಾಲಿಸಿದರು.

ಅಣ್ಣಾರವರ ಸತ್ಯಾಗ್ರಹದ ಉದ್ದೇಶ ಅಧಿಕಾರಿಗಳು ಮತ್ತು ನಾಗರೀಕ ಪ್ರತಿನಿಧಿಗಳನ್ನು ಒಳಗೊಂಡ ಜಂಟಿ ಸಮಿತಿ ರಚಿಸಿ ಜನಲೋಕಪಾಲ್ ಮಸೂದೆಯನ್ನು ಸಿದ್ಧಪಡಿಸಬೇಕು. ಇಂಥ ಸಮಿತಿ ರಚನೆಗೆ ಕೇಂದ್ರ ಸರ್ಕಾರ ಒಪ್ಪುವವರೆಗೂ ತಮ್ಮ ಸತ್ಯಾಗ್ರಹ ನಡೆಯುವುದಾಗಿ ಹಜಾರೆ ಹೇಳಿದರು. ಏಕೆಂದರೆ ಸಂಸತ್ತಿನ ಚಳಿಗಾಲದ ಅಧಿವೇಶನದ ವೇಳೆ ೨ಜಿ ಹಗರಣದ ತನಿಖೆಗಾಗಿ ಜಂಟಿ ಸಂಸದೀಯ ಸಮಿತಿ ರಚಿಸಬೇಕೆಂಬ ಬೇಡಿಕೆ ಈಡೇರಿಸಿಕೊಳ್ಳಲು ಪ್ರತಿಪಕ್ಷಗಳು ಎರಡು ತಿಂಗಳು ಕಾಲ ಹೋರಾಟ ನಡೆಸಿದ್ದವು. ಅಣ್ಣಾ ಹಜಾರೆಯವರು ವಿರೋಧ ಪಕ್ಷಗಳ ಆ ಬೇಡಿಕೆಯನ್ನು ತಮ್ಮ ಉಪವಾಸದ ಮೂಲಕ ಕೇವಲ ನಾಲ್ಕೈ ದಿನಗಳಲ್ಲಿ ನೆರವೇರುವಂತೆ ಮಾಡಿದರು. ಜಂಟಿ ಉಪವಾಸ ಪ್ರಾರಂಭಿಸಿದ ಕೂಡಲೇ ಇಡೀ ದೇಶವೆ ಅವರ ಬೆಂಬಲಕ್ಕೆ ನಿಂತಿತು. ಪ್ರಾರಂಭದಲ್ಲಿ ಹಜಾರೆಯವರ ಸತ್ಯಾಗ್ರಹದ ನಿರ್ಧಾರ ನಿರಾಶಾದಾಯಕ ಎಂದು ಪ್ರಧಾನಿಯವರ ಕಛೇರಿ ಹೇಳಿತು. ನಿರಶನ ಅಂತ್ಯಗೊಳಿಸುವಂತೆ ಬಿಜೆಪಿ ಮನವಿ ಮಾಡಿತು. ಆದರೆ ಹಜಾರೆಯವರು ಉಪವಾಸ ಪ್ರಾರಂಭಿಸುತ್ತಿದಂತೆಯೇ ಮುಂಬಯಿನಲ್ಲಿರುವ ಭ್ರಷ್ಟಾಚಾರ ವಿರೋಧಿ ಸಂಘಟನೆಗೆ

ಸೇರಿದ ಸುಮಾರು ಐದುಸಾವಿರ ಬೆಂಬಲಿಗರು ಆಜಾದ್ ಮೈದಾನದಲ್ಲಿ ಒಂದು ದಿನದ ಉಪವಾಸ ನಡೆಸಿದರು. ಶಿವಾಜಿ ಉದ್ಯಾನದಿಂದ ಒಂದು ಬೃಹತ್ ಮೆರವಣಿಗೆಯಲ್ಲಿ ಸಾವಿರಾರು ಜನರು ಕಾರು, ಮೋಟಾರ್‌ಬೈಕ್ ಮತ್ತು ಕಾಲ್ನಡಿಗೆಯಲ್ಲಿ ಹೊರಟು ಶಿವಾಜಿ ಉದ್ಯಾನ ಸೇರಿದರು. ದಾರಿಯಲ್ಲಿ ಸಾರ್ವಜನಿಕರಿಗೆ ಭ್ರಷ್ಟಾಚಾರದ ವಿರುದ್ಧ ಕರಪತ್ರಗಳನ್ನು ಹಂಚಿದರು. ಹಜಾರೆಯವರು ಸರ್ಕಾರ ರಚಿಸಿದ್ದ ಲೋಕಪಾಲ್ ಮಸೂದೆಗೆ ಪರ್ಯಾಯವಾಗಿ ಜನಲೋಕಪಾಲ್ ಮಸೂದೆಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಈ ಜನಲೋಕಪಾಲ್ ಮಸೂದೆಯಲ್ಲಿ ಭ್ರಷ್ಟಾಚಾರಿಗಳಿಗೆ ಕಠಿಣ ಶಿಕ್ಷೆ ವಿಧಿಸುವುದಕ್ಕೆ ಅವಕಾಶವಿದೆ. ಜನಲೋಕಪಾಲ್ ಮಸೂದೆಯನ್ನು ಸಂತೋಷ್ ಹೆಗಡೆ, ಪ್ರಶಾಂತ ಭೂಷಣ್, ಕೇಜ್ರಿವಾಲ್, ಅಗ್ನಿವೇಶ್‌ರಂಥ ಕಾನೂನು ತಜ್ಞರು ಮತ್ತು ನಾಗರೀಕ ಹಕ್ಕುಗಳ ಹೋರಾಟಗಾರರು ತಯಾರಿಸಿದರು. ಆದರೆ ಕೇಂದ್ರ ಸರ್ಕಾರ ಜನಲೋಕಪಾಲ್ ಮಸೂದೆಯನ್ನು ತಿರಸ್ಕರಿಸಿತು. ಸರ್ಕಾರ ತಯಾರಿಸಿದ್ದ ಲೋಕಪಾಲ್ ಮಸೂದೆಯ ರಚನೆಯಲ್ಲಿ ಶರದಪವಾರ್‌ರಂಥ ಭ್ರಷ್ಟ ಮಂತ್ರಿಗಳು ಇದ್ದರು. ಇಂಥ ಮಂತ್ರಿಗಳಿಂದ ತಯಾರಾದ ಮಸೂದೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ಅಣ್ಣಾಹಜಾರೆ ಹೇಳಿದರು. ಅಣ್ಣಾ ಹಜಾರೆಯವರ ಈ ಟಿಪ್ಪಣಿ ಎಷ್ಟು ತೀವ್ರವಾಗಿತ್ತು ಎಂದರೆ ಶರದಪವಾರ್ ಮಸೂದೆ ರಚನಾ ಸಮಿತಿಗೆ ರಾಜಿನಾಮೆ ಕೊಟ್ಟರು! ಅಣ್ಣಾರವರ ಉಪವಾಸ ಮುಂದುವರಿದಂತೆ ಜನ ಜಾಗೃತಿಯ ಕಹಳೆ ದೇಶಾದ್ಯಂತ ಮೊಳಗಲಾರಂಭಿಸಿತು. ಅನೇಕ ಜನರು ವಿವಿಧ ಭಾಗಗಳಲ್ಲಿ ತಮ್ಮ ನಾಯಕನ ಬೆಂಬಲಾರ್ಥ ಸರದಿ ಉಪವಾಸ, ಪ್ರತಿಭಟನೆ, ಮೆರವಣಿಗೆಗಳನ್ನು ನಡೆಸಿದರು. ಉಪವಾಸದ ಎರಡನೇ ದಿನ ಹಜಾರೆಯವರನ್ನು ಭೇಟಿ ಮಾಡಲು ಬಂದ ರಾಜಕಾರಣಿಗಳು ಜನರ ತೀವ್ರ ಆಕ್ರೋಶಕ್ಕೆ ಗುರಿಯಾಗಬೇಕಾಯಿತು. ಅಜಿತ್ ಸಿಂಗ್, ಓಂಪ್ರಕಾಶ್ ಚೌಟಾಲ ಮತ್ತು ಉಮಾಭಾರತಿಯಂಥ ರಾಜಕೀಯ ವ್ಯಕ್ತಿಗಳನ್ನು ಜನ ಹಿಂದಕ್ಕೆ ಕಳುಹಿಸಿದರು. ಆದರೆ ಗಾಂಧೀಮಾರ್ಗದಲ್ಲಿ ಎಲ್ಲ ವರ್ಗದ ಜನರ ಅಭಿಪ್ರಾಯಗಳನ್ನೂ ಆಲಿಸಬೇಕಾಗುತ್ತದೆ. ರಾಜಕಾರಣಿಗಳನ್ನು ತಡೆದದ್ದು ಸರಿಯಲ್ಲ ಎಂದು ಹಜಾರೆ ತಾಕೀತು ಮಾಡಿದರು. ರಾಜಕಾರಣಿಗಳು ಶಾಮಿಯಾನದೊಳಗೆ ಎಲ್ಲರೊಂದಿಗೆ ಕುಳಿತುಕೊಳ್ಳಬಹುದೇ ಹೊರತು ವೇದಿಕೆಯಲ್ಲಿ ನನ್ನೊಂದಿಗೆ ಕುಳಿತುಕೊಳ್ಳಕೂಡದು ಎಂದು ಹೇಳಿದರು.

ಉಪವಾಸ ಮುಂದುವರಿದಂತೆ ಹಜಾರೆಯವರ ರಕ್ತದೊತ್ತಡ ಹೆಚ್ಚಾಯಿತು. ಆದರೆ ಅವರ ಮನಸ್ಸು ಎಷ್ಟು ಗಟ್ಟಿಯಾಗಿತ್ತೆಂದರೆ "ಭ್ರಷ್ಟಾಚಾರದ ನಿರ್ಮೂಲನೆಯ ಹಾದಿಯಲ್ಲಿಯ ನನ್ನ ಹೋರಾಟ ಅಂತ್ಯವಾಗಿಲ್ಲ. ಬದಲಿಗೆ ಇಂದಿನಿಂದ ಪ್ರಾರಂಭವಾಗಿದೆ" ಎಂದು ಹೇಳಿದರು. ಲೋಕ್‌ಪಾಲ್ ಮಸೂದೆಯನ್ನು ಸಂಸತ್ ಆಗಸ್ಟ್ ೧೫ರ ಒಳಗಾಗಿ ಅಂಗಿಕರಿಸಬೇಕೆಂದು ಗಡುವು ನೀಡಿದರು. ಅಲ್ಲದೆ ತಾವು ದೇಶಾದ್ಯಂತ ಪ್ರವಾಸ ಮಾಡಿ ಜನರನ್ನು ಜಾಗೃತ ಗೊಳಿಸುವುದಾಗಿ ಮತ್ತು ಭ್ರಷ್ಟ ಜನಪ್ರತಿನಿಧಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಹಕ್ಕಿಗಾಗಿ ಹೋರಾಟ ನಡೆಸುವುದಾಗಿ ಘೋಷಿಸಿದರು. ಅಣ್ಣಾರವರ ಉಪವಾಸ ಮುಂದುವರಿಯುತ್ತಿದ್ದಂತೆ ಸರ್ಕಾರವು ಲೋಕಪಾಲ್ ಮಸೂದೆಯ ಜಂಟಿ ಸಮಿಯ ರಚನೆಗೆ ಬಿರುಸಾಗಿ

ಪ್ರಯತ್ನ ಪ್ರಾರಂಭಿಸಿತು. ಏಪ್ರಿಲ್ ೯ರಂದು ಸರ್ಕಾರವು ಅಣ್ಣಾಹಜಾರೆಯವರ ಬೇಡಿಕೆಯನ್ನು ಮನ್ನಿಸಿತು. ಪ್ರಣಬ್ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ವೀರಪ್ಪ ಮೊಯ್ಲಿ, ಕಪಿಲ್ ಸಿಬಲ್, ಪಿ.ಚಿದಂಬರಂ ಮತ್ತು ಸಲ್ಮಾನ್ ಖುರ್ಶಿದ್ ಈ ಐದು ಸರ್ಕಾರಿ ಪ್ರತಿನಿಧಿಗಳು, ನಾಗರೀಕರ ಪರವಾಗಿ ಅಣ್ಣಾ ಹಜಾರೆ, ಶಾಂತಿ ಭೂಷಣ್, ಪ್ರಶಾಂತ್ ಭೂಷಣ್ ಮತ್ತು ಸಂತೋಷ್ ಹೆಗಡೆ ಈ ಪ್ರತಿನಿಧಿಗಳನ್ನು ಒಳಗೊಂಡ ಜಂಟಿ ಸಮಿತಿ ರಚನೆಯನ್ನು ಘೋಷಣೆಮಾಡಿ ಕೇಂದ್ರ ಸರ್ಕಾರ ಗೆಜೆಟ್ ಪ್ರಕಟಣೆ ಹೊರಡಿಸಿತು. ಈ ಸಮಿತಿಗೆ ಶಾಂತಿಭೂಷಣ್ ಸಹ ಅಧ್ಯಕ್ಷರಾಗಿರುವರು.

ಈ ರೀತಿ ಅಣ್ಣಾ ಹಜಾರೆಯವರ ಸತ್ಯಾಗ್ರಹ ಯಶಸ್ವಿಯಾಗಿ ನಡೆಯಿತು. ಏಪ್ರಿಲ್ ೧೬ರ ವೇಳೆಗೆ ಜಂಟಿ ಸಮಿತಿಯ ಮೊದಲಸಭೆ ನಡೆಯಬೇಕು ಮತ್ತು ಜೂನ್ ೩೦ ಒಳಗಾಗಿ ವಿಧೇಯಕ ಸಿದ್ಧಗೊಳ್ಳಬೇಕು. ಆಗಸ್ಟ್ ೧೫ರ ಒಳಗಾಗಿ ವಿಧೇಯಕ ಅಂಗೀಕಾರ ಪಡೆಯಬೇಕೆಂದು ವೇಳಾಪಟ್ಟಿ ಸಿದ್ಧವಾಗಿದೆ. ಭ್ರಷ್ಟಾಚಾರ ವಿರುದ್ಧದ ಹಜಾರೆಯವರ ಈ ಚಳುವಳಿ ಬಹುದೊಡ್ಡ ಲೋಕ ಶಿಕ್ಷಣವಾಗಿ ರೂಪಗೊಂಡಿತು. ಎಂಥ ಸಾಮಾನ್ಯ ವ್ಯಕ್ತಿಯೂ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವ ಎದೆಗಾರಿಕೆಯನ್ನು ಬೆಳೆಸಿಕೊಂಡ. ಚುನಾವಣಾ ಆಯೋಗವು ಕೂಡ ತನ್ನ ಧ್ವನಿಯನ್ನು ಎತ್ತಿತು. ಗಂಭೀರವಾದ ಅಪಾದನೆಗಳನ್ನು ಹೊತ್ತಿರುವ ವ್ಯಕ್ತಿಗಳನ್ನು ಚುನಾವಣೆಗೆ ನಿಲ್ಲಿಸದಂತೆ ಮಾಡಬೇಕೆಂದು ೧೫-೧೮ ವರ್ಷಗಳಿಂದ ಆಯೋಗ ಸರ್ಕಾರಕ್ಕೆ ಹೇಳುತ್ತ ಬಂದಿದೆ. ರಾಜಕೀಯ ವ್ಯವಸ್ಥೆ ಚುನಾವಣೆಗಳನ್ನು ಹಾಳುಮಾಡಿದೆ. ಚುನಾವಣೆಗಳು ಭ್ರಷ್ಟಾಚಾರದ ದೊಡ್ಡ ಕ್ಷೇತ್ರವಾಗಿದೆ. ಬಹಳಷ್ಟು ಎಂ.ಎಲ್.ಎ.ಗಳು ಸುಳ್ಳು ಹೇಳುತ್ತಾ ತಮ್ಮ ರಾಜಕೀಯ ಕೆಲಸ ಪ್ರಾರಂಭಿಸುತ್ತಾರೆ. ಸುಳ್ಳು ಪ್ರಮಾಣ ಪತ್ರ ಕೊಡುತ್ತಾರೆ, ಚುನಾವಣೆ ಖರ್ಚಿನ ಸಂಹಿತೆಯನ್ನು ಮೀರುತ್ತಾರೆ. ಎರಡು ಕೋಟಿ ಖರ್ಚುಮಾಡಿ ಇಪ್ಪತ್ತು ಕೋಟಿ ಸಂಪಾದಿಸುತ್ತಾರೆ ಎಂದು ಚುನಾವಣಾ ಆಯೋಗ ತನ್ನ ಕೋಪವನ್ನು ವ್ಯಕ್ತಪಡಿಸಿದೆ. ಹಜಾರೆಯವರ ಐದು ದಿನಗಳ ಉಪವಾಸದಿಂದ ಉಂಟಾದ ಜನ ಜಾಗೃತಿಯನ್ನು, ಜನಬೆಂಬಲವನ್ನು ಅನೇಕರು ಸ್ವಾತಂತ್ರ್ಯ ಹೋರಾಟಕ್ಕೆ ಹೋಲಿಸಿದ್ದಾರೆ. ವ್ಯತ್ಯಾಸವಿಷ್ಟೇ! ಅಂದು ಅದು ಪರಕೀಯರ ದಬ್ಬಾಳಿಕೆ ವಿರುದ್ಧದ ಹೋರಾಟವಾಗಿತ್ತು. ಇಂದು ನಮ್ಮ ಜನರ ಭ್ರಷ್ಟಾಚಾರದ ದಬ್ಬಾಳಿಕೆಯ ವಿರುದ್ಧದ ಹೋರಾಟವಾಗಿದೆ. ಹಜಾರೆಯವರ ಉಪವಾಸ ಸತ್ಯಾಗ್ರಹ ಗಾಂಧೀತತ್ವದಲ್ಲಿ ಎಲ್ಲರ ವಿಶ್ವಾಸ ಇಮ್ಮಡಿಗೊಳ್ಳುವಂತೆ ಮಾಡಿತು. ಹಜಾರೆಯವರಂಥ ಸಂಖ್ಯೆ ಬೆಳೆಯಲಿ, ದೇಶದ ಉದ್ಧಾರವಾಗಲಿ.

* * *

ಜನಪದ ಧ್ವನಿ

ವಿಶ್ವಕಪ್ ಪಂದ್ಯಗಳು ನಡೆಯುತ್ತಿದ್ದಾಗ ಕೋಟ್ಯಂತರ ಜನರು ಕ್ರಿಕೆಟ್‌ನ ಸನ್ನಿಜ್ವರದಿಂದ ನರಳಿದರು. ಎಲ್ಲಿ ನೋಡಿದರೂ ಆಟಗಾರರ ಬೃಹದಾಕಾರದ ಕಟೌಟ್‌ಗಳು ವಿಜೃಂಭಿಸಿದವು. ಇವುಗಳಿಗೆಲ್ಲ ಎಲ್ಲ ರೀತಿಯ ಅಭಿಷೇಕಗಳನ್ನು ಅರ್ಚನೆಗಳನ್ನು ಮಾಡಿದರು. ಪ್ರತಿಯೊಬ್ಬರ ಬಾಯಲ್ಲೂ ಯಾರು ಎಷ್ಟು ರನ್ ಮಾಡಿದರು ಎಂಬುದೇ ಚರ್ಚೆಯ ವಿಷಯವಾಯಿತು. ತಮ್ಮ ತಮ್ಮ ಇಷ್ಟ ದೇವತೆಗಳ ಮೊರೆ ಹೋದರು. ತಮ್ಮ ತಂಡ ಗೆದ್ದರೆ ದೇವರಿಗೆ ತೆಂಗಿನ ಕಾಯಿ ಮೊದಲುಗೊಂಡು ಎಲ್ಲ ವಿಧವಾದ ನೈವೇದ್ಯಗಳನ್ನು ಅರ್ಪಿಸುವುದಾಗಿ ಆತನಿಗೆ ಆಸೆ ಹುಟ್ಟಿಸಿದರು. ತಮ್ಮ ತಂಡದ ಗೆಲುವಿಗಾಗಿ ವಿಧವಿಧ ಪೂಜೆ, ಪುನಸ್ಕಾರ, ಹೋಮ, ಹವನ, ಯಜ್ಞ ಯಾಗಾದಿಗಳನ್ನು ಮಾಡಿದರು. ಎರಡು ಕಡೆಯವರೂ ಇದೇ ರೀತಿ ಮಾಡಿದರೆ ಭಗವಂತ ಯಾರಿಗೆ ಒಲಿಯಬೇಕೆಂದು ತಿಳಿಯದೆ ಬಹಳ ತೊಂದರೆ ಪಟ್ಟಿರಬೇಕು. ತಮ್ಮ ತಂಡ ಗೆದ್ದಕೂಡಲೆ ಜನ ಹುಚ್ಚೆದ್ದು ಕುಣಿದಾಡಿದರು. ಒಂದು ರಾಜ್ಯವನ್ನು ಗೆದ್ದವರಂತೆ ಸಂಭ್ರಮಿಸಿದರು. ಎಲ್ಲಾ ಆಟಗಾರರಿಗೂ ಕೋಟಿಗಟ್ಟಲೆ ಹಣದ ಸುರಿಮಳೆಯಾಯಿತು. ಆಟಗಾರರೆಲ್ಲರೂ ಇದ್ದಕ್ಕಿದ್ದಂತೆ ಧೀರರೂ, ಶೂರಾಗ್ರಣಿಗಳೂ ಆದರು. ನಿಯಮಗಳಿಗೆ ವಿರೋಧವಾಗಿ ನಡೆದ ಮುಖ್ಯರಿಗೆ ಕ್ರಿಕೆಟ್ ಮಂಡಳಿ ಭಾರಿ ಮೊತ್ತದ ದಂಡವಿಧಿಸಿತು. ಆದರೆ ಇದು ಪ್ರಚಾರಕ್ಕೆ ಬರಲಿಲ್ಲ.

ಯಾವುದೇ ಪಂದ್ಯದಲ್ಲಿ ಒಂದು ಪಂಗಡ ಗೆಲ್ಲುವುದು ಇನ್ನೊಂದು ಸೋಲುವುದು ಸ್ವಾಭಾವಿಕ. ಇದರಲ್ಲಿ ಆಶ್ಚರ್ಯಪಡಬೇಕಾದದ್ದು ಏನು ಇಲ್ಲ. ಅನೇಕ ಸಲ ಗೆಲುವು ಆಕಸ್ಮಿಕವಾಗಿ ಆಗುವುದು ಉಂಟು. ಯಾವಕ್ರೀಡೆಗೂ ಇಲ್ಲದ ವೈಭವೀಕರಣ ಕ್ರಿಕೆಟ್‌ಗೆಮಾತ್ರ ಏಕೆ? ಬಹುಷಃ ಇದು ಬ್ರಿಟಿಷರಿಂದ ಬಂದದ್ದು ಎಂಬ ಕಾರಣಕ್ಕೆ ಇರಬೇಕು. ನಮ್ಮ ದಾನಶೂರಕರ್ಣ ಯಡಿಯೂರಪ್ಪನವರು ಪ್ರತಿಯೊಬ್ಬ ಆಟಗಾರನಿಗೂ ಬೆಂಗಳೂರಿನಲ್ಲಿ ೮೦+೫೦ ಅಳತೆಯ ನಿವೇಶನ ಕೊಡುವುದಾಗಿ ಪ್ರಕಟಿಸಿದರು. ಅನಂತರ ಸ್ವಲ್ಪ ಜ್ಞಾನೋದಯವಾಗಿ ನಿವೇಶನದ ಬದಲು ಇಪ್ಪತ್ತೈದು ಲಕ್ಷ ರೂಪಾಯಿ ಕೂಡುವುದಾಗಿ ಹೇಳಿದರು.

ಕನಿಷ್ಟ ಸೌಕರ್ಯಗಳೂ ಇಲ್ಲದೆ ನಮ್ಮ ಶಾಲಾ ಕಾಲೇಜುಗಳ ಕ್ರೀಡಾಂಗಣಗಳು ಸೊರಗುತ್ತಿರುವಾಗ ಪರದೇಶದಿಂದ ಬಂದ ಈ ಕ್ರಿಕೆಟ್‌ಗೆ ಇಷ್ಟೊಂದು ರಾಜಮರ್ಯಾದೆ ವೈಭವೀಕರಣ ಏಕೆ? 'ಕ್ರಿಕೆಟ್ ಎಂದರೆ ಒಬ್ಬರು ಎಸೆದ ಚೆಂಡನ್ನು ಇನ್ನೊಬ್ಬರು ಹಿಡಿದು ಕೊಳ್ಳುವುದನ್ನು ಸಾವಿರಾರು ಮೂರ್ಖರು ನೋಡಿ ಆನಂದಿಸುವುದು' ಎಂದು ಶ್ರೇಷ್ಠ ಸಾಹಿತಿಯೊಬ್ಬರು ಹೇಳಿದ್ದನ್ನು ಅನೇಕ ವರ್ಷಗಳ ಹಿಂದೆ ನಾನು ಓದಿದ್ದೆ. ಕ್ರಿಕೆಟ್ ಎಂದರೆ ನಮ್ಮ ಗ್ರಾಮಗಳಲ್ಲಿ ಸಣ್ಣ ಮಕ್ಕಳು ಆಡುವ ಚಿಣ್ಣಿಕೋಲಿನ ಮುಂದಿನ ಹೆಜ್ಜೆ. ಈ ಲೇಖನ ಓದಿದವರು ನನ್ನನ್ನು ಮೂರ್ಖನೆನ್ನಲಿ ಏನೂ ತಿಳಿಯದವನೆನ್ನಲಿ, ನನಗೆ ಸ್ವಲ್ಪವೂ ಮುಜುಗರವಿಲ್ಲ. ಬೆಳವಣಿಗೆಗೆ ಪ್ರೋತ್ಸಾಹ ಅಗತ್ಯ. ಆದರೆ ಮಿತಿಯಲ್ಲಿರಬೇಕು. ವಿಪರೀತ ಮುದ್ದಿನಿಂದ ಬೆಳೆಸಿದ ಮಕ್ಕಳು ದಾರಿ ತಪ್ಪುತ್ತಾರೆ.

– *ವಿ. ವೆಂಕಟರಮಣಶೆಟ್ಟಿ ;* ಮೈಸೂರು

* * *

ಟ್ರಸ್ಟ್ ಬೆಳವಣಿಗೆ ಕುರಿತು ಒಂದು ಚಿಂತನೆ

– *ಸಂತೋಷ್ ಕೌಲಗಿ*

ಗುಡಿಯಾಚೆ ಗಡಿಯಾಚೆ ಗಿಡದಾಚೆಗೆ
ಹೋಗೋಣ ಬನ್ನಿರೋ ಹೊಸ ನಾಡಿಗೆ
ಹೊಚ್ಚ ಹೊಸ ನೋಟಕ್ಕೆ ಅಚ್ಚ ಬಾಳಾಟಕ್ಕೆ
ನೆಚ್ಚುಗೆಯ ಕೆಳೆಯರೇ ಹೊಸ ನಾಡಿಗೆ – ಪು.ತಿ.ನ

ಇದು ಪುತಿನ ಅವರ ಕವನದ ಒಂದು ಸಾಲು. ನಾಡಿನ ಬಗೆಗಿನ ಹೊಸ ನೋಟದ ಕಲ್ಪನೆಯೊಂದನ್ನು ಪುತಿನ ಅವರು ತಮ್ಮ ಈ ಕವನದಲ್ಲಿ ನೀಡಿದ್ದಾರೆ. ನಮ್ಮೆಲ್ಲ ಕನಸುಗಳು ಸಾಕಾರಗೊಳ್ಳುವ ಆಚೆ ದಡದಲ್ಲಿರುವ ನಾಡಿನ ಕಲ್ಪನೆಯೊಂದು ಸದಾ ಕಾಲ ನಮ್ಮನ್ನು ಕಾಡುತ್ತಿರುತ್ತದೆ. ಕನಸುಗಳನ್ನು ಹೊತ್ತಿರುವ ಅನೇಕ ಗೆಳೆಯರಿಗೆ ಪುತಿನ ಅವರ ಈ ಕವನ ಸದಾ ಸ್ಫೂರ್ತಿಯ ನೆಲೆಯಾಗಿದೆ. ನಮ್ಮೆಲ್ಲ ಕನಸುಗಳ ನಾಡನ್ನು ಸೃಷ್ಟಿಸುವುದು ಸುಲಭವಾದ ಮಾತಲ್ಲವೆನ್ನುವುದು ನಮ್ಮ ಅನುಭವ ನಮಗೆ ಹೇಳುತ್ತದೆ. ಆದರೆ ನಮ್ಮೆಲ್ಲ ಕನಸುಗಳನ್ನು ಸಾಕಾರಗೊಳಿಸಬಹುದಾದ ಸಣ್ಣ ಕೇಂದ್ರವನ್ನು ನಾವೆಲ್ಲ ಕೈ ಜೋಡಿಸಿ ಕಟ್ಟಲು ಸಾಧ್ಯವಿದೆ.

ಹೊಸ ಜೀವನ ದಾರಿ

ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್ ಮಹಾತ್ಮ ಗಾಂಧಿ ವಿಚಾರ ಪ್ರಣೀತ ಸಂಸ್ಥೆ. ಅರವತ್ತರ ದಶಕದಲ್ಲಿ ಮಹಾತ್ಮ ಗಾಂಧೀಜಿಯವರಿಂದ ಪ್ರೇರಿತರಾದ ಕೆಲ ಯುವಕರು ಸ್ಥಾಪಿಸಿದ ಸಂಸ್ಥೆಯಿದು. ಮೇಲುಕೋಟೆಯಿಂದ ೬ ಕಿ.ಮಿ ದೂರದಲ್ಲಿ ಜನಪದ ಸೇವಾ ಟ್ರಸ್ಟ್ ಗಾಂಧಿ ವಿಚಾರ ಪ್ರಣೀತ ರಚನಾತ್ಮಕ ಕೆಲಸಗಳನ್ನು ಕೈಗೊಳ್ಳಲು ಸುಮಾರು ಇಪ್ಪತ್ತೈದು ಎಕರೆ ಭೂಮಿಯಲ್ಲಿ 'ಹೊಸ ಜೀವನ ದಾರಿ' ಕೇಂದ್ರವನ್ನು ಎಪ್ಪತ್ತರ ದಶಕದಲ್ಲಿ ಸ್ಥಾಪಿಸಿದೆ. ಹೊಸ ಜೀವನ ದಾರಿಯ ಉದ್ದೇಶ ಅಹಿಂಸಾತ್ಮಕವಾದ ಪರ್ಯಾಯ ಜೀವನವಿಧಾನಗಳ ಹುಡುಕಾಟ ಮತ್ತು ಅನುಭವ ಪಡೆಯುವುದು ಎಂದು ಸ್ಥೂಲವಾಗಿ ಹೇಳಬಹುದು. ಅಹಿಂಸೆ ಎಂಬುದನ್ನು ವ್ಯಾಪಕ ಅರ್ಥದಲ್ಲಿ ನೋಡಿ ಅದನ್ನು ಇಂದು ಮನುಷ್ಯ ಪ್ರಕೃತಿಯ ವಿರುದ್ಧ ಸಾರಿರುವ ಯುದ್ಧದವರೆಗೂ ವಿಸ್ತರಿಸಬಹುದು.

ಕಳೆದ ನಲವತ್ತು ವರ್ಷಗಳಲ್ಲಿ ಅನೇಕ ಕೆಲಸಗಳು ಹೊಸ ಜೀವನ ದಾರಿಯಲ್ಲಿ ಆಗಿವೆ. ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದ ಅನೇಕ ಶಿಬಿರಗಳು ಇಲ್ಲಿ ನಡೆದಿವೆ. ಅಹಿಂಸಾತ್ಮಕ ಪರ್ಯಾಯ ವಿಧಾನಗಳ ಬಗ್ಗೆ ಚರ್ಚೆಗಳು, ಪ್ರಾತ್ಯಕ್ಷತೆಗಳು ಈ ಕೇಂದ್ರದಲ್ಲಿ ಆಗಿವೆ. ರಾಷ್ಟ್ರ ಮಟ್ಟದ ಅನೇಕ ಚಿಂತಕರು, ಹೋರಾಟಗಾರರು, ಲೇಖಕರು, ಕಲಾಕಾರರು ಈ ಕೇಂದ್ರಕ್ಕೆ ಭೇಟಿ ನೀಡಿದ್ದಾರೆ.

ಅನೇಕ ಯುವಕರು ಈ ಕೇಂದ್ರದಿಂದ ಪ್ರೇರಣೆ ಪಡೆದು ತಮ್ಮ ಬದುಕಿನ ದಿಕ್ಕನ್ನು ರುಜು ದಿಕ್ಕಿಗೆ ಬದಲಿಸಿ ಕೊಂಡಿದ್ದಾರೆ. ಇಂದು ಹೊಸ ಜೀವನ ದಾರಿ ಕೇಂದ್ರವು ಮರ ಗಿಡಗಳು, ಸರಳ ಮನೆಗಳು, ಪ್ರಶಾಂತವಾದ ಪರಿಸರ, ಹೀಗೆ ಒಂದಕ್ಕೊಂದು ಪೂರಕವಾದ ಅನೇಕ ಅಂಶಗಳಿಂದ ಒಂದು ವಿಶಿಷ್ಟವಾದ ರೂಪವನ್ನು ಪಡೆದಿದೆ. ಕರ್ನಾಟಕದಲ್ಲಿ ಇಂದು ವ್ಯಾಪಕವಾಗಿ ಪಸರಿಸಿರುವ ಸಾವಯವ ಕೃಷಿ ವಿಚಾರವನ್ನು ಬಿತ್ತಿದ ಕರ್ನಾಟಕದ ಕೆಲವು ಪ್ರಾರಂಭಿಕ ಕೇಂದ್ರಗಳಲ್ಲಿ ಹೊಸ ಜೀವನ ದಾರಿ ಒಂದು.

ಸಾವಯವ ಕೃಷಿಯಿಂದ ಸಾವಯವ ಬದುಕಿನೆಡೆಗೆ

ಸಾವಯವ ಕೃಷಿ ಕಳೆದ ಹತ್ತು ವರ್ಷಗಳಲ್ಲಿ ತನ್ನ ಅರ್ಥದ ವ್ಯಾಪ್ತಿಯನ್ನು ನಿಧಾನವಾಗಿ ಕಿರಿದುಗೊಳಿಸಿ ಕೊಂಡಿದೆ. ಈ ವಿಷಯ ಎಲ್ಲೋ ಒಂದು ಕಡೆ ನಿಂತನೀರಾಗ ತೊಡಗಿದೆ ಎಂದು ಅನೇಕರಿಗೆ ಅನಿಸತೊಡಗಿದೆ. ಮಾರುಕಟ್ಟೆಯ ಜಾಲಕ್ಕೆ ಸಿಕ್ಕಿಬಿದ್ದ ಸಾವಯವ ಕೃಷಿ ಗುಡಿಯಾಚೆ, ಗಡಿಯಾಚೆ ಹಾರಬಯಸಿರುವ ನಮ್ಮನ್ನು ತಡೆದು ನಿಲ್ಲಿಸಿದೆ. ಹೊಸ ನಾಡಿನ ಸೃಷ್ಟಿಗೆ ಸಾವಯವ ಕೃಷಿ ಸಾಧ್ಯವಿಲ್ಲ. ಆದರೆ ಸಾವಯವ ಬದುಕು ಅಗತ್ಯ ಎನ್ನಿಸತೊಡಗಿದೆ. ಹೊಸ ಜೀವನ ದಾರಿ ನಮ್ಮನ್ನು ಸಾವಯವ ಬದುಕಿನೆಡೆಗೆ ಕರೆದೊಯ್ಯಬಲ್ಲ ಎಲ್ಲ ಪರಿಸರ ಹೊಂದಿದೆ. ಅದಕ್ಕೀಗ ಗುಡಿಯಾಚೆ ಗಡಿಯಾಚೆ ಹಾರಬಲ್ಲ, ಇಂದಿನ ನಿರಾಶಾದಾಯಕ ಜಾಗತಿಕ ವಾತಾವರಣದಲ್ಲೂ ಹೊಸ ಕನಸುಗಳನ್ನು, ಹೊಸ ನೋಟಗಳನ್ನು ಹೊತ್ತಿರುವ ಮನುಷ್ಯರು, ಮನಸ್ಸುಗಳು ಬೇಕಿವೆ. ಸಾವಯವ ಕೃಷಿಯ ಅರ್ಥವ್ಯಾಪ್ತಿಯನ್ನು ಕೃಷಿಯಿಂದ ಬದುಕಿಗೆ ವಿಸ್ತರಿಸುವ ಜನ ಬೇಕಿದೆ.

ಜಾಗತೀಕರಣ ಹಾಗೂ ಆರ್ಥಿಕ ಉದಾರತೆಯ ಕಾರಣಗಳಿಂದಾಗಿ ಭಾರತದ ಕೃಷಿ ವಿನಾಶದ ಅಂಚಿಗೆ ಬಂದು ನಿಂತಿದೆ. ಕೃಷಿ ಕಾರ್ಮಿಕರ ಕೊರತೆ, ಒಳ ಸುರಿವುಗಳ ಬೆಲೆ ಹೆಚ್ಚಳ, ಅಸಮರ್ಪಕ ಬೆಲೆ, ಮರೆಯಾಗುತ್ತಿರುವ ಸ್ಥಳೀಯ ಜ್ಞಾನ ಸಂಪತ್ತು ಮತ್ತು ಸಹಬಾಳ್ವೆಯ ಸಂಸ್ಕೃತಿ, ಹೀಗೆ ಹತ್ತು ಹಲವು ಸವಾಲುಗಳು ರೈತನನ್ನು ಕಟ್ಟಿಹಾಕ ತೊಡಗಿವೆ. ಆತನಿಗೆ ಉಳಿದಿರುವುದು ಎರಡೇ ದಾರಿ. ಒಂದು ಸಂಘಟಿತರಾಗಿ ಕೃಷಿ ಮಾಡುವುದು, ಇಲ್ಲವೇ ಭೂಮಿಯನ್ನು ಬಂಡವಾಳಶಾಹಿಗಳಿಗೆ ಮಾರಿಬಿಡುವುದು. ಈ ಹಂತದಲ್ಲಿ ಹೊಸ ಜೀವನ ದಾರಿಯಂತಹ ಕೇಂದ್ರಗಳ ಪಾತ್ರ ಪ್ರಮುಖವಾಗುತ್ತದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಕೃಷಿಯನ್ನು ರೈತರ ಬಳಿಯೇ ಉಳಿಸಲು ಬೇಕಾದ ಹೊಸ ವ್ಯವಸ್ಥೆಯನ್ನು ರೂಪಿಸುವುದು ಇಂತಹ ಕೇಂದ್ರಗಳ ಜವಾಬ್ದಾರಿಯಾಗಿದೆ. ಈ ದೇಶದ ರೈತರು ಉಳಿಯಬೇಕಾದರೆ ಸಾವಯವ ಬದುಕಿನತ್ತ ಅವರನ್ನು ಒಯ್ಯುವುದೇ ನಮಗಿರುವ ದಾರಿಯೆಂದು ಜನಪದ ಸೇವಾ ಟ್ರಸ್ಟ್ ನಂಬಿದೆ.

ಮಧ್ಯಮ ಮಾರ್ಗದ ಹುಡುಕಾಟ

ಇಂದು ಹೊಸ ತಲೆಮಾರಿನ ನಗರ ಕೇಂದ್ರಿತ ಉದ್ಯೋಗದಲ್ಲಿರುವ ಅನೇಕ ಯುವಕರು ಕೃಷಿಯ ಬಗ್ಗೆ, ಪ್ರಕೃತಿಯ ಬಗ್ಗೆ, ಗ್ರಾಮೀಣ ಬದುಕಿನ ಸರಳ

ಬದುಕಿನ ಕಡೆಗೆ ಒಲವನ್ನು ತೋರುತ್ತಿದ್ದಾರೆ. ಕೆಲವರು ಸಾಹಸ ಮಾಡಿ ಕೃಷಿ ಭೂಮಿಯನ್ನು ಕೊಂಡು ಕೃಷಿ ಮಾಡುವ ಪ್ರಯತ್ನ ನಡೆಸಿದ್ದಾರೆ. ಕೆಲವರು ಯಶಸ್ವಿಯಾದರೆ ಮತ್ತೆ ಕೆಲವರು ಕಹಿ ಅನುಭವವನ್ನು ಅನುಭವಿಸಿದ್ದಾರೆ. ಅದಕ್ಕೆ ಹಲವು ಕಾರಣಗಳು. ಸರಿಯಾದ ಕೆಲಸದವರು ಸಿಗದಿರುವುದು, ತೋಡಿದ ಕೊಳವೆ ಬಾವಿಯಲ್ಲಿ ನೀರು ಬರದಿರುವುದು, ಅನುಭವದ ಕೊರತೆ, ಬೆಂಬಲಕ್ಕೆ ಜನರಿಲ್ಲದಿರುವುದು ಹೀಗೆ ಹತ್ತುಹಲವು ಕಾರಣಗಳಿವೆ. ಅವರಲ್ಲಿ ಬಹಳ ಜನರಿಗೆ ಕೃಷಿಯಿಂದ ಬದುಕು ನಡೆಯಬೇಕೆಂಬ ಅನಿವಾರ್ಯತೆ ಇಲ್ಲದಿದ್ದರೂ ಮಣ್ಣಿನ ಸೆಳೆತ ಅವರನ್ನು ಕೃಷಿ ಮಾಡಲು, ಮರ ಬೆಳೆಸಲು ಹಚ್ಚಿದೆ. ಕೃಷಿ ಮಾಡುವ ಹಂತದಲ್ಲಿ ಸಮಸ್ಯೆಗಳ ಜಂಜಾಟದಿಂದಾಗಿ ಅವರ ಇತರ ಸಾಮರ್ಥ್ಯಗಳು ಸಮಾಜಕ್ಕೆ ಪೂರ್ಣ ಪ್ರಯೋಜನಕ್ಕೆ ಬರದಾಗಿದೆ. ಇಂತಹ ಯುವಕರು ಒಟ್ಟಾಗಿ ತಮ್ಮ ಪ್ರಕೃತಿಯ ಒಡನಾಟದ ಬಗೆಗಿನ ಕನಸನ್ನು ಹೊಸ ಜೀವನ ದಾರಿಯಲ್ಲಿ ಪಡೆಯಲು ಸಾಧ್ಯವಿದೆ ಎನಿಸುತ್ತಿದೆ. ಒಟ್ಟಾಗಿ ಈ ಕೆಲಸವನ್ನು ಕೈಗೆತ್ತಿಕೊಂಡಾಗ ಕೃಷಿಗಷ್ಟೇ ತಮ್ಮ ಚಟುವಟಿಕೆಗಳನ್ನು ಸೀಮಿತಗೊಳಿಸಿಕೊಳ್ಳದೆ, ಕೃಷಿಯನ್ನು ಕೇಂದ್ರವಾಗಿ ಹೊಂದಿ ಅದರ ಸುತ್ತಲೂ ಅನೇಕ ಚಟುವಟಿಕೆಗಳನ್ನು ಕಟ್ಟಲು ಸಾಧ್ಯವಿದೆ. ಸಾವಯವ ಬದುಕು ಎಂದ ಕೂಡಲೆ ಕೃಷಿ, ಆರೋಗ್ಯ, ಶಿಕ್ಷಣ, ಪರಿಸರ, ಗೃಹ ಕೈಗಾರಿಕೆ ಹೀಗೆ ಹತ್ತು ಹಲವು ಕಾರ್ಯಕ್ರಮಗಳು ಜೊತೆಗೂಡುತ್ತವೆ. ಆಗ ನಮ್ಮೆಲ್ಲರ ಕನಸಿನ ಒಂದು ಸಣ್ಣ ಮಾದರಿ ಗ್ರಾಮ ನಿರ್ಮಾಣವಾಗುತ್ತದೆ. ನಗರದ ಬದುಕು ನೀಡಿರುವ ಸವಲತ್ತು ಒಂದು ಕಡೆ, ಗ್ರಾಮೀಣ ಬದುಕು ನೀಡುವ ನೆಮ್ಮದಿ ಒಂದು ಕಡೆ. ಇವೆರಡನ್ನೂ ಸಮನ್ವಯಗೊಳಿಸಿ ಮಧ್ಯಮ ಮಾರ್ಗದ ಜೀವನ ಶೈಲಿಯನ್ನು ಹುಡುಕುವುದೇ ಸದ್ಯಕ್ಕೆ ಈ ಪ್ರಯೋಗದ ಉದ್ದೇಶವಾಗಿರುತ್ತದೆ. ಹೊಸ ತಲೆಮಾರಿನ ಯುವಕರಿಗೆ ಈ ರೀತಿಯ ಪ್ರಯೋಗದಲ್ಲಿ ತೊಡಗಿಕೊಳ್ಳಲು ಅವರ ಹಿಂದಿನ ತಲೆಮಾರಿಗಿಂತ ಹೆಚ್ಚಿನ ಅನುಕೂಲ ಉಂಟಾಗಿದೆ. ಆರ್ಥಿಕವಾಗಿ ಹಿಂದಿನ ತಲೆಮಾರಿಗಿಂತ ಉತ್ತಮರಾಗಿದ್ದಾರೆ. ಸಂಪರ್ಕ ಸಾಕಷ್ಟು ಉತ್ತಮಗೊಂಡಿದೆ. ಒಟ್ಟಿನಲ್ಲಿ ಹೇಳಬೇಕೆಂದರೆ ಕಾರ್ಪೊರೇಟ್ ವ್ಯವಸ್ಥೆ ನೀಡಿರುವ ಸವಲತ್ತುಗಳನ್ನು ಬಳಸಿಕೊಂಡು ತಮ್ಮ ತನವನ್ನೂ ಉಳಿಸಿಕೊಳ್ಳಲು ಈ ಪ್ರಯೋಗದಿಂದ ಸಾಧ್ಯವಾಗುತ್ತದೆ. ಸದ್ಯಕ್ಕೆ ಈ ಪ್ರಯೋಗದಲ್ಲಿ ಪಾಲ್ಗೊಳ್ಳುವವರು ವೃತ್ತಿಪರತೆಯನ್ನೂ ಪಡೆದು ಕೊಂಡು ಇದನ್ನು ಹವ್ಯಾಸವನ್ನಾಗಿ ನಡೆಸುತ್ತಾರೆ.

ಈ ವಿಚಾರಕ್ಕೆ ದಾರಿ ದೀಪಗಳು

ಮಹಾತ್ಮ ಗಾಂಧಿಯವರ ಸುಸ್ಥಿರ ಸ್ವಾವಲಂಬಿ ಗ್ರಾಮ, ಧರ್ಮದರ್ಶಿತ್ವದ ವಿಚಾರಗಳು ಹಾಗೂ ಏಕಾದಶ ವ್ರತಗಳ ವಿಚಾರ, ಮಸನೊಬು ಫುಕುವೊಕಾ ಅವರ ಪ್ರಕೃತಿಗೆ ಸಂಪೂರ್ಣ ಶರಣಾಗಿ ಅದರ ಲೀಲೆಯನ್ನು ಅನುಭವಿಸುವ ದೃಷ್ಟಿ, ಅಲ್ಬರ್ಟ ಹೊವಾರ್ಡ ಅವರ ಸಾವಯವ ಕೃಷಿ ಚಿಂತನೆಗಳು, ಸ್ಕಾಟ್‌ನಿಯರಿಂಗ್ ಅವರ ಅನ್ನಕ್ಕಾಗಿ ಕಾಯಕದ ತತ್ವ, ಶುಮಾಕರ್ ಅವರ ಯುಕ್ತ ತಂತ್ರಜ್ಞಾನದ ವಿಚಾರಗಳು ಹಾಗೂ ಪೆಟ್ರೋಲಿಯಂ ಇಂಧನ ಅವಲಂಬನೆ ಮುಕ್ತ ಹೊಸ ಸಮಾಜ ನಿರ್ಮಾಣದ

ಬಗ್ಗೆ ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಚಿಂತನೆಗಳು ಹಾಗೂ ಪ್ರಯೋಗಗಳು.

ಪ್ರಯೋಗದಲ್ಲಿ ಪಾಲ್ಗೊಳ್ಳಲು ಎಂತಹವರು ಬೇಕು ?

೧. ಶ್ರಮ, ಸರಳ ಬದುಕು, ಸಮೂಹ ಶಕ್ತಿಯಲ್ಲಿ ನಂಬಿಕೆಯುಳ್ಳವರು ಆಗಿರಬೇಕು.

೨. ನಗರದಲ್ಲಿ ತಮ್ಮ ಆರ್ಥಿಕ ಭದ್ರತೆಗೆ ಸೂಕ್ತವಾದ ಉದ್ಯೋಗವನ್ನು ಹೊಂದಿರಬೇಕು.

೩. ಬರಬಹುದಾದ ಲಾಭವನ್ನು ಸಾರ್ವಜನಿಕ ಹಿತಕ್ಕಾಗಿ, ದುರ್ಬಲರ ಏಳ್ಗೆಗಾಗಿ ಹಾಗೂ ಮುಂದಿನ ಪ್ರಯೋಗಗಳಿಗೆ ವಿನಿಯೋಗಿಸಲು ಇಚ್ಛೆಯುಳ್ಳವರಾಗಿರಬೇಕು.

ಈ ಪ್ರಯೋಗದಲ್ಲಿ ಪಾಲ್ಗೊಳ್ಳುವವರಿಗೆ ಸಿಗುವ ಲಾಭಗಳು

೧. ಶರೀರ ಶ್ರಮದಿಂದ ದೊರೆಯುವ ನೆಮ್ಮದಿ, ಸರಳ ಬದುಕು ಹಾಗೂ ಸಾಮೂಹಿಕ ಬದುಕಿನಿಂದ ದೊರೆಯುವ ನೆಮ್ಮದಿ. ಅದರ ಫಲಿತಾಂಶವಾಗಿ ದೊರೆಯುವ ಮಾನಸಿಕ, ದೈಹಿಕ ಆರೋಗ್ಯ.

೨. ಸಹ ಚಿಂತನೆಯ ಗೆಳೆಯರ ಒಡನಾಟ.

೩. ತಮ್ಮ ಮಕ್ಕಳಿಗೆ ಒಂದು ಆದರ್ಶ ಸರಳ ಬದುಕಿನ ಅನುಭವ ನೀಡುವ ಅವಕಾಶ.

ಕಾರ್ಯ ಯೋಜನೆ

೧. ಭಾಗವಹಿಸುವ ಕುಟುಂಬಗಳು ಆಹಾರದಲ್ಲಿ ಸ್ವಾವಲಂಬಿಯಾಗುವುದು

೨. ಹೊಸ ಜೀವನ ದಾರಿಯನ್ನು ಸಂಪೂರ್ಣವಾಗಿ ಸ್ಥಳೀಯ ಸಸ್ಯಗಳಿಂದ ಹಸಿರಾಗುವಂತೆ ಮಾಡುವುದು.

ಈ ಬರಹ ಕೇವಲ ಪ್ರಾಸ್ತಾವಿಕವಾದದ್ದು. ಇದರಲ್ಲಿ ಹೊಸ ವಿಚಾರಗಳ ಸೇರ್ಪಡೆಗೆ ಖಂಡಿತ ಅವಕಾಶವಿದೆ. ಇದು ಚರ್ಚೆ ಪ್ರಾರಂಭಕ್ಕಾಗಿ ಬರೆದದ್ದು.

* * *

ಪರಿಸರ ಉಳಿಸುವತ್ತ ಪುಟ್ಟ ಪ್ರಯತ್ನ

ಹಸಿರು ಗೆಳೆಯರ ಬಳಗ

ಉದ್ದೇಶ :

ಸುಸ್ಥಿರ ಬದುಕಿಗಾಗಿ ವನ್ಯಜೀವಿ ಸಂರಕ್ಷಣೆ.

ಪರಿಚಯ :

ಹಸಿರು ಗೆಳೆಯರ ಬಳಗವು ೨೦೧೦ ರಲ್ಲಿ ಮೇಲುಕೋಟೆಯ ಯುವ ಪರಿಸರ ಪ್ರೇಮಿಗಳಿಂದ ಪ್ರಾರಂಭವಾಯಿತು. ಸದ್ಯದಲ್ಲಿ ಮೇಲುಕೋಟೆ ಸಂರಕ್ಷಿತ ಅರಣ್ಯ ಪ್ರದೇಶದ ಸುತ್ತಲಿರುವ ಹಳ್ಳಿಯ ಜನರಲ್ಲಿ ಮತ್ತು ಮಕ್ಕಳಲ್ಲಿ ವನ್ಯಜೀವಿಗಳ ರಕ್ಷಣೆಯ ಅಗತ್ಯದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ. ಈ ಕಾರ್ಯದಲ್ಲಿ ಸಾಕಷ್ಟು ಗ್ರಾಮೀಣ ಹಾಗು ನಗರದ ಯುವಕರು ತೊಡಗಿದ್ದಾರೆ. ಈ ಬಳಗವು ಪರಿಸರದ ಉಳಿವಿಗಾಗಿ ಕೆಲಸ ಮಾಡುತ್ತಿರುವ Janapada Seva Trust, WCF, MAN, IISc, BNHS ಮುಂತಾದ ಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿದೆ.

ಮೇಲುಕೋಟೆ ಸಂರಕ್ಷಿತ ವನ್ಯಧಾಮ :

ಇದು ಭಾರತದ ಮೊದಲ ತೋಳದ ಅಭಯಾರಣ್ಯವಾಗಿದ್ದು ೪೯.೮೨ ಚ.ಕಿ ವಿಸ್ತೀರ್ಣವನ್ನು ಹೊಂದಿದೆ. ಇದು ಒಣ ಎಲೆ ಉದುರುವ ಮತ್ತು ಕುರುಚಲು ಕಾಡುಗಳನ್ನು ಒಳಗೊಂಡಿದ್ದು ೧೬೬ಕ್ಕಿಂತ ಹೆಚ್ಚು ಜಾತಿಯ ಸಸ್ತನಿಗಳು, ೧೩೦ಕ್ಕಿಂತ ಹೆಚ್ಚು ಜಾತಿಯ ಪಕ್ಷಿಗಳು, ೧೨ಕ್ಕಿಂತ ಹೆಚ್ಚು ಜಾತಿಯ ಸರಿಸೃಪಗಳು ಕಾಣಸಿಗುತ್ತವೆ. ಇಲ್ಲಿ ವಿನಾಶದ ಅಂಚಿನಲ್ಲಿರುವ ಸಸ್ಯ ಮೊಂಡೀಚಲು(ಸೈಕಸ್), ತೋಳ, ಕೃಷ್ಣಮೃಗ, ಹಳದಿ ಕತ್ತಿನ ಪಿಕಳಾರ (ಎಲ್ಲೋತ್ರೋಟೆಡ್ ಬುಲ್ ಬುಲ್), ಚಿರತೆ, ಕರಡಿ ಮತ್ತು ಹೆಬ್ಬಾವುಗಳು ವಿಶೇಷವಾಗಿ ಕಂಡುಬರುತ್ತವೆ.

ನಮ್ಮ ಆಲೋಚನೆ :

ವನ್ಯಜೀವಿಗಳು ನಮಗಿಂತ ಲಕ್ಷಾಂತರ ವರ್ಷಗಳ ಮೊದಲೇ ಈ ಭೂಮಿಗೆ ಬಂದ ಜೀವಿಗಳು, ನಮ್ಮಷ್ಟೇ ಇಲ್ಲಿ ಉಳಿಯುವ ಹಕ್ಕು ಈ ಜೀವಿಗಳಿಗೂ ಇದೆ. ಅವುಗಳ ನೆಲೆ ನಾಶಮಾಡುವ ಹಕ್ಕು ನಮಗಿಲ್ಲ. ಈ ವನ್ಯಜೀವಿಗಳು ನಮ್ಮ ಪರಿಸರದ ಗುಣಮಟ್ಟದ ಒಂದು ಸೂಚಕಗಳಿದ್ದಂತೆ. ಎಲ್ಲಿಯವರೆಗೆ ಈ ಜೀವಿಗಳು ಪರಿಸರದಲ್ಲಿ ಆರೋಗ್ಯಕರವಾದ ರೀತಿಯಲ್ಲಿ ಉಳಿದುಕೊಂಡು ಬರುತ್ತವೆಯೋ ಅಲ್ಲಿಯತನಕ ಆ ಪರಿಸರ ನಮಗೂ ಉತ್ತಮ ಎಂದು ನಾವು ಹೇಳಬಹುದು. ಈಗ ಪ್ರಪಂಚದ ಆಹಾರ ಉತ್ಪಾದನೆಯ ಶೇಕಡ ೯೦ ಭಾಗ ಕೇವಲ ೨೦ ಜಾತಿಯ ಸಾಕುಸಸ್ಯಗಳಿಂದ ಮಾತ್ರ ಲಭಿಸುತ್ತಿದೆ. ಆದರೆ ಮುಂದೆ ನಮಗೆ ಆಹಾರ ಆಗಬಲ್ಲ

ಸಾಮರ್ಥ್ಯ ಇರತಕ್ಕಂತಹ ಸಾವಿರಾರು ಜಾತಿಯ ಸಸ್ಯಗಳು ವನ್ಯ ಸ್ಥಿತಿಯಲ್ಲಿವೆ. ಇವುಗಳನ್ನು ನಾವು ಉಳಿಸಿಕೊಳ್ಳಲೇ ಬೇಕು. ಇದೇ ರೀತಿ ಆರೋಗ್ಯ ಸಂರಕ್ಷಣೆಯ ಕ್ಷೇತ್ರವನ್ನು ಉದಾಹರಣೆಯಾಗಿ ತೆಗೆದುಕೊಂಡರೆ ನಾವು ಬಳಸುತ್ತಿರುವ ಶೇಕಡ ೫೦ಕ್ಕೂ ಹೆಚ್ಚು ಔಷಧಗಳು ಸಸ್ಯ ಮೂಲಗಳಿಂದ ಬರುತ್ತಿವೆ. ಮೂರುಸಾವಿರಕ್ಕೂ ಹೆಚ್ಚು ಜೀವನಿರೋಧಕಗಳು ಸೂಕ್ಷ್ಮ ಜೀವಿಗಳಿಂದ ಲಭಿಸುತ್ತಿವೆ. ನಾವು ಯಾವ ಜೀವಿಗಳನ್ನು ನಿರುಪಯುಕ್ತ ಎಂದು ಪರಿಗಣಿಸುತ್ತೇವೆಯೋ ಮುಂದೊಮ್ಮೆ ಅದರಲ್ಲಿರುವ ರಾಸಾಯನಿಕ ವಸ್ತುಗಳಿಂದ, ವಂಶವಾಹಿನಿಗಳಿಂದ ಕೋಟಿಗಟ್ಟಲೆ ಜನರ ಪ್ರಾಣ ಉಳಿಸಬಲ್ಲ, ಲಕ್ಷಾಂತರ ಜನರ ಹಸಿವನ್ನು ನಿವಾರಿಸಬಲ್ಲ ಪದಾರ್ಥಗಳು ಸಿಗಬಹುದು. ಇದಕ್ಕಿಂತ ಮುಖ್ಯವಾಗಿ ವನ್ಯಜೀವಿಗಳು ಪರಿಸರ ಚಕ್ರಗಳನ್ನು ಸಮತೋಲನದಿಂದಿರುವಂತೆ ನೋಡಿಕೊಳ್ಳುತ್ತದೆ. ಉದಾ : ನೀರಿನ ಚಕ್ರ, ಆಮ್ಲಜನಕ ಚಕ್ರ, ಮುಂತಾದವುಗಳು. ನಮ್ಮ ಭೂಮಿಯನ್ನು ಒಂದು ಮನೆಯೆಂದು ಪರಿಗಣಿಸಿದರೆ ಒಂದೊಂದು ಪ್ರಭೇದದ ವನ್ಯಜೀವಿಗಳು ಆ ಮನೆಯ ಇಟ್ಟಿಗೆಗಳಿದ್ದಂತೆ. ಮನೆಯ ಒಂದೊಂದು ಇಟ್ಟಿಗೆಯನ್ನು ತೆಗೆಯುತ್ತ ಹೋದರೆ ಕೊನೆಗೆ ಇಡೀ ಮನೆಯೇ ಕುಸಿಯುತ್ತದೆ. ಅದೇ ರೀತಿ ಯಾವುದೋ ಒಂದು ಜಾತಿ ನಿರ್ನಾಮವಾದರು ಅದರಿಂದ ಮುಂದೆ ಯಾವುದೋ ಒಂದು ಅನಿರೀಕ್ಷಿತ ದುಷ್ಪರಿಣಾಮ ಉಂಟಾಗುತ್ತದೆ. ಹಾಗಾಗಿ ಮಾನವನು ವನ್ಯಜೀವಿಗಳಿಲ್ಲದೆ ಬದುಕಲು ಸಾಧ್ಯವಿಲ್ಲ. ಆದ್ದರಿಂದ ವನ್ಯಜೀವಿಗಳನ್ನು ಸಂರಕ್ಷಿಸುವುದು ಸಮಾಜದ ಪ್ರತಿಯೊಬ್ಬನ ಕರ್ತವ್ಯ.

ವನ್ಯಜೀವಿಗಳ ಸಂರಕ್ಷಣೆ ಮೂರು ವಿಧಾನಗಳನ್ನು ಒಳಗೊಂಡಿದೆ. ಅವುಗಳೆಂದರೆ,

೧. ವನ್ಯಜೀವಿಗಳ ಸಂಖ್ಯೆಯನ್ನು ಹೆಚ್ಚಿಸುವುದು.
೨. ಜನರಲ್ಲಿ ವನ್ಯಜೀವಿಗಳ ಬಗ್ಗೆ ಅರಿವನ್ನು ಮೂಡಿಸುವುದು.
೩. ಪರಿಸರ ಸ್ನೇಹಿ ತಂತ್ರಜ್ಞಾನ ಮತ್ತು ಪರ್ಯಾಯಗಳ ಹುಡುಕಾಟ.
೪. ಮಾನವನು ತನ್ನ ಬದುಕಿನಲ್ಲಿ ಸರಳತೆಯನ್ನು ಅನುಸರಿಸುವುದು.

ಬಳಗದ ಕಾರ್ಯ ವಿಧಾನ :

ಬಳಗವು ವನ್ಯಜೀವಿ ಸಂರಕ್ಷಣೆಯನ್ನು ಎರಡು ರೀತಿಯಲ್ಲಿ ಮಾಡುತ್ತಿದೆ. ಅವುಗಳೆಂದರೆ,

ನೇರ ವನ್ಯಜೀವಿ ಸಂರಕ್ಷಣೆಯ ಕಾರ್ಯ :

ಬಳಗವು ಈ ಕಾರ್ಯಕ್ರಮದ ಮೂಲಕ ಕಾಡಿನಲ್ಲಿ ವನ್ಯಜೀವಿಗಳ ವೃಧಿಗೊಳಿಸುವತ್ತ ಕೆಲಸಮಾಡುತ್ತಿದೆ. ಈ ಕಾರ್ಯಕ್ರಮವು ಕೆಳಕಾಣಿಸಿದ ಚಟುವಟಿಕೆಗಳನ್ನು ಉಳಗೊಂಡಿದೆ.

೧. ಸ್ಥಳೀಯ ಜೀವ ಸಂಕುಲದ ಅಧ್ಯಯನ ಮತ್ತು ದಾಖಲಾತಿ.
೨. ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ, ಕಾಡಿನಲ್ಲಿ ತೇವಾಂಶವನ್ನು

ಉಳಿಯುವಂತೆ ಮಾಡುವುದು.

೩. ಸ್ಥಳೀಯ ವನ್ಯ ಸಸ್ಯಗಳ ಬೀಜ ಸಂಗ್ರಹಣೆ ಹಾಗು ಅವುಗಳ ಸಸ್ಯ ಕ್ಷೇತ್ರ ನಿರ್ಮಿಸಿ ಆಸಕ್ತರಿಗೆ ಸಸಿಗಳನ್ನು ಕೊಡುವುದು ಮತ್ತು ಸಂಗ್ರಹಿಸಿದ ಬೀಜಗಲನ್ನು ಮಳೆಗಾಲದಲ್ಲಿ ಕಾಡಿನಲ್ಲಿ ಎರಚುವುದು.

ಜಾಗೃತಿ ಕಾರ್ಯಕ್ರಮ :

ಬಳಗವು ಈ ಕಾರ್ಯಕ್ರಮದ ಮೂಲಕ ಕಾಡಿನ ಸುತ್ತಲಿನ ಜನರಲ್ಲಿ ಕಾಡು ಮತ್ತು ಕಾಡಿನ ಮಹತ್ವದ ಅರಿವನ್ನು ಮೂಡಿಸುವುದರ ಮೂಲಕ ವನ್ಯ ಜೀವಿಗಳು ಮತ್ತು ಮಾನವ ಕುಲದ ನಡುವಿನ ಸಂಘರ್ಷವನ್ನು ಕಡಿಮೆ ಗೊಳಿಸುವತ್ತ ಕೆಲಸಮಾಡುತ್ತಿದೆ. ಈ ಜಾಗೃತಿ ಕಾರ್ಯವು ಕಾಡಿನ ಸುತ್ತಲಿರುವ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದ್ದು ಈ ಮೂಲಕ ವಿದ್ಯಾರ್ಥಿಗಳು ತಮ್ಮ ಗ್ರಾಮಸ್ಥರಿಗೆ ಕಾಡಿನ ಮಹತ್ವದ ಅರಿವನ್ನು ಮೂಡಿಸುವ ಕೆಲಸವನ್ನು ಮಾಡುವಂತೆ ಪ್ರೇರೇಪಿಸಲಾಗುತ್ತಿದೆ. ಈ ಕಾರ್ಯಕ್ರಮವು ಕೆಳಕಾಣಿಸಿದ ಚಟುವಟಿಕೆಗಳನ್ನು ಉಳಗೊಂಡಿದೆ.

೧. ವನ್ಯಜೀವಿಗಳ ಅಧ್ಯಯನ.

೨. ಸಾಕ್ಷ್ಯಚಿತ್ರಗಳ ಪ್ರದರ್ಶನ.

೩. ವಿಷಯ ಸಂಬಂಧಿ ಚರ್ಚೆಗಳು.

೪. ಕಲೆ, ಸಾಹಿತ್ಯ ಮತ್ತು ಕ್ರೀಡೆಗಳ ಮೂಲಕ ಪರಿಸರದ ಬಗ್ಗೆ ತಿಳುವಳಿಕೆ ನೀಡುವುದು.

೫. ಅರಣ್ಯ ಇಲಾಖೆಯ ಜೊತೆಗೂಡಿ ಕಾಡ್ಗಿಚ್ಚು ಹಾಗು ಇತರ ಸಂರಕ್ಷಣೆಯ ಕಾರ್ಯದಲ್ಲಿ ತೊಡಗುವುದು.

ಸಂಪರ್ಕ :

ಹಸಿರು ಗೆಳೆಯರ ಬಳಗ
c/o ಜನಪದ ಸೇವಾ ಟ್ರಸ್ಟ್
ಕಲ್ಯಾಣಿ ಬೀದಿ, ಮೇಲುಕೋಟೆ – ೫೭೧೪೩೧
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ
ದೂರವಾಣಿ : ೯೬೬೩೪೦೬೩೬೬
ಇಮೇಲ್ : hasirugeleyaru@gmail.com

* * *

ಜನಪದ ಸೇವಾ ಟ್ರಸ್ಟ್ ಆತ್ಮಾವಲೋಕನ

- ಸಂತೋಷ ಕೌಲಗಿ

(ದಿನಾಂಕ ೨೭-೩-೨೦೧೧ ರಂದು ಜನಪದ ಸೇವಾ ಟ್ರಸ್ಟಿನ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಹೊಸ ಜೀವನ ದಾರಿಯಲ್ಲಿ ನಡೆದ ಸ್ನೇಹ ಮಿಲನದಲ್ಲಿ ಮಂಡಿಸಿದ ಪ್ರಬಂಧ)

೧೯೬೦ ರಲ್ಲಿ ಪ್ರಾರಂಭವಾದ ಜನಪದ ಸೇವಾ ಟ್ರಸ್ಟ್ ೫೦ ವರ್ಷಗಳನ್ನು ಪೂರೈಸಿದೆ ಎಂಬುದು ಸಂತಸದ ಸಂಗತಿ. ಇದೇ ಸಂದರ್ಭದಲ್ಲಿ ಜನಪದ ಸೇವಾ ಟ್ರಸ್ಟ್ ನಡೆದು ಬಂದ ದಾರಿಯ ಅವಲೋಕನವೂ ಅಗತ್ಯ ಎಂದು ಅನಿಸುತ್ತಿದೆ. ಅವಲೋಕನ ಎಂದ ಕೂಡಲೆ ಟ್ರಸ್ಟ್ ಮಾಡಿರುವ ಕೆಲಸಗಳ ಸ್ಟಾಕ್ ಟೇಕಿಂಗ್ ಕೆಲಸವಲ್ಲ. ಅಂದರೆ ಎಷ್ಟು ಅಂಗವಿಕಲ ಮಕ್ಕಳು ಇದರಿಂದ ಪ್ರಯೋಜನ ಪಡೆದರು, ಶಾಲೆಯಲ್ಲಿ ಓದಿದ ಎಷ್ಟು ವಿದ್ಯಾರ್ಥಿಗಳು ಎಂಜಿನಿಯರಿಂಗ್ ಸೇರಿದರು, ಎಷ್ಟು ಶಾಖೆಗಳನ್ನು ಪ್ರಾರಂಭಿಸಲಾಯಿತು, ಬ್ಯಾಂಕ್‌ನಲ್ಲಿ ಎಷ್ಟು ಹಣ ಇದೆ ಮುಂತಾದವು. ಆದರೆ ನನ್ನ ಅವಲೋಕನದಲ್ಲಿ ಜಾಗತಿಕ ಮಟ್ಟದಲ್ಲಿ ಬದಲಾಗುತ್ತಿರುವ ರಾಜಕೀಯ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯಲ್ಲಿ ಬಿಗಡಾಯಿಸುತ್ತಿರುವ ಪರಿಸರ ಸಂಬಂಧಿ ವಿಷಯಗಳ ದೃಷ್ಟಿಯಿಂದ ಎಲ್ಲಿ ನಿಂತಿದೆ ಎಂಬುದನ್ನು ಗಮನಿಸ ಬೇಕು ಎನಿಸುತ್ತದೆ. ೫೦ ವರ್ಷಗಳ ಹಿಂದೆ ಪ್ರಾರಂಭವಾದ ಅನೇಕ ಸಂಸ್ಥೆಗಳು ಅಗಾಧವಾಗಿ ಬೆಳೆದು ದೇಶ ವಿದೇಶಗಳಲ್ಲೂ ತಮ್ಮ ಬಾಹುಗಳನ್ನು ವಿಸ್ತರಿಸಿವೆ. ಆರ್ಥಿಕವಾಗಿ ಬಲಾಢ್ಯವಾಗಿವೆ. ಅದೇ ಸಂದರ್ಭದಲ್ಲಿ ಅನೇಕ ಸಂಸ್ಥೆಗಳು ಹಲವಾರು ಕಾರಣಗಳಿಂದಾಗಿ ನಿಂತು ಹೋಗಿವೆ. ಇನ್ನು ಹಲವು ಸಂಸ್ಥೆಗಳು ವಿಸ್ತಾರವಾಗಿ ಬೆಳೆದಿದ್ದರೂ ತನ್ನ ದಿಕ್ಕನ್ನು ತಪ್ಪಿವೆ. ಈ ೫೦ ವರ್ಷಗಳಲ್ಲಿ ಈ ಹಿಂದೆ ಈ ದೇಶ ಕಂಡು ಕೇಳರಿಯದಷ್ಟು ಬದಲಾವಣೆಗಳಾಗಿವೆ. ಯಾವುದೇ ಸಂಸ್ಥೆಗಾದರೂ ಸಾಮಾಜಿಕವಾಗಿ, ಆರ್ಥಿಕವಾಗಿ, ಆಗುತ್ತಿರುವ ಬದಲಾವಣೆಗಳನ್ನು ಮೀರಿ ತನ್ನ ಗುರಿಯತ್ತ ಸಾಗುವುದು ಕಷ್ಟದ ಕೆಲಸ. ಜನಪದ ಸೇವಾ ಟ್ರಸ್ಟ್ ಗೆ ಕೂಡ ಇದನ್ನ ಮೀರಲಾಗಿಲ್ಲ ಎಂಬುದು ಇಲ್ಲಿ ವಾಸ್ತವ. ಆದರೆ ಪ್ರಶ್ನೆ ಇರುವುದು ಇಂದಿನ ಪರಿಸ್ಥಿತಿಯಲ್ಲಿ ಯಾರು ಎಷ್ಟು ತೂರಿ ಹೋಗುತ್ತಿದ್ದಾರೆ ಎಂಬುದು. ಈ ದೃಷ್ಟಿಯಿಂದ ಜನಪದ ಸೇವಾ ಟ್ರಸ್ಟ್ ಎಷ್ಟು ತೂರಿ ಹೋಗಿದೆ ಎಷ್ಟು ನೆಲಕ್ಕೆ ಕಚ್ಚಿ ನಿಂತಿದೆ ಎಂಬುದನ್ನು ನೋಡ ಬೇಕಿದೆ.

ಮೊದಲಿಗೆ ಜನಪದ ಸೇವಾ ಟ್ರಸ್ಟ್‌ನ್ನು ಕಟ್ಟಿದವರು ನಂತರ ಅದರ ಬೆಂಬಲಕ್ಕೆ ಬಂದು ನಿಂತವರು ಯಾರೂ ಜಾತಿ ಧರ್ಮದ ಹೆಸರಿನಲ್ಲಿ ಸಂಘಟನೆ ಮಾಡಬಲ್ಲ ಮಠಾಧೀಶರಲ್ಲ, ರಾಜಕೀಯ ಶಕ್ತಿಯನ್ನು ಬಳಸಿ ಸಂಸ್ಥೆ ಕಟ್ಟಬಲ್ಲ ರಾಜಕಾರಣಿಗಳಲ್ಲ, ತಮ್ಮ ಆರ್ಥಿಕ ಬಲಾಢ್ಯತೆಯಿಂದ ಸಂಘಟಿಸ ಬಲ್ಲ ಕೈಗಾರಿಕೋದ್ಯಮಿಗಳಲ್ಲ, ಇಲ್ಲವೇ ತಮ್ಮ ಅಧಿಕಾರದ ಶಕ್ತಿಯಿಂದ ಸಂಘಟಿಸುವ ಬಲ ಪಡೆಯುವ ದೊಡ್ಡ ಅಧಿಕಾರಿಗಳೂ ಅಲ್ಲ. ಅವರೆಲ್ಲರೂ ಶ್ರೀ ಸಾಮಾನ್ಯರು. ಜಾತಿ, ಮತ, ಧರ್ಮ, ದೇಶಗಳನ್ನು ಮೀರಿ ಕೇವಲ ಸಮಾಜದ ಬಗೆಗಿನ ಪ್ರೀತಿಯಿಂದ ತಮ್ಮ ಇತಿ ಮಿತಿಯೊಳಗೆ ಇದೆಲ್ಲವನ್ನೂ ಕಟ್ಟಿದ್ದಾರೆ

ಹಾಗೂ ೫೦ ವರ್ಷಗಳಿಂದ ಪೋಷಿಸಿಕೊಂಡು ಬಂದಿದ್ದಾರೆ.

ಮಹಾತ್ಮ ಗಾಂಧಿಯ ನಂತರ ಈ ದೇಶದ ಯಾವುದೇ ಸಾರ್ವಜನಿಕ ಚಟುವಟಿಕೆ ಗಾಂಧಿ ಪ್ರಭಾವಲಯದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಆಗಿಲ್ಲ . ಗಾಂಧಿ ವ್ಯಕ್ತಿಯಾಗಿ, ವಿಚಾರವಾಗಿ, ಕಾರ್ಯಕ್ರಮವಾಗಿ ನಮ್ಮನ್ನು ಕಳೆದ ೮೦-೮೫ ವರ್ಷಗಳಲ್ಲಿ ಎಷ್ಟೊಂದು ಆವರಿಸಿ ಕೊಂಡು ಬಿಟ್ಟಿದ್ದಾರೆ ಎಂದರೆ ಯಾವುದೇ ಸಾರ್ವಜನಿಕ ಚಟುವಟಿಕೆ ಅಥವಾ ಚಿಂತನೆ ಗಾಂಧಿ ಪರವಾಗಿ ಇರಬೇಕು ಇಲ್ಲವೇ ವಿರೋಧವಾಗಿ ಇರಬೇಕು. ಒಟ್ಟಾರೆ ಗಾಂಧಿ ಸಾರ್ವಜನಿಕ ಬದುಕಿನ ರೆಫರೆನ್ಸ ಲೈನ್ ಆಗಿಬಿಟ್ಟಿದ್ದಾರೆ. ಒಬ್ಬ ಸಾರ್ವಜನಿಕ ವ್ಯಕ್ತಿ ಇಲ್ಲವೆ ಸಂಸ್ಥೆ ಗಾಂಧಿಯಿಂದ ಎಷ್ಟು ದೂರ ಹೋಗಿದ್ದಾನೆ ಇಲ್ಲವೇ ಎಷ್ಟು ಹತ್ತಿರ ಬಂದಿದ್ದಾನೆ ಎಂಬುದನ್ನು ಅಳೆದು ಆ ವ್ಯಕ್ತಿ ಯಾ ಸಂಸ್ಥೆಯ ಯಶಸ್ಸನ್ನು ಅಳೆಯ ಬೇಕಾದ ಸ್ಥಿತಿ ಈ ದೇಶದಲ್ಲಿ ನಿರ್ಮಾಣವಾಗಿ ಹೋಗಿದೆ. ಇದು ಗಾಂಧಿಯ ಪರವಾದ ದಿಕ್ಕಾಗಲೀ ಇಲ್ಲವೆ ವಿರೋಧದ ದಿಕ್ಕಾಗಲೀ ಎರಡಕ್ಕೂ ಇದು ಅನ್ವಯಿಸುತ್ತದೆ.

ಮತ್ತೊಂದು ಅಂಶವೆಂದರೆ ಗಾಂಧಿ ತನ್ನ ಕಾಲದಲ್ಲಿ ಆಕ್ಟಿವಿಸಂ ಮತ್ತು ವಾಲಂಟರಿಸಂ ಎರಡನ್ನು ಹದವಾಗಿ ಬೆರೆಸುವ ವಿಧಾನವನ್ನು ಅರಿತ್ತಿದ್ದರು. ಗಾಂಧಿಯ ಆಕ್ಟಿವಿಸಂ ಅನ್ನು ಸ್ವಾತಂತ್ರ ಹೋರಾಟದ ಅವರ ಚಟುವಟಿಕೆಗಳಲ್ಲಿ ಗಮನಿಸಬಹುದಾದರೆ ಅವರು ಹಮ್ಮಿಕೊಂಡ ವಿದಾಯಕ ಕಾರ್ಯಕ್ರಮಗಳಲ್ಲಿ ಅವರ ವಾಲಂಟರಿಸಂ ಅನ್ನು ನೋಡಬಹುದು. ಕುಷ್ಠ ರೋಗಿಗಳ ಸೇವೆ, ಸಫಾಯಿ ಕಾರ್ಯಕ್ರಮ, ಖಾದಿ ಚಟುವಟಿಕೆ, ಅಕ್ಷರ ಜ್ಞಾನ ನೀಡುವುದು ಹೀಗೆ ಹತ್ತು ಹಲವು ಚಟುವಟಿಕೆಗಳನ್ನು ಗಾಂಧಿ ವಾಲಂಟರಿಸಂಗೆ ಅವಕಾಶ ಮಾಡಿಕೊಡಲು ರೂಪಿಸಿದರು. ಆಕ್ಟವಿಸಂ ಗೆ ಸದಾಕಾಲ ವ್ಯವಸ್ಥೆಯನ್ನು ಬದಲಿಸುವ, ಪ್ರಭುತ್ವವನ್ನು ಪ್ರಶ್ನಿಸುವ ಸದಾ ತನ್ನ ಎದುರಿರುವ ಶತ್ರುವನ್ನು ಗುರುತಿಸುವ ತವಕವಿದ್ದರೆ, ವಾಲಂಟರಿಸಂಗೆ ಅದಕ್ಕಿಂತ ಸಂಪೂರ್ಣವಾಗಿ ಭಿನ್ನವಾದ ಉದ್ದೇಶವಿರುವಂತೆ ತೋರುತ್ತದೆ. ಇಲ್ಲಿ ಹೆಚ್ಚಿನ ಒತ್ತು ಆತ್ಮ ಶುದ್ಧಿ, ಪರಹಿತ ಚಿಂತನೆ ಮತ್ತು ಸಮಾಜದ ಒಳಿತಿಗೆ ವ್ಯಕ್ತಿಗತ ಕಾಣಿಕೆಯ ಪ್ರಯತ್ನ. ಗಾಂಧಿ ಅಕ್ಟವಿಸಂ ಮೂಲಕ ಲೌಕಿಕವಾದದ್ದನ್ನು ಪಡೆಯಲು ಪ್ರಯತ್ನಿಸಿದರೆ ವಾಲಂಟರಿಸಂ ಮೂಲಕ ಪಾರಮಾರ್ಥಿಕವಾದದ್ದನ್ನು, ಆಧ್ಯಾತ್ಮಿಕವಾದದ್ದನ್ನು ಪಡೆಯಲು ಪ್ರಯತ್ನಿಸುತ್ತಿದ್ದರು ಎಂದು ಅನಿಸುತ್ತದೆ. ಗಾಂಧಿ ವಾಲಂಟರಿಸಂ ಮೂಲಕ ಆಕ್ಟಿವಿಸಂಗೆ ಬೇಕಾದ ಶಕ್ತಿಯನ್ನೂ, ವಾಲಂಟರಿಸಂಗೆ ಬೇಕಾದ ಸ್ವಯಂಪ್ರೇರಣೆಯ ಭಾವವನ್ನು ಆಕ್ಟಿವಿಸಂ ಮೂಲಕ ಪಡೆಯುವ ಜಾಣತನವನ್ನು ಕರಗತಮಾಡಿಕೊಂಡಿದ್ದರೇನೋ ಎನಿಸುತ್ತದೆ.

ಇದು ಏನು? ಜನಪದ ಸೇವಾ ಟ್ರಸ್ಟ್ ನ ಸುವರ್ಣ ಸಂಭ್ರಮದ ಸಂದರ್ಭದಲ್ಲಿ ಬರೀ ಗಾಂಧಿಯ ಮಾತು ಎಂದು ನಿಮಗನಿಸಬಹುದು. ಆದರೆ ದಿನದ ಹೆಚ್ಚಿನ ಸಮಯವನ್ನು ಸಾರ್ವಜನಿಕ ಚಟುವಟಿಕೆಗಳಲ್ಲಿ ಕಳೆಯುವ ನಮ್ಮಂತಹವರಿಗೆ ನಮ್ಮನ್ನು ಸದಾ ಕಾಲ ಪ್ರೇರೇಪಿಸುವ, ಪೀಡಿಸುವ, ಕಾಡುವ, ಹಂಗಿಸುವ, ಚುಚ್ಚುವ, ಬೈಯುವ, ಸಾಂತ್ವನ ನೀಡುವ ಶಕ್ತಿ ಗಾಂಧಿ. ಹಾಗಾಗಿ ಇಷ್ಟು ಮಾತನ್ನು ಗಾಂಧಿಯ ಬಗ್ಗೆ ೫೦ ವರ್ಷದ ಈ ಸಂದರ್ಭದಲ್ಲಿ ಹೇಳುವುದು ನನಗೆ ಅನಿವಾರ್ಯ.

ಸ್ವಾತಂತ್ರಾ ನಂತರದ ದಿನಗಳಲ್ಲಿ ಅಕ್ಟಿವಿಸಂ ಮತ್ತು ವಾಲಂಟರಿಸಂನ ನಡುವಿನ ಸಂಬಂಧ ನಿಧಾನವಾಗಿ ತೆಳ್ಳಗಾಗುತ್ತಿದ್ದಂತೆ ಮತ್ತೊಂದು ಇಸಂ ಬಂದು ಸೇರಿತು ಎಂದು ನನಗನಿಸುತ್ತಿದೆ. ಅದು ಎನ್.ಜಿ.ಒ ಇಸಂ ಎಂದು ನಾನು ಗುರುತಿಸುತ್ತೇನೆ. ವಾಲಂಟರಿಸಂಗೆ

ಇರದಿದ್ದ ವೃತ್ತಿಪರತೆಯನ್ನು ತುಂಬ ಬೇಕೆಂಬ ಉತ್ಸಾಹದಲ್ಲಿ ಮೂಡಿಬಂದ ಈ ಎನ್.ಜಿ.ಓ ಇಸಂ ವಾಲಂಟರಿಸಂನ ವಿಧಾಯಕ ಕಾರ್ಯಕ್ರಮವನ್ನು ಮಾತ್ರ ಸ್ವೀಕರಿಸಿತೇ ಹೊರತು ವಾಲಂಟರಿಸಂನ ಮೂಲ ಆಶಯವನ್ನು ಎಲ್ಲೋ ಕಳೆದು ಕೊಂಡು ಬಿಟ್ಟಿತು. ಅದರ ಚೈತನ್ಯದಿಂದ ದೂರವಾಗಿ ವಾಲಂಟರಿಸಂನ ಕಳೇಬರದಂತೆ ಕಾಣತೊಡಗಿತು. ನಿಧಾನವಾಗಿ ಪ್ರಭುತ್ವ ತನ್ನ ತೆಕ್ಕೆಗೆ ಇಡೀ ಎನ್.ಜಿ.ಓ ಇಸಂ ಅನ್ನು ಹಾಕಿಕೊಂಡು ಅದನ್ನು ಸಂಪೂರ್ಣವಾಗಿ ವಾಲಂಟರಿಸಂ ನಿಂದ ದೂರ ಮಾಡಿ ತನಗಾಗಿ ಅದನ್ನು ದುಡಿಸಿಕೊಳ್ಳುವುದರಲ್ಲಿ ಗೆದ್ದಿತು. ವಾಲಂಟರಿಸಂನಿಂದ ಮೂಡಿ ಬಂದಿದ್ದ ಎಲ್ಲ ಯೋಜನೆಗಳನ್ನು ತಾನು ಮಾಡುತ್ತಾ ವಾಲಂಟರಿಸಂಗೆ ಅವಕಾಶವೇ ಇಲ್ಲದಂತೆ ಮಾಡತೊಡಗಿತು. ಇದು ಎಲ್ಲರ ಗಮನಕ್ಕೂ ಬಂದಿರುವ ವಿಷಯ. ಒಂದು ರೀತಿಯಲ್ಲಿ ಎನ್.ಜಿ.ಓ ಇಸಂ ಪ್ರವಾಹದ ದಿಕ್ಕಿನಲ್ಲಿ ಈಜುವ ಕ್ರಿಯೆಯಾದರೆ ವಾಲಂಟರಿಯಿಸಂ ಹಾಗೂ ಅಕ್ಟಿವಿಸಂ ಪ್ರವಾಹಕ್ಕೆ ವಿರುದ್ಧವಾಗಿ ಈಜುವ ಕ್ರಿಯೆಗಳಾದವು. (ಪ್ರಭುತ್ವ ಇಷ್ಟಕ್ಕೇ ಬಿಡದೆ ಇಂದು ಆಕ್ಟಿವಿಸಂ ಅನ್ನೂ ತನ್ನ ತೆಕ್ಕೆಗೆ ತೆಗೆದು ಕೊಳ್ಳಲು ನೋಡುತ್ತಿರುವುದು ಅತ್ಯಂತ ಆತಂಕಕಾರಿ ವಿಷಯ. ಅದು ಅಕ್ಟಿವಿಸಂ ನ ವ್ಯಾಖ್ಯೆಯನ್ನೇ ಬದಲಿಸಲು ನೋಡುತ್ತಿದೆ. ಉದಾಹರಣೆಗೆ ಗ್ರಾಮ ಮಟ್ಟದ ತನ್ನ ಆರೋಗ್ಯ ಕಾರ್ಯಕರ್ತೆಯರನ್ನು ಸೋಶಿಯಲ್ ಹೆಲ್ತ್ ಆಕ್ಟಿವಿಸ್ಟ್ ಗಳೆಂದು ಕರೆಯುತ್ತಿದೆ.)

ಈ ಐವತ್ತು ವರ್ಷಗಳಲ್ಲಿ ಹೆಚ್ಚಿನ ವ್ಯಕ್ತಿಗಳು ಇಲ್ಲವೇ ಸಂಸ್ಥೆಗಳು ಮೇಲೆ ಹೇಳಿದ ಅಕ್ಟಿವಿಸಂ, ವಾಲಂಟರಿಸಂ ಇಲ್ಲವೇ ಎನ್.ಜಿ. ಓ ಇಸಂ ಈ ಮೂರು ಇಸಂಗಳಲ್ಲಿ ಯಾವುದೋ ಒಂದು ಇಸಂನಲ್ಲಿ ಹೂತು ಹೋಗಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ.

ಈ ಮೇಲಿನ ಬೆಳಕಿನಲ್ಲಿ ಜನಪದ ಸೇವಾ ಟ್ರಸ್ಟಿನ ಚಟುವಟಿಕೆಗಳನ್ನು ಅವಲೋಕಿಸಿದರೆ ಜನಪದ ಸೇವಾ ಟ್ರಸ್ಟ್‌ನ ವೈಶಿಷ್ಟ್ಯದ ಅರಿವಾಗುತ್ತದೆ. ಈ ಮೇಲಿನ ವಿಷಯಗಳು ಅರ್ಥವಾಗಿರುವವರಿಗೆ ಜನಪದ ಸೇವಾ ಟ್ರಸ್ಟಿನ ಆತಂಕಗಳು ಅರಿವಾಗಿ ಅದರ ಭಾಗವಾಗಬೇಕು ಎನಿಸುತ್ತದೆ. ಕೇವಲ 'ಡೆವಲೆಪ್‌ಮೆಂಟ್' ಎಂಬ ಶಬ್ದದ ಅಳತೆ ಪಟ್ಟಿಯನ್ನು ಕೈಯಲ್ಲಿ ಹಿಡಿದು ಓಡಾಡುತ್ತಿರುವವರಿಗೆ ೫೦ ವರ್ಷಗಳಲ್ಲಿ ಎಷ್ಟೊಂದು ಕಟ್ಟಡ ಕಟ್ಟಬಹುದಿತ್ತು ? ಎಷ್ಟೊಂದು ಸಾವಿರ ಮಕ್ಕಳಿಗೆ ಊಟ ಹಾಕಬಹುದಿತ್ತು ? ಎಷ್ಟೊಂದು ಹಣ ಕಟ್ಟಿಡಬಹುದಿತ್ತು ? ಅಂತಹದ್ದು ಇಲ್ಲಿ ಏನೂ ಆಗಿಲ್ಲದ ಕಾರಣ ಇವರು ಅನುಪಯುಕ್ತರು ಎಂದು ಅನಿಸಿರುವುದೂ ಸಹಜ.

೫೦ ವರ್ಷಗಳಲ್ಲಿ ಜನಪದ ಸೇವಾ ಟ್ರಸ್ಟ ಎಷ್ಟೋ ಕಾರ್ಯಕ್ರಮಗಳನ್ನು ನಡೆಸಿದೆ, ಎಷ್ಟನ್ನೋ ಬಿಟ್ಟಿದೆ. ತನ್ನ ಚಟುವಟಿಕೆಗಳು ಸ್ಥಾವರವಾಗಿ ಇನ್ನು ಇಲ್ಲಿ ದಿನನಿತ್ಯ ಕೇವಲ ಪೂಜೆ ಪುನಸ್ಕಾರಗಳು ಎಂದ ಕೂಡಲೆ ಅಲ್ಲಿಂದ ದೂರ ಸರಿದಿದೆ. ಅಥವಾ ಆ ಚಟುವಟಿಕೆ ತನ್ನ ಫುಡ್ ಸೆಕ್ಯುರಿಟಿಯ ಕೆಲಸವಾಗ ತೊಡಗಿದೆ ಎನಿಸಿದ ಕೂಡಲೆ ಅಲ್ಲಿಂದ ಹಿಂದೆ ಸರಿದಿದೆ. ಸದಾ ಹೊಸದರ ಹುಡುಕಾಟದಲ್ಲಿದೆ. ಹಾಗಾಗಿ ಮಾಮೂಲಿ 'ಡೆವಲಪ್‌ಮೆಂಟ್' ಅಳತೆ ಪಟ್ಟಿಯವರಿಗೆ ಟ್ರಸ್ಟಿನ ಹಿಂದಿನ ಉದ್ದೇಶಗಳು ಅರ್ಥವಾಗುವುದು ಕಷ್ಟವಾಗುತ್ತದೆ.

ಟ್ರಸ್ಟ್ ಪ್ರಜ್ಞಾಪೂರ್ವಕವಾಗಿ ವಾಲಂಟರಿಸಂ ನಿಂದ ಅಕ್ಟವಿಸಂ ಕಡೆಗೆ ಹೋಗಬೇಕೆಂಬ ಬಯಕೆಯನ್ನು ಹೊಂದಿದೆ. ಅಂದರೆ ಹೊಸ ಸುಸ್ಥಿರ ಸಮಾಜದ ಕನಸೊಂದನ್ನು ಹೊತ್ತು ೫೦ ವರ್ಷಗಳನ್ನು ಸವೆಸಿದೆ. ಇಂದು ಪರಿಸರದ ವಿಷಯ ಮಾನವನ ಇತಿಹಾಸದಲ್ಲಿ ಕಂಡು ಕೇಳರಿಯದಷ್ಟು ಮಹತ್ವವನ್ನು ಪಡೆದು ಕೊಳ್ಳುತ್ತಿವೆ. ನಾವು ಮಾಡುವ ಪ್ರತಿಯೊಂದು ಚಟುವಟಿಕೆ ಮತ್ತು ಸಂದೇಶ ಎಷ್ಟು ಪರಿಸರಸ್ನೇಹಿ ಯಾಗಿದೆ

ಎಂಬುದನ್ನು ಎಲ್ಲ ಸಂಸ್ಥೆಗಳು ನೋಡಬೇಕಾದ ಅನಿವಾರ್ಯತೆ ಉಂಟಾಗಿದೆ. ಪರಿಸರ ಎಂದ ಕೂಡಲೆ ಕೇವಲ ಗಿಡ-ಮರವಲ್ಲ, ಪ್ರಾಣಿ-ಪಕ್ಷಿಯಲ್ಲ ಇದರಲ್ಲಿ ನಮ್ಮ ಶಿಕ್ಷಣದ ಬಗೆಗಿನ ಚಿಂತನೆಗಳು, ತಂತ್ರಜ್ಞಾನದ ಬಗೆಗಿನ ಅಭಿಪ್ರಾಯ, ಕೃಷಿಯ ಬಗೆಗಿನ ನಿಲುವು, ನಮ್ಮ ರಾಜಕೀಯ ನಿಲುವು, ಸಂಸ್ಕೃತಿಯ ಪ್ರಶ್ನೆ ಹೀಗೆ ಮಾನವ ಹಿತಕ್ಕೆ ಸಂಬಂಧಿಸಿದ ಎಲ್ಲವೂ ಅಡಗಿದೆ. ಒಟ್ಟಿನಲ್ಲಿ ಜನಪದ ಸೇವಾ ಟ್ರಸ್ಟ್ ಅಹಿಂಸಾತ್ಮಕ ಪರ್ಯಾಯಗಳ ಹುಡುಕಾಟದ ಕೇಂದ್ರವಾಗಬೇಕು ಎಂಬುದು ನಮ್ಮೆಲ್ಲರ ಆಶಯ.

ಜನಪದ ಸೇವಾ ಟ್ರಸ್ಟ್ ಸ್ಥಾವರವನ್ನು ಇಷ್ಟು ವರ್ಷಗಳಲ್ಲಿ ಪ್ರಜ್ಞಾಪೂರ್ವಕವಾಗಿ ಚಿಕ್ಕದಾಗಿರಿಸಿಕೊಂಡಿದೆ. ಇಲ್ಲಿ ಸದಾ ಕಾಲ ಹೊಸ ಚಿಂತನೆಗೆ ಅವಕಾಶವಿರುವಂತೆ ನೋಡಿಕೊಂಡಿದೆ. ಇದರ ಸಂಪರ್ಕಕ್ಕೆ ಬಂದವರು ಒಂದು ಹೊಸ ಉತ್ಸಾಹದ ಗಾಳಿಯ ಅನುಭವವನ್ನು ಪಡೆದಿದ್ದಾರೆ. ಇಲ್ಲಿ ಇನ್ನೂ ಹೊಸ ಸಮಾಜದ ಸೃಷ್ಟಿಗೆ ಬೇಕಾದ ಚೈತನ್ಯವಿದೆ ಎಂಬುದನ್ನು ಗಮನಿಸಿದ್ದಾರೆ.

ಇಲ್ಲಿಯ ಒಂದು ಶಿಬಿರದಲ್ಲಿ ಭಾಗವಹಿಸಿದ ಇಂದು ವಿಶ್ವ ಬ್ಯಾಂಕಿನ ದೊಡ್ಡ ಹುದ್ದೆಯಲ್ಲಿರುವ ಸ್ಯಾಲಿ ಕೇಂಬ್ರಿಜ್ಡ್ My stay with you was an eye opener ,now I could see better how the system works ಎಂದು ತಮ್ಮ ಒಂದು ಪತ್ರದಲ್ಲಿ ಬರೆಯುತ್ತಾರೆ. ಹಾಗೆಯೇ ಭಾರತವನ್ನು ದ್ವೇಶಿಸಿದ ಚರ್ಚಿಲ್ ಅವರ ಮರಿ ಮೊಮ್ಮಗ ನಮ್ಮೊಡನೆ ೬ ತಿಂಗಳು ಕಳೆದ ಹ್ಯೂಗೋ ಡಿಕ್ಸನ್ ಸದಾ ಟ್ರಸ್ಟಿನ ಬಗ್ಗೆ ಕಾಳಜಿ ಮತ್ತು ಪ್ರೀತಿಯನ್ನು ತೋರಿದ್ದಾರೆ. ಈಗತಾನೆ ಆಕ್ಸಫರ್ಡ್ ವಿಶ್ವ ವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದ ಸೈಮನ್ ಹೊವಾರ್ಡ್ without the help of you and your family I would not be where I am today ಎಂದು ಬರೆದಿದ್ದಾರೆ. ಇವುಗಳಿಗಿಂತ ಹೆಚ್ಚಿನ ಪ್ರಶಂಸೆ ಟ್ರಸ್ಟಿಗೆ ಬೇಕಿಲ್ಲ. ಇಲ್ಲಿ ಆದ ಹೆಚ್ಚಿನ ಕೆಲಸಗಳು ಅಮೂರ್ತವಾಗಿವೆ. ಅವು ಯಾವುವೂ ದಾಖಲೆಗೆ ಸಿಗುವುದು ಕಷ್ಟ. ಅವುಗಳನ್ನು ಸವಿದವರಿಗೇ ಅದರ ರುಚಿ ಗೊತ್ತು.

ಜನಪದ ಸೇವಾ ಟ್ರಸ್ಟ್ ನ ಅಧ್ಯಾಯದಲ್ಲಿ ೫೦ ವರ್ಷ ಒಂದು ಘಟ್ಟವಾದರೆ ಮುಂದಿನ ೫೦ ವರ್ಷ ಇನ್ನೊಂದು ಘಟ್ಟ, ತನ್ನೆಲ್ಲ ಚಟುವಟಿಕೆಗಳಿಗಳನ್ನು ಜಾಗತಿಕ ಮಟ್ಟದಲ್ಲಿ ಚಿಂತಿಸಿ ಸ್ಥಳೀಯವಾಗಿ ಅದಕ್ಕೆ ಸ್ಪಂದಿಸಬೇಕಾದ ಕಾಲ ಘಟ್ಟ. ಮುಂದಿನ ಸವಾಲುಗಳನ್ನು ಸರಿಯಾಗಿ ಗ್ರಹಿಸಿ ಅದನ್ನು ಅರ್ಥೈಸುವುದೇ ಜನಪದ ಸೇವಾ ಟ್ರಸ್ಟ್‌ನಂತಹ ಸಂಸ್ಥೆಗಳ ಜವಾಬ್ದಾರಿ ಎಂದು ನಾನು ಭಾವಿಸಿದ್ದೇನೆ. ಜನಪದ ಸೇವಾ ಟ್ರಸ್ಟ್ ಜನಾಧಾರಿತವಾಗಿದ್ದು ಕೊಂಡು ನಿಮ್ಮೆಲ್ಲರ ಸಹಾಯ, ಬೆಂಬಲ ಮತ್ತು ಪ್ರೀತಿಯಿಂದ ಹೊಸ ಸಮಾಜದ ರಚನೆಗೆ ಕೆಲಸ ಮಾಡುವಂತಾಗಲಿ ಎಂದು ಆಶಿಸುತ್ತೇನೆ.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟ್ ಸ್ಥಾಪನೆಯಾಗಿ ಐವತ್ತು ವರ್ಷಗಳಾದವು. ಆ ನಿಮಿತ್ತವಾಗಿ "ಸ್ನೇಹಮಿಲನ" ಎಂಬ ಹೆಸರಿನಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಟ್ರಸ್ಟಿನ ದಾನಿಗಳು, ಹಿತೈಷಿಗಳು ಮತ್ತು ಫಲಾನುಭವಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಈ ಕಾರ್ಯಕ್ರಮ ಮಾರ್ಚ್೨೭ ಭಾನುವಾರದಂದು ಹೊಸ ಜೀವನ ದಾರಿ ಕೇಂದ್ರ್ರದಲ್ಲಿ ನಡೆಯಿತು. ಬೆಳಿಗ್ಗೆ ೧೧ರಿಂದ ಮಧ್ಯಾಹ್ನ ೩ಗಂಟೆವರೆಗೆ ನಡೆದ ಈ ಕಾರ್ಯಕ್ರಮ ತುಂಬ ಸರಳವಾಗಿತ್ತು. ಸುಮಾರು ೨೦೦ಜನ ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸರ್ವೋದಯ ನಾಯಕರಾದ ಎಚ್.ಎಸ್.ದೊರೆಸ್ವಾಮಿ ಮತ್ತು ಪ್ರೊ ಎಚ್.ಎಲ್.ಕೇಶವಮೂರ್ತಿ ಭಾಗವಹಿಸಿದ್ದರು. ಟ್ರಸ್ಟಿನ ಮುಂದಿನ ಕಾರ್ಯ ಯೋಜನೆ ಕುರಿತು ಸಂತೋಷ ಕೌಲಗಿಯವರು ಪ್ರಬಂಧ ಮಂಡಿಸಿದರು. ಆ ಬಗ್ಗೆ ಕೆಲವರು ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಸಮಾರಂಭ ಯಶಸ್ವಿಯಾಗಿ ನಡೆಯಿತು. ಸಮಾರಂಭದಲ್ಲಿ ಭಾಗವಹಿಸಿದ್ದ ಟ್ರಸ್ಟಿನ ಹಳೆಯ ವಿದ್ಯಾರ್ಥಿನಿ ಗಾವಡಗೆರೆ ಪದ್ಮರವರು ಸಮಾರಂಭದ ಬಗ್ಗೆ ತಮ್ಮ ಅಭಿಪ್ರಾಯ ಸೂಚಿಸಿ ಹೀಗೆ ಪತ್ರ ಬರೆದಿದ್ದಾರೆ:-

ಆ ದಿನದ ಸ್ನೇಹ ಮಿಲನ ಕಾರ್ಯಕ್ರಮ ತುಂಬಾ ಚನ್ನಾಗಿತ್ತು ಅಲ್ಲಿ ನಾನು ೨ವರ್ಷಗಳ ಕಾಲ ವ್ಯಾಸಂಗ ಮಾಡಿದ್ದರೂ ನಮ್ಮ 'ಜನಪದ ಸೇವಾಟ್ರಸ್ಟ್'ನ ಪೂರ್ಣಪ್ರಮಾಣದ ವಿವರ ನನಗೆ ಮನವರಿಕೆಯಾಗಿರಲಿಲ್ಲ. ಅಂದು 'ಸ್ನೇಹಮಿಲನ'ದ ಸಂದರ್ಭದಲ್ಲಿ (೩೦ ವರ್ಷಗಳನಂತರ) ಅದರ ಪೂರ್ಣಪರಿಚಯವಾಯಿತು.

ನಾನು ಅಂದಿನಿಂದ ಇಂದಿನವರೆಗೂ ಅದನ್ನೇ ಮೆಲುಕುಹಾಕುತ್ತಿದ್ದೇನೆ. ಅಂತಹ ಒಂದು ಸರಳ ಸುಂದರ ಕಾರ್ಯಕ್ರಮವನ್ನು ನಾನು ಈವರೆಗೆ ಕಂಡಿರಲಿಲ್ಲ ಯಾವುದೇ ಸಭೆಸಮಾರಂಭಗಳನ್ನು ತೆಗೆದುಕೊಂಡರೂ ಬರೀ ಆಡಂಬರ ಕೊಳಕು ರಾಜಕೀಯ, ಪೋಲೀಸರ ಹಾವಳಿ ಹಾಗೂ ಊಟಕ್ಕಾಗಿ ನೂಕು ನುಗ್ಗಲು. ಅಂತಹ ಯಾವುದೇ ಆಡಂಬರ ಮತ್ತು ಅವಾಂತರಗಳಿಲ್ಲದೆ ತುಂಬಾ ಸುಂದರವಾಗಿ ಮೂಡಿಬಂತು ಅಂದಿನ ಆ ಕಾರ್ಯಕ್ರಮ.

ನಿಮ್ಮ ಹಾಗೂ ಗಿರಿಜಮ್ಮನವರ ನಿಸ್ವಾರ್ಥಸೇವೆ, ನಿಮ್ಮ ಮಕ್ಕಳ ಸಂಪೂರ್ಣ ಸಹಕಾರ ಇದೆಲ್ಲವನ್ನೂ ನೋಡಿದ ನನಗೆ ಎದೆತುಂಬಿ ಬಂತು. ಮಾತೇ ಹೊರಡದಾಯಿತು. ಹೀಗೆ ನಿಸ್ವಾರ್ಥ ಸೇವೆಯಲ್ಲಿ ತೊಡಗಿರುವ ನಿಮ್ಮ ಕುಟುಂಬವನ್ನು ಎಷ್ಟು ಶ್ಲಾಘಿಸಿದರೂ ಕಡಿಮೆಯೇ. ಕರುಣಾಗೃಹದ ಮಕ್ಕಳ ಚಟುವಟಿಕೆ ಹಾಗೂ ಸಾಧನೆಯನ್ನು ಕಂಡು ನಾನು ಮಂತ್ರಮುಗ್ಧಳಾದೆ. ಆ ಮಕ್ಕಳ ಸಾಧನೆಯ ಮುಂದೆ ನಾವು ಮಾಡಿರುವ ಸಾಧನೆ ಬರೀ ಸೊನ್ನೆ. ಆ ಮಕ್ಕಳ ಸಾಧನೆಯೇ ಸಾಧನೆ.

ಬರಯುತ್ತಾ ಹೊದರೆ ಒಂದೇ ಎರಡೇ, ಅದಕ್ಕೆ ತುದಿಮೊದಲಿಲ್ಲವಾಗುತ್ತದೆ. ಅದೊಂದು ವಿನೂತನ ಸಮಾರಂಭವಾಗಿತ್ತು. ಹೆಸರಿಗೆ ತಕ್ಕಂತೆ ಕೇವಲ ಸ್ನೇಹಮಿಲನವೇ ಆಗಿತ್ತು. ಆ ಸಮಾರಂಭಕ್ಕೆ ಆ ಹೆಸರು ತುಂಬಾ ಒಪ್ಪುವಂತಿತ್ತು.

ದತ್ತು ಸ್ವೀಕಾರದ ಆ ವಿಭಾಗವಂತೂ ತುಂಬಾ ಅವರ್ಣನೀಯ. ಮಕ್ಕಳಿಲ್ಲದವರಿಗೆ ಇಂದೊಂದು ಸುವರ್ಣಾವಕಾಶ. ಇಂತಹ ಒಂದು ಒಳ್ಳೆಯ ಸಂಸ್ಥೆಯಲ್ಲಿ ಬೆಳೆದ ಮಗುವೊಂದು ಸಿಕ್ಕಿದರೆ ಅದು ನಿಜವಾಗಿಯೂ ಆ ಮಗುವನ್ನು ದತ್ತು ಸ್ವೀಕರಿಸಿದವರ

ಅದೃಷ್ಟವೇ ಸರಿ.

ನನಗೆ ಈ ದತ್ತು ಸ್ವೀಕಾರದ ವಿಷಯ ಹಾಗೂ ಅದರ ವಿವರಗಳ ಬಗ್ಗೆ ಈಗಲೂ ಸರಿಯಾಗಿ ಗೊತ್ತಾಗಿಲ್ಲ. ಮತ್ತೊಮ್ಮೆ ಅಲ್ಲಿಗೆ ಬಂದು ಒಂದು ದಿನ ಇದ್ದು ಎಲ್ಲವನ್ನೂ ತಿಳಿದುಕೊಳ್ಳಬೇಕೆಂಬ ಆಸೆ ಇದೆ.

ಆ ದಿನ ಮಾಸ್ಟರ್(ದಾದಾ)ರವರು ಮಾಡಿದ ಆ ಉಪನ್ಯಾಸ(ಭಾಷಣ)ದ ಕ್ಯಾಸೆಟ್ ಅಥವ ಸಿ.ಡಿ ಇದ್ದರೆ ನನಗೊಂದು ಬೇಕು. ಇಲ್ಲ ಅದರದೊಂದು ಹಸ್ತಪ್ರತಿ ಇದ್ದರೂ ಸಾಕು.

ಆ ಭಗವಂತ ನಿಮ್ಮೆಲ್ಲರಿಗೂ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ.

ನಮಸ್ಕಾರಗಳು.

ಇಂತಿ, ಪದ್ಮ, ಮೈಸೂರು(ಗಾವಡಗೆರೆ)

* * *

ಮೇಲುಕೋಟೆಯ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ರಚಿಸಿರುವ ಅಭಿವೃದ್ಧಿ ಪ್ರಾಧಿಕಾರಕ್ಕೆ ಟ್ರಸ್ಟಿನ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಹೆಗ್ಗೋಡಿನ ದೇಸಿ ಸಂಸ್ಥೆಯವರು ಮೈಸೂರಿನಲ್ಲಿ ತಮ್ಮ ಉತ್ಪಾದನೆಯ ಮಾರಾಟ ಮಳಿಗೆಯನ್ನು ಪ್ರಾರಂಭಿಸಿದರು. ಈ ಮಳಿಗೆ ಉದ್ಘಾಟನೆಯನ್ನು ಟ್ರಸ್ಟಿನ ಅಧ್ಯಕ್ಷರಿಂದ ಮಾಡಿಸಿದರು.

ಅಣ್ಣಾಹಜಾರೆಯವರ ಸತ್ಯಾಗ್ರಹದ ಬೆಂಬಲಕ್ಕಾಗಿ ಮೈಸೂರಿನಲ್ಲಿ ನಡೆದ ಧರಣಿ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಸಂತೋಷ ಕೌಲಗಿ ಭಾಗವಹಿಸಿದ್ದರು.

ಮೈಸೂರಿನ ರಂಗಾಯಣದಲ್ಲಿ ಬಹುರೂಪಿ ಎಂಬ ಹೆಸರಿನಲ್ಲಿ ನಡೆದ ರಾಷ್ಟ್ರೀಯ ನಾಟಕೋತ್ಸವ ಸಂದರ್ಭದಲ್ಲಿ ಟ್ರಸ್ಟಿನ ಉತ್ಪಾದನೆ ಖಾದಿಬಟ್ಟೆಗಳ ಮಳಿಗೆಯನ್ನು ತೆರೆಯಲಾಗಿತ್ತು. ಸುಮಾರು ಹನ್ನೆರಡು ಸಾವಿರ ರೂಪಾಯಿಗಳಷ್ಟು ವ್ಯಾಪಾರವಾಯಿತು.

ಟ್ರಸ್ಟಿನ ಹಿರಿಯ ಅಭಿಮಾನಿ ದಿ॥ ಕೆ.ವಿ ಶ್ರೀಕಂಠಯ್ಯ ಜನ್ಮ ಶತಾಬ್ಧಿ ಕಾರ್ಯಕ್ರಮದಲ್ಲಿ ಟ್ರಸ್ಟಿನ ಅಧ್ಯಕ್ಷರು ಭಾಗವಹಿಸಿದ್ದರು. ಟ್ರಸ್ಟಿನ ಸ್ನೇಹಮಿಲನಕ್ಕೆ ಶುಭ ಕೋರಿ ಟ್ರಸ್ಟಿನ ಅಭಿಮಾನಿಗಳಾದ ಶ್ರೀಮತಿ ವೈದೇಹಿ ರಾಮಾನುಜಂ ಮತ್ತು ವೆಂಕಟರಮಣ ಶೆಟ್ಟಿ ತಮ್ಮ ಸಂದೇಶ ಕಳುಹಿಸಿದ್ದರು.

೨೦೧೧ ಏಪ್ರಿಲ್ ಮಾಹೆಯ ದಾನಿಗಳು

ಶ್ರೀ ಎ.ವೆಂಕಟರಮಣಶೆಟ್ಟಿ; ಶ್ರೀ ಎಸ್.ವಿಭು, ಶ್ರೀಮತಿ ಚಂದ್ರಕಾಂತ ರಾಜಪ್ಪ;
ಶ್ರೀಮತಿ ಪದ್ಮಾ; ಶ್ರೀ ಅಶೋಕ್‌ರಾವ್–ಮೈಸೂರು
ಶ್ರೀಮತಿ ಗೀತಾ ಪಾರ್ಥಸಾರಥಿ; ಶ್ರೀಮತಿ ಎಂ.ಆರ್.ಲಕ್ಷ್ಮಮ್ಮ; ಶ್ರೀ ವಸಂತಕುಮಾರ್;
ಶ್ರೀಮತಿ ಪದ್ಮಾ ವಿ.ಶೇಷಾದ್ರಿ ಚಾರಿಟೆಬಲ್ ಟ್ರಸ್ಟ್; ಶ್ರೀ ಅಪ್ರಮೇಯ; ಶ್ರೀಮತಿ ಸುಬ್ಬಲಕ್ಷ್ಮೀ;
ಶ್ರೀ ಪದ್ಮನಾಭ; ಶ್ರೀ ಎ.ರಾಧಾಕೃಷ್ಣ; ಶ್ರೀ ಎಂ.ಕೆ.ಸುಬ್ಬರಾವ್; ಶ್ರೀ ಎಂ.ಕೆ.ಶಂಕರ್;
ಶ್ರೀ ಕೆರೋಡಿ ಅಮರನಾಥ್; ಶ್ರೀ ರಾಜಣ್ಣ; ಶ್ರೀಮತಿ ಅಂಬಿಕಾ; ಶ್ರೀ ಎಸ್.ಎನ್.ಪ್ರಸಾದ್;
ಶ್ರೀ ವೆಂಕಟರಾಮನ್–ಬೆಂಗಳೂರು * ಶ್ರೀ ರವಿ ಅಯ್ಯಂಗಾರ್–ಧಾರವಾಡ
ಅಭಿನವ ಭಾರತಿ ವಿದ್ಯಾಕೇಂದ್ರ; ಶ್ರೀಮತಿ ಸರಸ್ವತಿ–ಮಂಡ್ಯ * ಶ್ರೀಮತಿ ಜನಿರಾವ್–ಆಗುಂಬೆ
ಶ್ರೀಮತಿ ಎ.ಎಸ್.ನಾಗರತ್ನ–ದೊಡ್ಡಬಳ್ಳಾಪುರ * ಶ್ರೀ ಸದಾನಂದ–ಚಾಮರಾಜನಗರ
ಶ್ರೀಮತಿ ಸಂಜನಾಗೌಡ–ಮಳವಳ್ಳಿ * ಶ್ರೀ ಸತ್ಯನಾರಾಯಣ–ತಗಡೂರು
ಶ್ರೀ ಕಮಲೇಶ್ ಗಾಂಧಿ–ಮುಂಬಯಿ * ಶ್ರೀಮತಿ ಕುಮುದಾ–ಹುಬ್ಬಳ್ಳಿ ಇವರಿಗೆ ಮತ್ತು
ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೯೦

- ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟ್ ತನ್ನ ಸೇವಾ ಮಾರ್ಗದ ೫೦ನೇ ಮೈಲಿಗಲ್ಲನ್ನು ದಾಟಿ ೫೧ನೇ ಮೈಲಿಗಲ್ಲಿಗೆ ಪ್ರವೇಶ ಮಾಡಿದೆ. ಈ ಸಂದರ್ಭದಲ್ಲಿ ಟ್ರಸ್ಟಿನ 'ಹೊಸ ಜೀವನ ದಾರಿ' ಕೇಂದ್ರದಲ್ಲಿ ಒಂದು ಹಬ್ಬವನ್ನು ಆಚರಿಸಲಾಯಿತು. ಈ ಹಬ್ಬದ ಹೆಸರು 'ಸ್ನೇಹಮಿಲನ'. ಈ ಹಬ್ಬದಲ್ಲಿ ಭಾಗವಹಿಸಿದವರು ಟ್ರಸ್ಟಿನ ದಾನಿಗಳು, ಅಭಿಮಾನಿಗಳು ಮತ್ತು ಮಿತ್ರರು ಹಾಗೂ ಸಹೋದರ ಖಾದಿ ಸಂಸ್ಥೆಗಳಾದ ಕರ್ನಾಟಕ ಸರ್ವೋದಯ ಸಂಘ ಮತ್ತು ಹೊಳೆ ನರಸೀಪುರ ಖಾದಿ ಗ್ರಾಮೋದ್ಯೋಗ ಸಹಕಾರ ಸಂಘದ ಹಿರಿಯ ಕಾರ್ಯಕರ್ತರು. ವಿಶೇಷವಾಗಿ ಭಾಗವಹಿಸಿದ್ದವರು ಟ್ರಸ್ಟಿನ ಕರುಣಾಗೃಹದ ಹಳೆಯ ವಿದ್ಯಾರ್ಥಿಗಳು ಅಲ್ಲದೆ 'ಕಸ್ತೂರ ಬಾ ಸಂಕ್ಷಿಪ್ತ ಶಿಕ್ಷಣ ಶಾಲೆ'ಯ ಪ್ರಯೋಜನ ಪಡೆದ ವಿದ್ಯಾರ್ಥಿನಿಯರು. ಇಡೀ ಕಾರ್ಯಕ್ರಮ ಅತ್ಯಂತ ಸರಳವಾಗಿ ನಡೆಯಿತು. ವೇದಿಕೆಯಿಲ್ಲ, ಶಾಮಿಯಾನ ಇಲ್ಲ, ಬಾಡಿಗೆಯ ಧ್ವನಿವರ್ಧಕವಿಲ್ಲ, ಯಾವುದೇ ರಾಜಕಾರಣಿಯಿಲ್ಲ ಮತ್ತು ಸರ್ಕಾರಿ ಅಧಿಕಾರಿಯಿಲ್ಲ, ಪತ್ರಿಕಾ ಮಾಧ್ಯಮದವರೂ ಇಲ್ಲ, ಪುಸ್ತಕ ಬಿಡುಗಡೆಯೂ ಇಲ್ಲ, ದೀರ್ಘವಾದ ಭಾಷಣಗಳಿಲ್ಲ. ಕೇಂದ್ರದಲ್ಲಿರುವ ಪ್ರಾಚೀನ ಆಂಜನೇಯ ದೇವಸ್ಥಾನದ ಪುಟ್ಟ ಜಗುಲಿಯ ಮೇಲೆ ಇಡಲಾಗಿದ್ದ ಕುರ್ಚಿಗಳೇ ವೇದಿಕೆ. ದೇವಸ್ಥಾನದ ಮುಂದಿರುವ ವಿಶಾಲ ಮರದ ನೆರಳಿನಲ್ಲಿ ಎಲ್ಲರೂ ಕುಳಿತುಕೊಂಡಿದ್ದರು. ತಂಪಾದ ಗಾಳಿ ಬೀಸುತ್ತಿತ್ತು. ಆಂಜನೇಯನ ವಿಗ್ರಹವನ್ನು ಅಂದವಾಗಿ ಅಲಂಕರಿಸಲಾಗಿತ್ತು. ಮಾರ್ಚ್ ೨೭ ಭಾನುವಾರದಂದು ಬೆಳಿಗ್ಗೆ ೧೧ ಗಂಟೆಗೆ ಪ್ರಾರಂಭವಾದ ಕಾರ್ಯಕ್ರಮ ಅದೇ ದಿನ ಮಧ್ಯಾಹ್ನ ೪ ಗಂಟೆಗೆ ಮುಕ್ತಾಯವಾಯಿತು. ಐವತ್ತು ವರ್ಷದ ಇತಿಹಾಸವಿರುವ ಸೇವಾ ಸಂಸ್ಥೆಯ ಕಾರ್ಯಕ್ರಮ ಕೇವಲ ಐದು ಗಂಟೆ ಅವಧಿಯಲ್ಲಿ ಮುಗಿಯಿತು. ಊಟೋಪಚಾರ ಸರಳವಾಗಿತ್ತು. ಮುಖ್ಯವಾಗಿ ಇದ್ದದ್ದು ಆತ್ಮೀಯತೆಯ ವಾತಾವರಣ, ವಾತ್ಸಲ್ಯ ಪೂರ್ಣವಾದ ಮಾತುಕಥೆಗಳು, ಅಂತಃಕರಣ ಪ್ರಚೋದಿಸುವ ನೆನಪುಗಳು. ಖಾದಿ ನೇಯ್ಗೆ ಕೇಂದ್ರದ ಜಗುಲಿಯ ಮೇಲೆ ಐವತ್ತು ವರ್ಷಗಳ ಅವಧಿಯಲ್ಲಿ ಟ್ರಸ್ಟ್ ನಡೆದು ಬಂದ ಹೆಜ್ಜೆ ಗುರುತುಗಳ ಸಾಕ್ಷಿರೂಪದಂತಿದ್ದ ಛಾಯಾಚಿತ್ರಗಳ ಪ್ರದರ್ಶನ ಎಲ್ಲರ ಗಮನ ಸೆಳೆಯಿತು ಮತ್ತು ಹಿಂದಿನ ಸಿಹಿ-ಕಹಿ ನೆನಪುಗಳು ಮತ್ತೆ ಮರುಕಳಿಸುವಂತೆ ಮಾಡಿದವು. ಕಾರ್ಯಕ್ರಮದ ಪ್ರಾರಂಭದಲ್ಲಿ ಟ್ರಸ್ಟಿನ ಆಹ್ವಾನಿತ ಸ್ಥಳೀಯ ಯುವ ಧರ್ಮದರ್ಶಿಯವರಾದ ಶ್ರೀ ಕೆ.ಶ್ರೀನಿವಾಸ್‌ರವರು ಸುಶ್ರಾವ್ಯ ಮತ್ತು ರಾಗಭರಿತ ಪ್ರಾರ್ಥನೆಯನ್ನು ಮಾಡಿದರು. ಅದಾದ ನಂತರ ಜನಪದ ಸೇವಾ ಟ್ರಸ್ಟ್‌ನ ಸಂಸ್ಥಾಪಕರು ಮತ್ತು ಗೌರವ ಅಧ್ಯಕ್ಷರು ಆಗಿರುವ ಶ್ರೀ ಸುರೇಂದ್ರ ಕೌಲಗಿಯವರು ಟ್ರಸ್ಟ್ ನಡೆದು ಬಂದ ದಾರಿ ಹಾಗೂ ಹೊಸ

ಜೀವನ ದಾರಿ ಕೇಂದ್ರದ ವೈಚಾರಿಕ ಆಯಾಮಗಳನ್ನು ತಿಳಿಸಿದರು. ಬೇರೆ ಬೇರೆ ಕಾಲ ಘಟ್ಟದಲ್ಲಿ ವಿವಿಧ ದಾನಿಗಳು ಮಾಡಿದ ಧನ ಸಹಾಯವನ್ನು ನೆನೆದರು. ಹಿಂದಿನ ಎಲ್ಲ ಧರ್ಮದರ್ಶಿಗಳ ಸೇವೆಯನ್ನು ಸ್ಮರಿಸಿದರು. ಟ್ರಸ್ಟಿನ ನೂರಾರು ದಾನಿಗಳ ಪ್ರತಿನಿಧಿ ಎಂಬಂತೆ ತುಂಬ ಹಳೆಯ ದಾನಿಯಾದ ಶ್ರೀಮತಿ ಜನಿರಾವ್ ಬಂದಿದ್ದರು. ಕಾರ್ಯಕ್ರಮದಲ್ಲಿ ಸುಮಾರು ೩೦೦ ಜನರು ಭಾಗವಹಿಸಿದ್ದರು. ಟ್ರಸ್ಟಿನ ಮುಂದಿನ ಬೆಳವಣಿಗೆ ಯಾವ ರೀತಿ ಇರಬೇಕೆಂಬುದರ ಬಗ್ಗೆ ಸಾಮಾನ್ಯ ರೂಪುರೇಷೆಯುಳ್ಳ ಪ್ರಬಂಧವನ್ನು ಟ್ರಸ್ಟಿನ ಕಾರ್ಯದರ್ಶಿ ಸಂತೋಷ್ ಕೌಲಗಿ ಸಭೆಯ ಮುಂದೆ ಮಂಡಿಸಿದರು. ಆ ಪ್ರಬಂಧವನ್ನು ಕುರಿತು ಬಿ.ಎಸ್.ಶ್ರೀಧರ್, ಅ.ನ.ರವಿಕುಮಾರ್ ಮತ್ತು ಗಣನಾಥ್ ಮಾತನಾಡಿದರು. ಇದಕ್ಕೂ ಮುನ್ನ ಕರುಣಾಗೃಹದ ಹಳೆಯ ವಿದ್ಯಾರ್ಥಿಗಳು ಟ್ರಸ್ಟಿನಲ್ಲಿಯ ತಮ್ಮ ವ್ಯಕ್ತಿತ್ವದ ವಿಕಾಸ ಕುರಿತು ಹೃದಯಂಗಮವಾಗಿ ಮಾತನಾಡಿದರು. ಅದೇ ರೀತಿ ಹಳೆಯ ವಿದ್ಯಾರ್ಥಿಗಳು ಮಾತನಾಡಿದರು. ಅವರಲ್ಲಿ ಕೆಲವು ಮಾತುಗಳು ಹಾಸ್ಯ ಭರಿತವಾಗಿದ್ದರೆ ಇನ್ನು ಕೆಲವು ಹೃದಯಸ್ಪರ್ಶಿಯಾಗಿದ್ದವು. ಕಾರ್ಯಕ್ರಮದ ಮಧ್ಯೆ ಆಗಾಗ್ಗೆ ಕೆಲವರು ತುಂಬ ಒಳ್ಳೆ ಗುಣಮಟ್ಟದ ಹಾಡುಗಳನ್ನು ಹೇಳಿದರು. ಅವರಲ್ಲಿ ಪ್ರಮುಖರಾದವರು ಕರುಣಾಗೃಹದ ಹಳೆಯ ವಿದ್ಯಾರ್ಥಿ ನರಸಿಂಹ, ಉಷಾ ಅಥಣೀಕರ್ ಮತ್ತು ಬರ್ಟಿ. ಇಡೀ ಹಬ್ಬದ ಖರ್ಚು ಸುಮಾರು ಮೂವತ್ತು ಸಾವಿರ ರುಪಾಯಿ. ಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದ ಅಭಿಮಾನಿಗಳು ಮತ್ತು ಹಳೆಯ ವಿದ್ಯಾರ್ಥಿಗಳು ದಾನವಾಗಿ ಕೊಟ್ಟ ಹಣ ಹಬ್ಬದ ಖರ್ಚಿಗೆ ಸಮವಾಯಿತು. ಟ್ರಸ್ಟಿನಿಂದ ಹಣವನ್ನು ಖರ್ಚುಮಾಡಲಿಲ್ಲ. ಹೀಗೆ ಜನಾಧಾರಿತವಾಗಿ ನಡೆದುಕೊಂಡ ಟ್ರಸ್ಟ್ ಜನಾಧಾರಿತವಾಗಿ ತನ್ನ ೫೦ನೇ ವರ್ಷದ ಸೇವಾ ಜೀವನದ ಉತ್ಸವವನ್ನು ಆಚರಿಸಿತು. ಈ ಎಲ್ಲ ಕಾರ್ಯಕ್ರಮಕ್ಕೆ ಸಾಕ್ಷೀಭೂತವಾಗಿ ವೇದಿಕೆ ಮೇಲೆ ಕುಳಿತಿದ್ದವರು ಮಂಡ್ಯ ಜಿಲ್ಲೆಯ ಸಾಹಿತಿ ಮತ್ತು ವಿಚಾರವಾದಿ ಪ್ರೊ. ಎಚ್.ಎಲ್.ಕೇಶವಮೂರ್ತಿ ಮತ್ತು ಸರ್ವೋದಯ ನಾಯಕರಾದ ಶ್ರೀ ಎಚ್.ಎಸ್.ದೊರೆಸ್ವಾಮಿ. ಟ್ರಸ್ಟಿನ ಬೆಳವಣಿಗೆಯಲ್ಲಿ ಗಿರಿಜಾ ಕೌಲಗಿಯವರ ಹಿರಿದಾದ ಪಾತ್ರವನ್ನು ದೊರೆಸ್ವಾಮಿಯವರು ಕೊಂಡಾಡಿದರು ಮತ್ತು ಸಭೆಯಲ್ಲಿ ಉಪಸ್ಥಿತರಿದ್ದ ಮಂಡ್ಯ ನಗರದ ಟ್ರಸ್ಟಿನ ಹಿತೈಷಿ ಡಾ॥ ಅರ್ಜುನಪುರಿ ಅಪ್ಪಾಜಿಗೌಡರು ಹಾಜರಿದ್ದರು. ಹಬ್ಬದ ಅತ್ಯಂತ ಮಾರ್ಮಿಕ ಘಟ್ಟ ಆದಿತ್ಯ ಎಂಬ ಆರು ತಿಂಗಳ ಗಂಡು ಮಗುವನ್ನು ದತ್ತು ಕೊಟ್ಟದ್ದು. ಈ ಮಗುವನ್ನು ದತ್ತು ಸ್ವೀಕರಿಸಿದ ಕೃಷ್ಣಮೂರ್ತಿ ದಂಪತಿಗಳು ಬಂದಿದ್ದರು. ಆದಿತ್ಯನನ್ನು ಜನಿರಾವ್ ಸಾಂಕೇತಿಕವಾಗಿ ಅವರ ಉಡಿಯಲ್ಲಿ ಹಾಕಿದರು. ಸಮಾರಂಭದ ಈ ಹಬ್ಬದ ವ್ಯವಸ್ಥೆಗಾಗಿ ಧರ್ಮದರ್ಶಿ ಡಾ॥ ಮನೋಹರ್, ಅವರ ಸ್ನೇಹಿತರು ಮತ್ತು ಅವರ ಮನೆಯವರು ಬಹಳಷ್ಟು ಪರಿಶ್ರಮಿಸಿದರು. ಸಮಾರಂಭದ ಪ್ರಯುಕ್ತ ಟ್ರಸ್ಟಿನ ಉತ್ಪಾದನೆಗಳನ್ನು ಮಾರಾಟಕ್ಕೆ ಇಡಲಾಗಿತ್ತು. ಸುಮಾರು ಇಪ್ಪತ್ತು ಸಾವಿರ ರುಪಾಯಿಗಳಷ್ಟು ಪದಾರ್ಥಗಳನ್ನು ಆತ್ಮೀಯರು ಖರೀದಿಸಿದರು. ಟ್ರಸ್ಟಿನ ಧರ್ಮದರ್ಶಿ ಶ್ರೀ ಡಿ.ಪ್ರಭಾಕರ್ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದ ನಿರ್ವಹಣೆಯನ್ನು ಸುಘೋಷ ಕೌಲಗಿ ನೆರವೇರಿಸಿದರು. ದೀರ್ಘಕಾಲ ನೆನಪಿಡಬಹುದಾದ ಮಧುರ ಸ್ಮರಣೆಗಳೊಂದಿಗೆ ಬಂದ ಅತಿಥಿಗಳೆಲ್ಲ ನಿರ್ಗಮಿಸಿದರು.

(ಮುಂದುವರಿಯುವುದು...)

ಸರ್ವೋದಯ ಆಂದೋಲನದ ಮುನ್ನಡೆ

ಗಾಂಧೀ ಮಾರ್ಗದ ಸಾಮಾಜಿಕ ಸಕ್ರಿಯ ಕಾರ್ಯಕರ್ತರಾದ ಅಣ್ಣಾ ಹಜಾರೆಯವರು ಭ್ರಷ್ಟಾಚಾರದ ನಿರ್ಮೂಲನಕ್ಕಾಗಿ ಮೊದಲ ಹೆಜ್ಜೆಯಾಗಿ ಲೋಕಪಾಲ್ ಮಸೂದೆಯನ್ನು ಜಾರಿಗೆ ತರಬೇಕೆಂದು ಆಗ್ರಹಿಸಿ ಸುಮಾರು ೬೭ ಗಂಟೆಗಳ ಕಾಲ ಉಪವಾಸ ಮಾಡಿದರು. ಅವರ ಉದ್ದೇಶ ಆಮರಣಾ ಉಪವಾಸವಾಗಿತ್ತು. ಕೇಂದ್ರ ಸರ್ಕಾರವು ಅವರ ಬೇಡಿಕೆಯನ್ನು ಮನ್ನಿಸಿದ್ದರಿಂದ ಅವರ ಉಪವಾಸ ನಿಲ್ಲಿಸಿದರು. ಅಣ್ಣಾ ಹಜಾರೆಯವರ ಉಪವಾಸಕ್ಕೆ ಇಡೀ ಭಾರತ ದೇಶ ಬೆಂಬಲವಾಗಿ ನಿಂತಿತು. ಅನೇಕರು ಅದನ್ನು ಎರಡನೆಯ ಸ್ವಾತಂತ್ರ್ಯ ಸಂಗ್ರಾಮವೆಂದು ಬಣ್ಣಿಸಿದರು. ಇನ್ನು ಕೆಲವರು ಜಯಪ್ರಕಾಶ ನಾರಾಯಣರ ಸಂಪೂರ್ಣಕ್ರಾಂತಿಯನ್ನು ಸ್ಮರಿಸಿಕೊಂಡರು. ಗಾಂಧೀಯವರ ಸತ್ಯಾಗ್ರಹದ ಅಸ್ತ್ರಕ್ಕೆ ಸ್ವತಂತ್ರ ಭಾರತದಲ್ಲಿ ಮಹತ್ವದ ಸ್ಥಾನ ದೊರೆತಂತಾಯಿತು. ಸಾಮಾನ್ಯ ಭಾರತೀಯರಲ್ಲೂ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಅಗತ್ಯವಿದೆ ಎಂಬ ಪ್ರಬಲವಾದ ಸಂಕಲ್ಪ ಮೂಡಿಸಿತು. ಗಾಂಧೀಜಿಯವರ ವಿಚಾರದಲ್ಲಿ ಆಸ್ಥೆ ಮೂಡಿಸಿತು. ದೇಶದಲ್ಲಿ ಸರ್ವೋದಯ ಆಂದೋಲನದಲ್ಲಿ ತೊಡಗಿರುವ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ಮೂಡಿಸಿತು. ಅಣ್ಣಾರವರ ಸತ್ಯಾಗ್ರಹದ ಕಾಲದಲ್ಲಿ ಜನ ಜಾಗೃತಿಯ ಕೆಲಸದಲ್ಲಿ ಸರ್ವೋದಯ ಕಾರ್ಯಕರ್ತರು ತಮ್ಮನ್ನು ಗುರುತಿಸಿಕೊಂಡರು.

ಕರ್ನಾಟಕ ಸರ್ವೋದಯ ಮಂಡಲಿಯ ಕೋರಿಕೆಯ ಮೇರೆಗೆ ಈ ಕೆಳಗೆ ಕಾಣಿಸಿದ ಮಹನೀಯರು ತಲಾ ಒಂದು ಸಾವಿರ ರೂಪಾಯಿ ಕೊಡುವುದರ ಮೂಲಕ ಸರ್ವೋದಯ ಆಂದೋಲನದ ಪೋಷಕರಾಗಿದ್ದಾರೆ.

೧) ಜನಪದ ಸೇವಾ ಟ್ರಸ್ಟ್ ಮೇಲುಕೋಟೆ
೨) ಶ್ರೀ ಪಿ.ಟಿ. ಕೃಷ್ಣ ಅಯ್ಯಂಗಾರ್, ಮೇಲುಕೋಟೆ
೩) ಉಮಾಕಾಂತ ಭಟ್ಟ, ಮೇಲುಕೋಟೆ
೪) ಡಾ॥ ತಿಮ್ಮಯ್ಯ, ರಾಮನಗರ
೫) ಡಾ॥ ಮಂಜುನಾಥ್ ಸಿ.ಆರ್, ಮಂಡ್ಯ
೬) ನಾರಾಯಣ ಅಯ್ಯಂಗಾರ್, ಮೇಲುಕೋಟೆ
೭) ಕರ್ನಾಟಕ ಸರ್ವೋದಯ ಸಂಘ, ಬೆಂಗಳೂರು
೮) ಶ್ರೀಮತಿ ಲಕ್ಷ್ಮೀ ಸತ್ಯವ್ರತ, ಬೆಂಗಳೂರು
೯) ಎ.ಎನ್. ಮಾಯಣ್ಣೇಗೌಡರು, ಕ್ಯಾತನಹಳ್ಳಿ

ಸರ್ವೋದಯ ಆಂದೋಲನದಲ್ಲಿ ಆಸಕ್ತರಿರುವ ಗಾಂಧೀ ವಿಚಾರ ಪ್ರೇಮಿಗಳು ಸಹ ಇದೇ ರೀತಿ ಪೋಷಕರಾಗಬೇಕೆಂದು ಕರ್ನಾಟಕ ಸರ್ವೋದಯ

ಮಂಡಲಿಯು ಕೋರುತ್ತದೆ. ಪೋಷಕರಾದವರಿಗೆ ಸರ್ವೋದಯ ಆಂದೋಲನದ ಎಲ್ಲ ಮಾಹಿತಿಗಳನ್ನು ಆಗಾಗ್ಗೆ ತಿಳಿಸಲಾಗುವುದು. ಜಿಲ್ಲಾಮಟ್ಟ ಮತ್ತು ರಾಜ್ಯಮಟ್ಟದ ಸಂಘಟನೆಗೆ ಪದಾಧಿಕಾರಿಯಾಗಬಹುದು. ರಾಜ್ಯ ಸರ್ವೋದಯ ಮಂಡಲಿಗೆ ಸಲಹೆ ಕೊಡಬಹುದು. ಪೋಷಕತ್ವದ ಹಣವನ್ನು ಕಾರ್ಯದರ್ಶಿ, ಸರ್ವೋದಯ ಮಂಡಲ, ವಲ್ಲಭ ನಿಕೇತನ, ಕುಮಾರಪಾರ್ಕ್ ಪೂರ್ವ, ಬೆಂಗಳೂರು-೦೧. ಈ ವಿಳಾಸಕ್ಕೆ ಎಂ.ಒ ಮೂಲಕ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಖಾತೆ ನಂಬರ್ ೬೪೦೧೧೯೭೬೪೫೩೦ಗೆ ಇ.ಎಂ.ಒ ಮೂಲಕ ಕಳುಹಿಸಬಹುದು.

ಕರ್ನಾಟಕ ಸರ್ವೋದಯ ಮಂಡಲಿಗೆ ಮಂಗಳೂರಿನಲ್ಲಿಯ ಹಿರಿಯ ಸರ್ವೋದಯ ಕಾರ್ಯಕರ್ತರಾದ ನಾಮದೇವ ಶೆಣ್ಯೈ, ತುಮಕೂರಿನ ಬಾಪೂಜಿ ವಿದ್ಯಾಸಂಸ್ಥೆಯ ಎಂ.ಬಸವಯ್ಯ ಮತ್ತು ಬೆಂಗಳೂರಿನ ಗಿರಿಜಾ ಹೆಗಡೆಯವರನ್ನು ಆಹ್ವಾನಿತ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಸನ್ಮಾನ್ಯರಿಂದ...

ಮುಂದೆ ನಡೆಯುವ ಖಾದಿ ಸಭೆಗಳಲ್ಲಿ ದಯಮಾಡಿ ಖಾದಿ ಕಾರ್ಯಕರ್ತರಿಗೆ, ಖಾದಿ ವಸ್ತ್ರ ನೇಯುವವರಿಗೆ, ಖಾದಿ ಭಂಡಾರದಲ್ಲಿ ಕೆಲಸ ಮಾಡುವ ಕಾರ್ಯಕರ್ತರಿಗೆ ತುಂಬ ಕಡಿಮೆ ಸಂಬಳ ನೀಡುತ್ತಿರುವುದರಿಂದ ಖಾದಿ ಆಯೋಗದವರಿಂದ ಖಾಸಗಿ ಕ್ಷೇತ್ರಗಳಲ್ಲಿ ಯಾವ ವೇತನ ದೊರೆಯುತ್ತದೊ ಆ ರೀತಿ ಹೆಚ್ಚಿಸಲು ತಾವು ಪ್ರಯತ್ನ ಮಾಡಬೇಕಾಗಿ ವಿನಂತಿ.

– ಸಿ.ಜಿ. ಸಿದ್ದಯ್ಯ, ಬೆಂಗಳೂರು

ಸಂತಾಪ

ಮೈಸೂರಿನ ಅತ್ಯಂತ ಹಿರಿಯ ನಾಗರೀಕರಲ್ಲಿ ಒಬ್ಬರಾಗಿದ್ದ ಕೌಲಗಿ ಶೇಷಾಚಾರ್ ತಮ್ಮ ೯೯ನೇ ವಯಸ್ಸಿನಲ್ಲಿ ಮಾರ್ಚ್ ೨೭ ರಂದು ವೈಕುಂಠವಾಸಿಯಾದರು. ಶೇಷಾಚಾರ್ಯರು ಉಡುಪಿಯಲ್ಲಿಯ ಶ್ರೀ ಮನ್ಮಧ್ವ ಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲೆಯ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು. ೧೯೬೦ ರಲ್ಲಿ ಮಣಿಪಾಲದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ಹಿಂದೂ ಪತ್ರಿಕೆ ಮತ್ತು ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿದ್ದರು. ಮೈಸೂರು ತಾತಯ್ಯ (ವೆಂಕಟಕೃಷಯ್ಯ) ಅವರ ನೇರ ಶಿಷ್ಯರಾಗಿ ಶಾಲಾದಿನಗಳನ್ನು ಪ್ರಾರಂಭಿಸಿದ್ದರು. ಹೊಸಕೆರೆ ಚಿದಂಬರಯ್ಯನವರ ಶಿಷ್ಯತ್ವ ದೊರೆತಿತ್ತು. ಗಾಂಧೀಜಿಯವರಿಂದ ಹಿಂದಿ ಪರೀಕ್ಷೆ ಪ್ರಮಾಣ ಪತ್ರವನ್ನು ಸ್ವೀಕರಿಸಿದರು. ಜನಪದ ವಿಚಾರ ಶ್ರೀ ಶೇಷಾಚಾರ್ಯರ ಆತ್ಮಕ್ಕೆ ಉತ್ತಮ ಲೋಕ ಪ್ರಾಪ್ತಿಯಾಗಲೆಂದು ಹಾರೈಸುತ್ತದೆ.

ಖಾದಿ ವಿಚಾರ

ಗಾಂಧೀಜಿಗೆ ಚರಖಾದಲ್ಲಿ ಭಗವಂತನ ದರ್ಶನವಾಗುತ್ತಿತು. ಅವರು ಅದನ್ನು ಮೋಕ್ಷದ ದ್ವಾರವೆಂದು ತಿಳಿದಿದ್ದರು. ಈ ಬಗ್ಗೆ ಗಾಂಧೀಜಿ ಹೀಗೆ ಹೇಳುತ್ತಾರೆ: ಕೆಲವು ಜನರು ಇದನ್ನು ಕೇಳಿ ನಗುತ್ತಾರೆಂಬುದನ್ನು ಅರಿತಿದ್ದೇನೆ. ಮನುಷ್ಯರು ಮಣ್ಣಿನ ಉಂಡೆ ಮಾಡಿ ಅದನ್ನು ಪಾರ್ಥಿವೇಶ್ವರ, ಚಿಂತಾಮಣಿ ಎಂದೆಲ್ಲಾ ಹೆಸರಿಸುತ್ತಾರೆ ಮತ್ತು ಅದರ ಮೇಲೆ ಧ್ಯಾನ ಏಕಾಗ್ರಗೊಳಿಸಿ ತನ್ಮೂಲಕ ಪರಮೇಶ್ವರನ ದರ್ಶನದ ಶುಭ ಆಶೆಯನ್ನು ಇಟ್ಟುಕೊಳ್ಳುತ್ತಾರೆ. ಆ ಮೂರ್ತಿಯ ಮಹಿಮೆಯನ್ನು ತಿಳಿಯದೆ ಇರುವವರು ಅದನ್ನು ಕೂಡ ನಿಂದಿಸುತ್ತಾರೆ. ಹಾಗೆಂದು ಆತ್ಮದರ್ಶನಕ್ಕಾಗಿ ಹುಚ್ಚನಾಗಿರುವ ಆ ಮನುಷ್ಯ ಧ್ಯಾನಿಸುವುದನ್ನು ಬಿಡುತ್ತಾನೆಯೆ? ಇಲ್ಲ; ಅಷ್ಟೇ ಅಲ್ಲ ಅವನು ಖಂಡಿತವಾಗಿ ಈಶ್ವರನ ಸಾಕ್ಷಾತ್ಕಾರ ಮಾಡಿಕೊಳ್ಳುವನು. ನಿಂದಿಸುವವನು ಹಾಗೇ ಉಳಿಯುವನು. ಅದೇ ರೀತಿ ಒಂದು ವೇಳೆ ಚರಖಾದ ಬಗ್ಗೆ ನನ್ನ ಭಾವನೆ ಶುದ್ಧವಿರುವುದೇ ಆದರೆ ಚರಖಾ ನನಗೆ ಖಂಡಿತವಾಗಿಯೂ ಮೋಕ್ಷದಾಯಿಯೆಂದು ಸಿದ್ಧವಾಗುತ್ತದೆ. ರಾಮನಾಮವನ್ನು ಕೇಳುತ್ತಲೇ ಹಿಂದೂ ಆಗಿರುವವನ ಕಿವಿ ಅದರ ಕಡೆಗೆ ಆಕರ್ಷಿತವಾಗುತ್ತವೆ. ಎಲ್ಲಿಯವರೆಗೆ ರಾಮನಾಮ ನಡೆಯುತ್ತಿರುತ್ತದೊ ಅಲ್ಲಿಯವರೆಗೆ ಅವನು ಕಡ್ಡಾಯವಾಗಿ ವಿಕಾರ ರಹಿತನಾಗಿರುವನು. ಒಂದು ವೇಳೆ ಈ ರಾಮನಾಮದ ಪ್ರಭಾವ ಅನ್ಯ ಧರ್ಮವಲಂಬಿಗಳ ಮೇಲೆ ಆಗದೆ ಹೋದರೆ ಏನು?

'ಅಲ್ಲಾ ಹೊ ಅಕ್ಬರ್'ದ ಘೋಷಣೆ ಕೇಳಿ ಹಿಂದೂಗಳ ಮೇಲೆ ಅದರ ಪ್ರಭಾವ ಆಗದೆ ಇರಬಹುದು, ಪರಂತು ಮುಸಲ್ಮಾನರು ಅದನ್ನು ಕೇಳಿ ಕಡ್ಡಾಯವಾಗಿ ಜಾಗೃತನಾಗುವನು. ಭಾವುಕರಾದ ಇಂಗ್ಲೀಷರು 'ಗಾಡ್' ಎಂಬ ಹೆಸರನ್ನು ಉಚ್ಚರಿಸುತ್ತಲೇ ತಮ್ಮ ಕ್ರೋಧವನ್ನು ಅದುಮಿಟ್ಟು ಸ್ವಲ್ಪ ಸಮಯಕ್ಕಾದರೂ ಸರಿಯೇ ಕಡ್ಡಾವಾಗಿ ವಿಕಾರಗಳನ್ನು ತ್ಯಾಗ ಮಾಡುತ್ತಾರೆ. ಏಕೆಂದರೆ ಯಾರದು ಯಾವ ರೀತಿ ಭಾವನೆ ಇರುತ್ತದೋ ಅವನಿಗೆ ಫಲ ಕೂಡ ಅದೇ ರೀತಿ ದೊರೆಯುತ್ತದೆ.

ಇದೇ ನ್ಯಾಯಕ್ಕನುಸಾರವಾಗಿ ಚರಖಾದಲ್ಲಿ ಏನಿರದಿದ್ದರೂ ನಾನು ಅದರಲ್ಲಿ ಮನಸ್ಸೋ ಇಚ್ಛೆ ಶಕ್ತಿಗಳನ್ನು ಕಂಡಿದ್ದೇನೆ. ಆದ್ದರಿಂದ ಅದು ನನ್ನ ಮಟ್ಟಿಗೆ ಕಾಮಧೇನು ರೂಪವೆ ಆಗಿದೆ, ಹಿಂದೂಸ್ತಾನದ ಬಡ ಜನರು ಈಶ್ವರನ ಮೇಲೆ ಏಕೆ ವಿಶ್ವಾಸವಿಡಲು ಪ್ರಾರಂಭಿಸಿದರು. ಯಾರ ಹೊಟ್ಟೆ ಹಸಿದಿದೆಯೋ ಮತ್ತು ಯಾವುದು ಅವನ ಹಸಿವೆಯನ್ನು ಇಂಗಿಸುತ್ತದೊ ಅಂಥವನಿಗೆ ಹೊಟ್ಟೆಯೇ ಪರಮೇಶ್ವರ. ಯಾವ ಮನುಷ್ಯ ಅವನಿಗೆ ಅನ್ನ ಸಂಪಾದನೆಯ ಸಾಧನ ಕೊಡುತ್ತಾನೋ ಆತನೇ ಅನ್ನದಾತ ಆಗುತ್ತಾನೆ ಮತ್ತು ಅವನಲ್ಲಿ ಬಹುಶಃ ಈಶ್ವರನ ದರ್ಶನ ಮಾಡುವನು. ಈ ಹಸಿದ ಜನರಿಗೆ ಅವರ ಕೈ ಕಾಲು ಸ್ವಸ್ಥವಾಗಿದ್ದರೂ ಅವರಿಗೆ ಕೇವಲ ಅನ್ನದಾನ ಮಾಡುವುದು ಸ್ವಯಂ ದೋಷದಲ್ಲಿ ಲಿಪ್ತನಾಗುತ್ತಾನೆ. ಮತ್ತು ಅವರನ್ನು ಕೂಡ

ದೋಷಿಗಳನ್ನಾಗಿ ಮಾಡುವುದಕ್ಕೆ ಸಮನಾಗಿದೆ. ಅವರಿಗೆ ಏನಾದರೂ ಕೂಲಿ ಸಿಗಬೇಕು. ಕೋಟ್ಯಾವಧಿ ಕೂಲಿ ಕೇವಲ ಚರಖಾ ಮಾತ್ರ ಕೊಡಲು ಸಾಧ್ಯ. ಆ ಚರಖಾಗಳ ಮೇಲೆ ಅವರ ಶ್ರದ್ಧೆ ಭಾಷಣ ಮೂಲಕವಲ್ಲ. ಬದಲಿಗೆ ಸ್ವಯಂ ನೂಲು ತೆಗೆಯುವ ಮೂಲಕ ಕೊಡಿಸಬಲ್ಲೆ. ಆದ್ದರಿಂದ ನಾನು ನೂಲುತೆಗೆಯುವ ಕ್ರಿಯೆಯನ್ನು ತಪಶ್ಚರ್ಯೆ ಅಥವಾ ಯಜ್ಞವೆಂದು ಕರೆಯುತ್ತೇನೆ. ಏಕೆಂದರೆ ಎಲ್ಲಿ ಬಡವರ ಬಗ್ಗೆ ಶುದ್ಧ ಚಿಂತನೆ ಮಾಡಲಾಗುತ್ತೊ ಅಲ್ಲಿ ಈಶ್ವರ ಇದ್ದಾನೆಂದು ನಾನು ತಿಳಿಯುತ್ತೇನೆ. ಆದ್ದರಿಂದ ದಾರದ ಪ್ರತಿಯೊಂದು ಎಳೆಯಲ್ಲಿ ಈಶ್ವರನ ದರ್ಶನ ಮಾಡಬಲ್ಲೆ. ಎಂದು ಗಾಂಧೀಜಿ ಹೇಳಿದ್ದಾರೆ.

ಇಲ್ಲಿ ಗಾಂಧೀಜಿ ಧರ್ಮ ಮತ್ತು ಆಧ್ಯಾತ್ಮದ ಪಾರಂಪರಿಕ ಪರಿಭಾಷೆಯಿಂದ ಭಿನ್ನವಾದ ರೀತಿಯಲ್ಲಿ ಖಾದಿಯ ಆಧ್ಯಾತ್ಮಿಕತೆಯ ಪರಿಭಾಷೆ ಮಾಡುತ್ತಾರೆ. ಯಾವ ರೀತಿ ರಾಮ ನಾಮದ ಭಜನೆಕೇಳಿ ಅಥವಾ 'ಅಲ್ಲಾ ಅಕ್ಬರ್' ಪ್ರಾರ್ಥನೆ ಕೇಳಿ ಮನಸ್ಸಿನಲ್ಲಿ ಶಾಂತಿ ಮತ್ತು ಶುದ್ಧತೆಯ ಭಾವನೆ ಹುಟ್ಟುತ್ತದೋ ಅದೇ ರೀತಿ ಚರಖಾದ ನಾದವನ್ನು ಕೇಳಿ ಶಾಂತಿ ಅನಿಸುತ್ತದೆ. ಅಲ್ಲದೇ ಚರಖಾದಿಂದ ಸಾವಿರಾರು ಹಸಿದ ಹೊಟ್ಟೆಯನ್ನು ತುಂಬಬಹುದಾಗಿದೆ. ಆದ್ದರಿಂದ ಅವರಿಗೆ ಅನ್ನದಾತ ಅಥವಾ ಭಗವಂತನ ದರ್ಶನವಾಗುತ್ತದೆ.

ಸ್ವಾಗತ

'ಖರ' ವರ್ಷವೇ ನಿನಗೆ ಸುಸ್ವಾಗತ.
ನಿನ್ನ ಹೆಸರಕೇಳಿ ನಾವು ಅಂಜವುದಿಲ್ಲ!
ಹೆಸರಿಗೆ ಮಾತ್ರವೇ ನೀನು 'ಖರ'!
ನಾವು ಅಂಜುವುದು ಈಗಾಗಲೇ
ಇಲ್ಲಿರುವ ನರಾಧಮ ಖರರಿಗಾಗಿ!
ನರರೂಪಿನ ಹೀನ ಪಶುಗಳಿಗಾಗಿ!
ಹೊಸವರುಷವೇ
ನೀ ಬಂದು, ಈ ಖರದಿಂದ ಬಿಡಿಸು
ಲೋಕದಲ್ಲಿ ಶಾಂತಿಯನ್ನು ನೆಲೆಗೊಳಿಸು
'ಖರ'ವನ್ನಳಿಸಿ, ದಯಾಕರ ಎನಿಸು.
ನಿನಗೆ ಸುಸ್ವಾಗತ.

– ಶಾರದಾ ಜಡೆ, ಸಾಂಗಲಿ

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಜಿ.ಎಸ್.ಸುಬ್ರಮಣ್ಯ – ಮೈಸೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀಮತಿ ಪದ್ಮಾವತಮ್ಮ; ಶ್ರೀಮತಿ ಕೆ.ವಿ.ಪುಷ್ಪ

ಪ್ರೊ॥ ಎಂ.ಜಿ.ಬಸವರಾಜು; ಪ್ರೊ॥ ಬಿ.ಎ.ದೊಡ್ಡಮನಿ

ಶ್ರೀ ಎಂ.ಎಸ್.ಶಿವಶಂಕರ್; ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ – ಮೈಸೂರು

ಶ್ರೀಮತಿ ವಿ.ಸರಸ್ವತಿ; ಶ್ರೀ ಜಿ.ಟಿ.ವೀರಪ್ಪ

ಶ್ರೀ ಎಂ.ವಿ.ಧರಣೇಂದ್ರಯ್ಯ – ಮಂಡ್ಯ

ಶ್ರೀಮತಿ ಬಿ.ಎ.ಸರೋಜಮ್ಮ – ಅರಸೀಕರೆ

ಶ್ರೀ ಕೆ.ಡಿ.ಮಹೇಶ – ನಂಜನಗೂಡು

ಶ್ರೀ ಮಹೇಶ್ ದಳಪತಿ – ತಗಡೂರು

ಶ್ರೀಮತಿ ಎಸ್. ಶಕುಂತಲಮ್ಮ – ನಂಜನಗೂಡು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

– ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ–ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.